ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 38 ಪುಟ 16 | ಸೆಪ್ಟೆಂಬರ್ 18, 2016 | ರೂ. 10/-

web: www.janashakthi.co.in e-mail : js_weekly@yahoo.com

ತೇಜಸ್ವಿ ಜನ್ಮದಿನ
ಸೆಪ್ಟೆಂಬರ್ 8, 1938





ಕಾವೇರಿ ವಿವಾದ : ಶಾಶ್ವತ ಪರಿಹಾರ ಹೇಗೆ?

ಕಾಶ್ಮೀರ : ವಿಕಾಸ ಮತ್ತು ವಿಶ್ವಾಸ ಆಕಾಶದಿಂದ ಉದುರುವುದಿಲ್ಲ



ಸಾರ್ವತ್ರಿಕ ಮುಷ್ಕರ: ವಾಸ್ತವ ಮತ್ತು ಮಾಧ್ಯಮ



- ಜಿಯೊ : 2ಜಿ ಯಿಂದ 4ಜಿ ಚಮಚಾ ಬಂಡವಾಳಶಾಹಿ
- ಕೇಂದ್ರೀಕೃತ ಅಡುಗೆ ವಿರುದ್ಧ ಮುಷ್ಕರ
- ಸೆ. 13: ಕೋಮುವಾದದ ವಿರುದ್ಧ ಎಡ ಪಕ್ಷಗಳ ಸಮಾವೇಶ

ಬೇಡಿಕೆ ಪ್ರೇರಿತ ದರಗಳ ಹೆಸರಲ್ಲಿ ರೈಲುದರಗಳು ಒಂದೂವರೆ ಪಟ್ಟು
ಫ್ಲೆಕ್ಸಿ ವ್ಯವಸ್ಥೆಯ ಮುಖವಾಡ ಕಳಚಿ-ಸಿಪಿಐ(ಎಂ) ಆಗ್ರಹ

ರೈಲ್ವೆ ಇಲಾಖೆ ಸಪ್ಟಂಬರ್ 9ರಿಂದ ದುರೊಂತೊ, ಶತಾಬ್ದಿ ಮತ್ತು ರಾಜಧಾನಿ ಎಕ್ಸ್‌ಪ್ರೆಸ್ ರೈಲುಗಳಿಗೆ 'ಫ್ಲೆಕ್ಸಿ' ದರಗಳನ್ನು ವಿಧಿಸುವುದಾಗಿ ಪ್ರಕಟಿಸಿದೆ. ಅಂದರೆ ಬೇಡಿಕೆಗೆ ಅನುಗುಣವಾಗಿ ದರಗಳಲ್ಲಿ ಏರಿಕೆಯ ಪದ್ಧತಿಯನ್ನು ರೈಲ್ವೆ ಇಲಾಖೆಯಲ್ಲೂ ಆರಂಭಿಸಲಾಗಿದೆ. ಇದರ ಪ್ರಕಾರ 90ಶೇ. ಪ್ರಯಾಣಿಕರು ಈಗಿನ ದರಕ್ಕಿಂತ 50ಶೇ. ದವರೆಗೆ ಹೆಚ್ಚು ದರಗಳನ್ನು ತೆರಬೇಕಾಗುತ್ತದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಅಲ್ಲದೆ ಎಸಿ ಮೊದಲ ತರಗತಿ ಮತ್ತು ಎಕ್ಸಿಕ್ಯುಟಿವ್ ಚೇರ್‌ಗಳಿಗೆ ಈ ಏರಿಕೆ ಅನ್ವಯಿಸುವುದಿಲ್ಲ ಎಂಬುದು ಸರಕಾರದ ಶ್ರೀಮಂತ ಪರ ಪಕ್ಷಪಾತವನ್ನು ಬಿಂಬಿಸುತ್ತದೆ ಎಂದು ಟೀಕಿಸಿದೆ. ಈ ಬೇಡಿಕೆ ಪ್ರೇರಿತ ಸ್ಕೀಮು 90ಶೇ. ಪ್ರಯಾಣಿಕರಿಗೆ ದರಗಳನ್ನು ತೀವ್ರವಾಗಿ ಹೆಚ್ಚಿಸುವ ಮುಖವಾಡ ಎಂದು ಸಿಪಿಐ(ಎಂ) ವರ್ಣಿಸಿದೆ.

ಭಾರತೀಯ ರೈಲ್ವೆ ನಮ್ಮ ದೇಶವನ್ನು ಏಕೀಕೃತಗೊಳಿಸುವಲ್ಲಿ ಒಂದು ಬಹಳ ಮಹತ್ವದ ಪಾತ್ರ ವಹಿಸುತ್ತಿದೆ, ಮತ್ತು ನಮ್ಮ ಬಹುಪಾಲು ಜನರಿಗೆ ಇದು ಒಂದು ಸಾರ್ವಜನಿಕ ಸೇವೆ. ಇದನ್ನು ಸರಕಾರದ ಒಂದು ಲಾಭ ಮಾಡುವ ಉದ್ದಿಮೆಯಂತೆ ಪರಿಗಣಿಸಲಾಗದು. ಈ ಮಾದರಿಯನ್ನು ಇತರ ಸಾರ್ವಜನಿಕ ಸೇವೆಗಳಿಗೆ, ಅಂದರೆ ಸರ್ಕಾರಿ ಆಸ್ಪತ್ರೆಗಳು, ಅಗ್ನಿಶಾಮಕ ಮತ್ತು ಪೊಲೀಸ್ ಮುಂತಾದ ಇಲಾಖೆಗಳಿಗೂ ಒಂದು ನಿರ್ದಿಷ್ಟ ಕಾಲಾವಧಿಯ ಬೇಡಿಕೆಯ ಆಧಾರದಲ್ಲಿ ಅನ್ವಯಿಸಿದರೆ ಅದು ಜನತೆಗೆ ಸಾರ್ವಜನಿಕ ಸೇವೆಗಳನ್ನು ಒದಗಿಸುವ ತನ್ನ ಜವಾಬ್ದಾರಿಯನ್ನು ಸರಕಾರ ಸಂಪೂರ್ಣವಾಗಿ ಕೈಬಿಟ್ಟಂತಾಗುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಮುಂಬರುವ ದಿನಗಳಲ್ಲಿ ಈ 'ಫ್ಲೆಕ್ಸಿ ದರ'ಗಳನ್ನು ಇತರ ಎಲ್ಲ ರೈಲುಗಳಿಗೂ ವಿಸ್ತರಿಸುವ ಮುನ್ಸೂಚನೆ ಇದು ಎಂದು ಸಿಪಿಐ(ಎಂ) ಜನತೆಯನ್ನು ಎಚ್ಚರಿಸಿದೆ. ಅಂದರೆ ಈಗಾಗಲೇ ಭಾರೀ ಹಣದುಬ್ಬರ, ಕಡಿಮೆ ಸಂಬಳ, ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಇತರ ಸಂಕಟಗಳಿಗೆ ಒಳಗಾಗಿ ನರಳುತ್ತಿರುವ ಜನಗಳ ಮೇಲೆ ಮತ್ತಷ್ಟು ಹೊರೆಗಳ ಹೇರಿಕೆ.

ಇಂತಹ ಜನ-ವಿರೋಧಿ ಕ್ರಮವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ನರ್ಸ್‌ಗಳ ಬೇಡಿಕೆಗಳ ಬಗ್ಗೆ ಸರಕಾರದ ತೀವ್ರ ನಿರ್ಲಕ್ಷ್ಯ
ಪಿತೃಪ್ರಾಧಾನ್ಯತೆಯ ಮನೋಭಾವ ಬಿಡಬೇಕೆಂದು ಎಐಡಿಡಬ್ಲ್ಯುಎ ಆಗ್ರಹ



ದೀರ್ಘ ಕಾಲದಿಂದ ತಮ್ಮ ಸಮಸ್ಯೆಗಳನ್ನು ಕುರಿತಂತೆ ಸರಕಾರದ ನಿರ್ಲಕ್ಷ್ಯದಿಂದ ಬೇಸತ್ತ ಸರಕಾರೀ ನರ್ಸ್‌ಗಳು ಅಖಿಲ ಭಾರತ ಸರಕಾರೀ ನರ್ಸ್‌ಗಳ ಒಕ್ಕೂಟದ ನೇತೃತ್ವದಲ್ಲಿ ಸಪ್ಟಂಬರ್ 2ರಿಂದ ಮುಷ್ಕರ ಆರಂಭಿಸಿದ್ದರು. ಸರಕಾರ ಅವರ ಬೇಡಿಕೆಗಳನ್ನು ಪರಿಶೀಲಿಸುವ ಬದಲು ಅವರ ಮೇಲೆ ಎಸ್ಮಾ ಪ್ರಯೋಗಿಸಿದೆ, ಎಸ್ಮಾ ಜಾರಿಗೆ ಬರುವ ಮೊದಲೇ ಅವರ ಮುಖಂಡರನ್ನು ಬಂಧಿಸಿದೆ. ನಂತರ ಆರೋಗ್ಯ ಇಲಾಖೆಯ ಅಧಿಕಾರಿಗಳು ಅವರ ಬೇಡಿಕೆಗಳನ್ನು ಹಣಕಾಸು ಮಂತ್ರಾಲಯಕ್ಕೆ ಸಪ್ಟಂಬರ್ 12ರ ಒಳಗೆ ಕಳಿಸಲಾಗುವುದು ಎಂದು ಆಶ್ವಾಸನೆ ನೀಡಿರುವದರಿಂದಾಗಿ ಮುಷ್ಕರವನ್ನು ಹಿಂತೆಗೆದಕೊಳ್ಳಲಾಗಿದೆ ಎಂದು ವರದಿಯಾಗಿದೆ. ಇದೂ ಹಿಂದಿನ ಸುಳ್ಳು ಆಶ್ವಾಸನೆಗಳ ಸಾಲಿಗೆ ಸೇರುತ್ತದೋ ಎಂದು ನರ್ಸ್‌ಗಳು ಆತಂಕದಿಂದ ಕಾಯುತ್ತಿದ್ದಾರೆ

ನಮ್ಮ ಆರೋಗ್ಯಪಾಲನಾ ವ್ಯವಸ್ಥೆಯ ಒಂದು ಮುಖ್ಯ ಭಾಗವಾಗಿರುವ ನರ್ಸ್‌ಗಳ 1996ರಿಂದಲೂ ಬಾಕಿ ಉಳಿದಿರುವ ದೀರ್ಘಕಾಲೀನ ಬೇಡಿಕೆಗಳ ಬಗ್ಗೆ ಸರಕಾರದ ಈ ನಿರ್ಲಕ್ಷ್ಯವನ್ನು ಖಂಡಿಸಿರುವ ಅಖಿಲಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ನರ್ಸ್‌ಗಳ ಬೇಡಿಕೆಗಳಿಗೆ ಬೆಂಬಲ ಸೂಚಿಸಿದೆ.

ನರ್ಸ್‌ಗಳು ತಮ್ಮ ಕರ್ತವ್ಯ ನಿರ್ವಹಿಸುವಾಗ ಬಹಳಷ್ಟು ಅಪಾಯಗಳನ್ನು ಎದುರಿಸಬೇಕಾಗುತ್ತಿದೆ, ಆದರೆ ಅವರಿಗೆ ಈ ಕುರಿತ ಭತ್ಯೆಯನ್ನು ನಿರಾಕರಿಸುತ್ತಲೇ ಬರಲಾಗಿದೆ, ಅವರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಬೇಕಾಗಿದ್ದರೂ ಡಾಕ್ಟರುಗಳಿಗೆ ಕೊಡುವಂತೆ ರಾತ್ರಿ ಪಾಳಿಯ ಭತ್ಯೆಯನ್ನೂ ಕೊಡುತ್ತಿಲ್ಲ. ನರ್ಸ್‌ಸೇವೆಗಳಲ್ಲಿ ಬಹುಪಾಲು ಮಹಿಳೆಯರು, ಅವರ ಸೇವಾಭಾವದ ಕೆಲಸವನ್ನು ಮಹಿಳೆಯರ 'ಪಾಲನಾ ಕರ್ತವ್ಯ'ಎಂಬ ಪಿತೃಪ್ರಾಧಾನ್ಯತೆಯ ಮನೋಭಾವದಿಂದ ನಿರ್ಲಕ್ಷಿಸದೆ, ಅದನ್ನು ಗುರುತಿಸಿ ಅವರೊಂದಿಗೆ ನ್ಯಾಯಯುತವಾಗಿ ವರ್ತಿಸಬೇಕು, ಸಮಾನ ವೇತನ ನೀಡಬೇಕು ಎಂದು ಎಐಡಿಡಬ್ಲ್ಯುಎ ಸರಕಾರವನ್ನು ಆಗ್ರಹಿಸಿದೆ. ಲೋಕಸಭಾ ಸದಸ್ಯೆ ಪಿ.ಕೆ.ಶ್ರೀಮತಿ ಮತ್ತು ಕೇರಳದ ಆರೋಗ್ಯ ಮಂತ್ರಿಯಾಗಿರುವ ಕೆ.ಕೆ. ಶೈಲಜಾ ಎಐಡಿಡಬ್ಲ್ಯುಎ ಪರವಾಗಿ ನರ್ಸ್‌ಗಳ ಒಕ್ಕೂಟದ ಮುಖಂಡರನ್ನು ಭೇಟಿ ಮಾಡಿ ಬೆಂಬಲ ವ್ಯಕ್ತಪಡಿಸುತ್ತ, ಸರಕಾರ ಅವರ ಮುಷ್ಕರದಿಂದ ಆಸ್ಪತ್ರೆಗಳಲ್ಲಿ ಉಂಟಾಗಿರುವ ಪರಿಸ್ಥಿತಿಗಳನ್ನು ತೋರಿಸಿ ಅವರನ್ನು ಬ್ಲಾಕ್‌ಮೇಲ್ ಮಾಡುವ ಬದಲು ಅವರ ಆತಂಕಗಳನ್ನು ನಿವಾರಿಸಿ, ಸರಕಾರದ ನಿರ್ಲಕ್ಷ್ಯದಿಂದ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೋಮುವಾದ ಈಗ ಈ ದೇಶದ ಅಧಿಕೃತ ತತ್ವವೇ?
ಎನ್‌ಬಿಟಿ ಗೆ ನೂರಕ್ಕೂ ಹೆಚ್ಚು ಅಧ್ಯಯನಕಾರರ ಪ್ರಶ್ನೆ

ದೇಶದ ಪ್ರಖ್ಯಾತ ಇತಿಹಾಸಕಾರ ಪ್ರೊ. ಬಿಪನ್ ಚಂದ್ರ ಅವರ 'ಕಮ್ಯುನಲಿಸಂ- ಎ ಪ್ರೈಮರ್' ಎಂಬ ಕೋಮುವಾದ ಎಂದರೇನು ಎಂಬ ಕುರಿತ ಪ್ರಾಥಮಿಕ ಮಾಹಿತಿಗಳನ್ನು ನೀಡುವ ಇಂಗ್ಲಿಷ್ ಪುಸ್ತಕದ ಹಿಂದಿ ಅನುವಾದದ ಮರು ಮುದ್ರಣದ ಆದೇಶವನ್ನು ನ್ಯಾಶನಲ್ ಬುಕ್ ಟ್ರಸ್ಟ್ (ಎನ್‌ಬಿಟಿ) ರದ್ದು ಮಾಡಿದೆ, ಇಂಗ್ಲಿಷ್ ಮತ್ತು ಉರ್ದು ಆವೃತ್ತಿಗಳನ್ನು ಕೂಡ ಹಿಂತೆಗೆದುಕೊಳ್ಳಲಾಗುವುದು ಎಂಬ ಸುದ್ದಿ ದೇಶದ ಪ್ರಗತಿಶೀಲ ನಾಗರಿಕರು ಮತ್ತು ಅಧ್ಯಯನಕಾರರಿಗೆ ಆಘಾತ ಉಂಟು ಮಾಡಿದೆ.

ಕೋಮುವಾದ ಈಗ ದೇಶದ ಅಧಿಕೃತ ತತ್ವ, ಈ ತತ್ವದ ಅಥವ ಅದನ್ನು ಅನುಸರಿಸುವವರ ವಿರುದ್ಧ ಯಾವುದೇ ಟೀಕೆಗೆ ಅವಕಾಶವಿಲ್ಲ ಎಂದು ಈ ಮೂಲಕ ಹೇಳಿದಂತಾಗಿದೆ ಎಂದು ಈ ಕ್ರಮವನ್ನು ಖಂಡಿಸಿರುವ ನೂರಕ್ಕೂ ಹೆಚ್ಚು ಮಂದಿ ಬುದ್ಧಿಜೀವಿಗಳು, ಇತಿಹಾಸಕಾರರು ಮತ್ತು ಇತರ ಅಧ್ಯಯನಕಾರರು ಒಂದು ಜಂಟಿ ಹೇಳಿಕೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರೊ. ಬಿಪನ್ ಚಂದ್ರ ಕೇವಲ ಇತಿಹಾಸಕಾರರಷ್ಟೇ ಅಲ್ಲ, ದೇಶದ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗೆ ಕಟಿಬದ್ಧರಾಗಿದ್ದವರು, ಅಷ್ಟೇ ಅಲ್ಲ, ಇದೇ ನ್ಯಾಶನಲ್ ಬುಕ್ ಟ್ರಸ್ಟಿನ ಅಧ್ಯಕ್ಷರಾಗಿ ಅದಕ್ಕೆ ಹೊಸ ಜೀವ ತುಂಬಿದವರು ಎಂದು ನೆನಪಿಸಿಕೊಂಡಿರುವ ಈ ಅಧ್ಯಯನಕಾರರು ಎನ್‌ಬಿಟಿಯ ಈ ಕ್ರಮ ಅಭಿಪ್ರಾಯ ಸ್ವಾತಂತ್ರ್ಯದ ತೀವ್ರ ಉಲ್ಲಂಘನೆಯಾಗಿದೆ ಎಂದಿದ್ದಾರೆ.

ಇದು ಒಂದು ಸರ್ವಾಧಿಕಾರಶಾಹಿ ಆಳ್ವಿಕೆಯ ಹೇರಿಕೆಯ ಮುನ್ಸೂಚನೆ ಎಂಬ ಭೀತಿ ಅಧ್ಯಯನಕಾರರಾಗಿ ಹಾಗೂ ನಾಗರಿಕರಾಗಿ ತಮಗೆ ಉಂಟಾಗಿದೆ, ಆದ್ದರಿಂದ ಎನ್‌ಬಿಟಿ ಈ ಪುಸ್ತಕದ ಮೇಲಿನ ನಿಷೇಧವನ್ನು ತೆಗೆಯಬೇಕು, ಅದರ ಮರುಮುದ್ರಣವನ್ನು ಮುಂದುವರೆಸಬೇಕು ಎಂದು ಇವರು ಆಗ್ರಹಿಸಿದ್ದಾರೆ.

ದೇಶದ ಹಿರಿಯ ಇಹಾಸಕಾರರಾದ ಪ್ರೊ. ಇರ್ಫಾನ್ ಹಬೀಬ್, ಪ್ರೊ. ರೊಮಿಲಾ ಥಾಪರ್, ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್, ಪ್ರೊ. ಕೆ.ಎಂ.ಪಣಿಕ್ಕರ್ ಮುಂತಾದವರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ತ್ರಿವಳಿ ತಲಾಕ್ ಮತ್ತು ಬಹುಪತ್ನಿತ್ವಕ್ಕೆ ಸಮರ್ಥನೆ ಅಮಾನವೀಯ, ಅನ್ಯಾಯಯುತ ಪ್ರತಿಪಾದನೆ-ಮಹಿಳಾ ಸಂಘಟನೆಗಳ ಖಂಡನೆ

ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಮೂರು ಬಾರಿ ತಲಾಕ್ ಉಚ್ಚರಣೆ ಮತ್ತು ಬಹುಪತ್ನಿತ್ವವನ್ನು ಸಮರ್ಥಿಸಿಕೊಂಡು ಸುಪ್ರಿಂ ಕೋರ್ಟ್ ಸಮ್ಮುಖ ಅಫಿಡವಿಟ್ ಸಲ್ಲಿಸಿರುವುದನ್ನು ಮುಸ್ಲಿಂ ಮಹಿಳೆಯರ ನಡುವೆ, ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸಮಾನ ನಾಗರಿಕರಾಗಿ ಅವರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಮಹಿಳಾ ಸಂಘಟನೆಗಳು ಬಲವಾಗಿ ಖಂಡಿಸಿವೆ. ಇದು ಪಿತೃಪ್ರಾಧಾನ್ಯತೆಯ, ಅಮಾನವೀಯವಾದ ಮತ್ತು ಅನ್ಯಾಯಯುತವಾದ ಪ್ರತಿಪಾದನೆ ಎಂದು ಅವು ಹೇಳಿವೆ.

ಗಂಡಸರಲ್ಲಿ ಹೆಂಗಸರಿಗೆ ಹೋಲಿಸಿದರೆ ಹೆಚ್ಚಿನ ತರ್ಕಶಕ್ತಿ ಇದೆ ಎಂದು ಮಂಡಳಿ ಹೇಳಿರುವುದು ಮಧ್ಯಯುಗೀನ ಮತ್ತು ಮಹಿಳೆಯರ ಬಗ್ಗೆ ಪೂರ್ವಾಗ್ರಹ ತುಂಬಿರುವ ಮಾನಸಿಕತೆ, ಇದು ಮಹಿಳೆಯರ ಕೊಲೆ ಮತ್ತು ಅನೈತಿಕ ಸಂಬಂಧಗಳಿಗೆ ಉತ್ತರವಾಗುತ್ತದೆ ಎಂದು ಭಾವಿಸುವುದು ವಾಸ್ತವಿಕತೆಗೆ ವಿರುದ್ಧವಾದ ಪ್ರಮಾದ ಎಂದು ಈ ಮಹಿಳಾ ಸಂಘಟನೆಗಳು ಆಕ್ರೋಶ ವ್ಯಕ್ತ ಪಡಿಸಿವೆ.

ಈ ಕಾನೂನು ಮಂಡಳಿ ಬಹುಪತ್ನಿತ್ವವನ್ನು ಮತ್ತು ತ್ರಿವಳಿ ತಲಾಕನ್ನು ಸಮರ್ಥಿಸಿಕೊಂಡಿರುವುದು ಸಂವಿಧಾನ ಬಾಹಿರ ಮಾತ್ರವೇಅಲ್ಲ, ಇಸ್ಲಾಮ್‌ನ ಲಿಂಗ ನ್ಯಾಯದ ನೀತಿಗಳಿಗೂ ವಿರುದ್ಧವಾದದ್ದು, ತ್ರಿವಳಿ ತಲಾಕ್ ಏಕಪಕ್ಷೀಯ ಮತ್ತು ಸ್ವೇಚ್ಚಾಚಾರ. ಇಸ್ಲಾಮೀ ಜಗತ್ತಿನಲ್ಲಿ ಎಲ್ಲೂ ಇದು ಕಾನೂನುಬದ್ಧವಾಗಿಲ್ಲ. ಇದನ್ನು ತಕ್ಷಣವೇ ನಿಷೇಧಿಸಬೇಕು ಎಂದಿರುವ ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ್ ಸಂಘಟನೆಯ ಝಕಿಯಾ ಸೋಮನ್ ಮತ್ತು ನೂರ್‌ಜಹಾನ್ ನಿಯಾಝ್, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಭಾ ಫಾರೂಕಿ ಮತ್ತು ಮೈಮುನಾ ಮೊಲ್ಲಾ ಹಾಗೂ ರಾಷ್ಟ್ರೀಯ ಮಹಿಳಾ ಒಕ್ಕೂಟದ ಆನಿ ರಾಜ ಆಗ್ರಹಿಸಿದ್ದಾರೆ.

ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಅಭಿಪ್ರಾಯಗಳನ್ನು ಬಲವಾಗಿ ಖಂಡಿಸಿರುವ ಈ ಮೂರು ಸಂಘಟನೆಗಳ ವಕ್ತಾರರು ಮಂಡಳಿ ತಕ್ಷಣವೇ ಈ ಅಫಿಡವಿಟನ್ನು ಹಿಂತೆಗೆದುಕೊಳ್ಳುತ್ತದೆ, ಎಲ್ಲ ಮಹಿಳೆಯರ ಕ್ಷಮೆ ಕೇಳುತ್ತದೆ ಹಾಗೂ ಭವಿಷ್ಯದಲ್ಲಿ ಅವರ ಹೇಳಿಕೆಗಳು ಮಹಿಳೆಯರನ್ನು ತುಚ್ಛೀಕರಿಸುವಂತದ್ದು ಆಗಿರುವುದಿಲ್ಲ ಎಂದು ನಿರೀಕ್ಷಿಸುವುದಾಗಿ ಹೇಳಿದ್ದಾರೆ.

ಸಿಂಗೂರ್ ಭೂಸ್ವಾಧೀನ ಕುರಿತ ಸುಪ್ರಿಂ ಕೋರ್ಟ್ ತೀರ್ಪು

ಸುಪ್ರಿಂ ಕೋರ್ಟ್ ಪಶ್ಚಿಮ ಬಂಗಾಲದ ಸಿಂಗೂರ್‌ನಲ್ಲಿ ಟಾಟಾ ಕಾರ್ ಯೋಜನೆಗೆಂದು ಸ್ವಾಧೀನ ಪಡಿಸಿಕೊಂಡಿದ್ದ 997 ಎಕ್ರೆ ಜಮೀನಿನ ಸ್ವಾಧೀನವನ್ನು ರದ್ದು ಪಡಿಸಿದೆ. ಈ ಕುರಿತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕೆಳಗಿನ ಹೇಳಿಕೆಯನ್ನು ನೀಡಿದೆ:

ಆಗಿನ ಎಡರಂಗ ಸರಕಾರ ಈ ಯೋಜನೆಯ ಮೂಲಕ ಉದ್ದಿಮೆಯನ್ನು ಅಭಿವೃದ್ಧಿ ಪಡಿಸಿ ಆ ಮೂಲಕ ರಾಜ್ಯದಲ್ಲಿ ಉದ್ಯೋಗ ಸೃಷ್ಟಿಯ ಆಶಯ ಹೊಂದಿತ್ತು.

ಆದರೆ ಸ್ವಾಧೀನ ಪ್ರಕ್ರಿಯೆಯನ್ನು ಆಗ ಲಭ್ಯವಿದ್ದ ಏಕೈಕ ಕಾನೂನಿನ ಸಾಧನವಾದ 1894 ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಮಾಡಬೇಕಾಗಿತ್ತು. ಇದು ರೈತರ ಹಿತಗಳನ್ನು ಸಾಕಷ್ಟು ಪ್ರಮಾಣದಲ್ಲಿ ರಕ್ಷಿಸದ ಒಂದು ಕಾಯ್ದೆಯಾಗಿತ್ತು. ಭೂಸ್ವಾಧೀನದ ಕುರಿತಂತೆ ಸಿಪಿಐ(ಎಂ) ಈ ಹಿಂದೆ ತನ್ನ ಕೇಂದ್ರ ಸಮಿತಿಯ 2011ರ ವಿಧಾನಸಭಾ ಚುನಾವಣೆಗಳನ್ನು ಕುರಿತಾದ ಪರಾಮರ್ಶೆಯಲ್ಲಿ "ಈ ವಿಷಯದಲ್ಲಿ ಆಡಳಿತಾತ್ಮಕ ಮತ್ತು ರಾಜಕೀಯ ತಪ್ಪುಗಳು ವೆಚ್ಚದಾಯಕವಾಗಿ ಪರಿಣಮಿಸಿವೆ" ಎಂದಿತ್ತು.

ಈ ಯೋಜನೆಯನ್ನು ಕೈಬಿಟ್ಟ ನಂತರ ಟಿಎಂಸಿ ಸರಕಾರ ಭೂಮಿಯನ್ನು ಪರಿಹಾರ ಪಡೆಯಲು ನಿರಾಕರಿಸಿದವರಿಗೆ ಹಿಂದಿರುಗಿಸಲು ವಿಧಾನಸಭೆಯಲ್ಲಿ ಒಂದು ಮಸೂದೆ ತಂದಿತ್ತು. ಆಗ ಸಿಪಿಐ(ಎಂ) ಭೂಮಿಯನ್ನು ಈ ಜಮೀನುಗಳ ಹಿಂದಿನ ಎಲ್ಲ ಒಡೆಯರುಗಳಿಗೆ ಹಿಂದಿರುಗಿಸಬೇಕು ಎಂದಿತ್ತು. ಪರಿಹಾರ ತಗೊಂಡವರು ಮತ್ತು ತಗೊಳ್ಳದವರ ನಡುವೆ ಪಕ್ಷಪಾತ ಸಲ್ಲದು ಎಂದಿತ್ತು.

ಈಗ ಸುಪ್ರಿಂ ಕೋರ್ಟ್ ತೀರ್ಪು ಜಮೀನುಗಳ ಎಲ್ಲ ಒಡೆಯರುಗಳಿಗೆ ಅವರಿಗೆ ಸಲ್ಲಬೇಕಾದ ಪರಿಹಾರದೊಂದಿಗೆ ಹಿಂದಿರುಗಿಸಬೇಕು ಎಂದು ಆದೇಶಿಸಿದೆ.

ಹಲವು ದಶಕಗಳಿಂದ ಸಿಪಿಐ(ಎಂ) 1894ರ ಹಳಸಲಾಗಿರುವ ಕಾನೂನಿನ ಜಾಗದಲ್ಲಿ ರೈತರಿಗೆ ಸಾಕಷ್ಟು ಭದ್ರತೆ ಒದಗಿಸುವ ಕಾನೂನನ್ನು ತರಬೇಕು ಎಂದು ಆಗ್ರಹಿಸುತ್ತ ಬಂದಿದೆ. ಅಂತಿಮವಾಗಿ, 2013ರಲ್ಲಿ ಸಂಸತ್ತು 'ಭೂಸ್ವಾಧೀನ,ಪುನರ್ವಸತಿ ಮತ್ತು ಪುನರ್‌ಇತ್ಯರ್ಥದಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಕಾಯ್ದೆ'ಯನ್ನು ಅಂಗೀಕರಿಸಿತು. ಈ ಕಾಯ್ದೆಯನ್ನು ರೈತರ ಹಿತದಿಂದ ಮತ್ತಷ್ಟು ಉತ್ತಮಪಡಿಸುವ ತನ್ನ ಪ್ರಯತ್ನಗಳನ್ನು ಸಿಪಿಐ(ಎಂ) ಮುಂದುವರೆಸುತ್ತದೆ. ತದ್ವಿರುದ್ಧವಾಗಿ ಪ್ರಸಕ್ತ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಸುಗ್ರೀವಾಜ್ಞೆಗಳ ಮೂಲಕ ಇದನ್ನು ದುರ್ಬಲಗೊಳಿಸಲು ಪ್ರಯತ್ನಿಸಿದೆ ಮತ್ತು ಈ ಕಾಯ್ದೆಯನ್ನು ಬುಡಮೇಲು ಮಾಡುತ್ತಲೇ ಇದೆ. ಸಿಪಿಐ(ಎಂ) ಈ ಕಾಯ್ದೆಯನ್ನು ದುರ್ಬಲಗೊಳಿಸುವ ಎಲ್ಲ ಪ್ರಯತ್ನಗಳನ್ನು ವಿರೋಧಿಸುತ್ತದೆ ಮತ್ತು ಈಗ ಹಲವು ರಾಜ್ಯ ಸರಕಾರಗಳು ಈ ರೀತಿ ದುರ್ಬಲಗೊಳಿಸುವ ಕ್ರಮಗಳನ್ನು ಕೈಗೊಳ್ಳುತ್ತಿರುವುದನ್ನು ವಿರೋಧಿಸುತ್ತದೆ.

ಮಾತೆಂದರೆ ಇದು

ಬಂಡವಾಳಶಾಹಿ ಸಮಾಜದಲ್ಲಿ ಭೂತಕಾಲವು ವರ್ತಮಾನದ ಮೇಲೆ ಅಧಿಕಾರ ಚಲಾಯಿಸುತ್ತದೆ. ಕಮ್ಯುನಿಸ್ಟ್ ಸಮಾಜದಲ್ಲಿ ವರ್ತಮಾನವು ಭೂತಕಾಲದ ಮೇಲೆ ಅಧಿಕಾರ ಚಲಾಯಿಸುತ್ತದೆ.

–ಮಾರ್ಕ್ಸ್ ಮತ್ತು ಎಂಗಲ್ಸ್
(ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ)

ಕಾವೇರಿ ವಿವಾದ: ಶಾಶ್ವತ ಪರಿಹಾರ ಹೇಗೆ?

ಸಂಪಾದಕೀಯ

ಕರ್ನಾಟಕ ತಮಿಳುನಾಡಿಗೆ 13 ಟಿ.ಎಂ.ಸಿ.ಯಷ್ಟು ನೀರು ಬಿಡಬೇಕು ಎಂಬ ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ, ಕಾವೇರಿ ನೀರು ಹಂಚಿಕೆ ವಿವಾದ ಮತ್ತೆ ಭುಗಿಲೆದ್ದಿದೆ. ಎರಡೂ ರಾಜ್ಯಗಳಲ್ಲಿ ಪ್ರತಿಭಟನೆ, ಬಸ್ಸುಗಳಿಗೆ ಬೆಂಕಿ, ಹೆದ್ದಾರಿ ತಡೆ, ಹಿಂಸಾಚಾರಗಳು, ಹರತಾಳಗಳು ನಡೆದಿವೆ. ರಾಜ್ಯ ಸರಕಾರಗಳ ಬಗ್ಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಎರಡು ರಾಜ್ಯಗಳ ರೈತರ ಜನತೆ ನಡುವೆ ದ್ವೇಷ ಹರಡುತ್ತಿದೆ. ಒಂದು ತೊಟ್ಟು ನೀರೂ ಬಿಡಬಾರದು ಎಂಬ ಒತ್ತಡ ಕರ್ನಾಟಕ ಸರಕಾರದ ಮೇಲೆ ಬರುತ್ತಿದೆ. ನೀರು ಹಂಚಿಕೆ ವಿವಾದಗಳಲ್ಲಿ ರಾಜ್ಯದ ಪರ ವಾದಿಸುತ್ತಿರುವ ಕಾನೂನು ತಂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದನ್ನು ಬದಲಾಯಿಸಬೇಕು ಎಂಬ ಕೂಗು ಕೇಳಿ ಬರುತ್ತಿದೆ. ಸುಪ್ರೀಂ ಕೋರ್ಟು ತಮಿಳುನಾಡಿನ ಬಗ್ಗೆ ಪಕ್ಷಪಾತ ತೋರುತ್ತಿದೆ. ಆದ್ದರಿಂದ ಸುಪ್ರೀಂ ಕೋರ್ಟಿನ ತೀರ್ಪನ್ನು ಧಿಕ್ಕರಿಸಿ ಸರಕಾರದ ವಜಾ ಎದುರಿಸಲು ಸಿದ್ಧವಿರಬೇಕು ಎಂಬ ಒತ್ತಾಯಗಳೂ ಕೇಳಿ ಬಂದಿವೆ. ಕೇಂದ್ರ ಹಾಗೂ ರಾಜ್ಯ ಸರಕಾರ ನಡೆಸುತ್ತಿರುವ ಬಿಜೆಪಿ, ಕಾಂಗ್ರೆಸಿನಂತಹ ರಾಷ್ಟ್ರೀಯ ಪಕ್ಷಗಳು ಸಮಸ್ಯೆಗೆ ಪರಿಹಾರ ಹುಡುಕುವ ಬದಲು ಅದನ್ನು ತಾವು ವಿರೋಧ ಪಕ್ಷವಾಗಿರುವಲ್ಲಿ ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವ ಪ್ರಯತ್ನದಲ್ಲಿ ಈ ಭಾವನಾತ್ಮಕ ನಿಲುವುಗಳಿಗೆ ಕುಮ್ಮಕ್ಕು ಕೊಡುತ್ತಿವೆ. ತಮಿಳುನಾಡಿಗೆ ನೀರು ಬಿಡಲು ಆರಂಭಿಸಿ ಸುಪ್ರೀಂ ಕೋರ್ಟಿನ ಮುಂದೆ ಆದೇಶ ತಿದ್ದುಪಡಿ ಮಾಡುವಂತೆಯೂ, ಕಾವೇರಿ ಮೇಲುಸ್ತುವಾರಿ ಸಮಿತಿ ವಾಸ್ತವಾಂಶ ಅಧ್ಯಯನ ಮಾಡುವಂತೆ ಕೇಳಿಕೊಳ್ಳುವ ನಿರ್ಧಾರವನ್ನು ಸರಕಾರ ಮಾಡಿದೆ. ಇದರ ಜತೆಗೆ ರಾಜ್ಯದ ಕಾವೇರಿ ಅಚ್ಚು ಕಟ್ಟು ಪ್ರದೇಶದ ರೈತರ ಬೆಳೆಗಳಿಗೆ ನೀರು ಬಿಡಲು ನಿರ್ಧರಿಸಿದೆ. ಯಾವುದೇ ನೀರು ಹಂಚಿಕೆ ವಿವಾದವನ್ನು ಬಗೆಹರಿಸುವ ಇಂದಿನ ರಾಜಕೀಯ–ಕಾನೂನು ಚೌಕಟ್ಟಿನಲ್ಲಿ ಒಂದು ರಾಜ್ಯ ಸರಕಾರಕ್ಕೆ ಬೇರೆ ಯಾವುದೇ ಆಯ್ಕೆಗಳಿಲ್ಲ. ಸುಪ್ರೀಂ ಕೋರ್ಟಿನ ತೀರ್ಪನ್ನು ಧಿಕ್ಕರಿಸಿ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಸುವುದರಿಂದ ರಾಜ್ಯದ ಹಿತಾಸಕ್ತಿ ಕಾಪಾಡಲು ಸಾಧ್ಯವಿಲ್ಲ.

ಇದರರ್ಥ ರಾಜ್ಯ ಸರಕಾರ, ಕಾಂಗ್ರೆಸ್ ಕಾವೇರಿ ನೀರು ಹಂಚಿಕೆ ವಿವಾದವನ್ನು ಸರಿಯಾಗಿ ನಿರ್ವಹಿಸಿದೆ. ಸುಪ್ರೀಂ ಕೋರ್ಟಿನ ತೀರ್ಪು ನ್ಯಾಯಯುತವಾಗಿದೆ. ರಾಜ್ಯದ ಕಾನೂನು ತಂಡ ಸಮರ್ಪಕವಾಗಿ ಕೆಲಸ ಮಾಡಿದೆ. ರಾಜ್ಯದ ಜನತೆಗೆ, ರೈತರಿಗೆ ಅನ್ಯಾಯವಾಗಿಲ್ಲ ಎಂದು ಅರ್ಥವಲ್ಲ. ಮಳೆ ಸಾಕಷ್ಟು ಆಗದ ಸಂಕಷ್ಟ ಪರಿಸ್ಥಿತಿಯಲ್ಲಿ ಎರಡು ರಾಜ್ಯಗಳ ಮತ್ತು ಕುಡಿಯುವ ಹಾಗೂ ಕೃಷಿಗೆ ಬೇಕಾದ ನೀರಿನ ಹಂಚಿಕೆ ಹೇಗೆ ಮಾಡುವುದು ಎಂಬ ಪ್ರಶ್ನೆ ಇದೇ ಮೊದಲ ಬಾರಿಗೆ ಬಂದಿದ್ದಲ್ಲ. ಕಾವೇರಿ ನದಿ ನೀರು ಹಂಚಿಕೆ ಸಂಬಂಧ ಮಧ್ಯಂತರ ತೀರ್ಪು ಹೊರಬಿದ್ದ ನಂತರದ 25 ವರ್ಷಗಳಲ್ಲಿ 5ನೇ ಬಾರಿಗೆ ಇಂತಹ ಸಂಕಷ್ಟದ ಸಂದರ್ಭ ಬಂದಿ ದೆ. ಈ 5 ಸಂದರ್ಭಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ವಿವಿಧ ಪಕ್ಷಗಳು ಅಧಿಕಾರದಲ್ಲಿದ್ದವು. ಆದರೂ ಪ್ರತಿ ಬಾರಿ ಈಗಿನ ಘಟನಾವಳಿಗಳು ನಡೆದಿದ್ದು ಎರಡು ರಾಜ್ಯಗಳ ನಡುವೆ ಕಹಿ ಹೆಚ್ಚಾಗಿದ್ದು ಬಿಟ್ಟರೆ ಇದಕ್ಕೆ ಪರಿಹಾರ ಕಂಡುಕೊಳ್ಳುವತ್ತ ಒಂದಿಂಚೂ ಪ್ರಗತಿಯಾಗಿಲ್ಲ. ಇದ–ಕ್ಕೆ ನೀರು ಹಂಚಿಕೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಬೂರ್ಜ್ವಾ–ಭೂಮಾಲಕ ರಾಜಕೀಯ ಪಕ್ಷಗಳ ಇಚ್ಛಾಶಕ್ತಿಯ ಕೊರತೆಯೇ ಕಾರಣ. ಮಾತ್ರವಲ್ಲ, ಇಂತಹ ವಿವಾದಗಳನ್ನು ಜೀವಂತವಾಗಿಟ್ಟು ಭಾಷೆ–ನೆಲ–ಜಲದ ಹೆಸರಿನಲ್ಲಿ ಜನತೆಯ ನಡುವೆ ದ್ವೇಷದ ವಾತಾವರಣ ನಿರ್ಮಿಸಿ ಅದರ ಲಾಭ ಪಡೆಯುವ ರಾಜಕೀಯ ದುರುದ್ದೇಶವೇ ಇದೆ ಎಂದರೆ ತಪ್ಪಾಗಲಿಕ್ಕಿಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಈ ಪಾತ್ರವನ್ನೇ ವಹಿಸುತ್ತಾ ಬಂದಿವೆ.

ನದಿ ನೀರಿನ ಹಂಚಿಕೆ, ನಿರ್ವಹಣೆ ಪ್ರಧಾನವಾಗಿ ಆಡಳಿತಾತ್ಮಕ ವಿಚಾರ. ಇದನ್ನು ಕಾನೂನಾತ್ಮಕ ಕ್ರಮಗಳಿಂದ ಪರಿಹರಿಸಲಾಗುವುದಿಲ್ಲ. ನದಿ ನೀರಿನ ಹಂಚಿಕೆಯ ವಿವಾದಗಳನ್ನು ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಿ ಪರಿಹರಿಸಲು ಪ್ರಯತ್ನಿಸುತ್ತಿರುವುದೇ ಸಮಸ್ಯೆಯ ಮೂಲ. ಸಾಮಾನ್ಯ ಮತ್ತು ಸಂಕಷ್ಟದ ಸಮಯದಲ್ಲಿ ನೀರಿನ ಹಂಚಿಕೆ ನೀರಿನ ಲಭ್ಯತೆ, ನೀರಿನ ತುರ್ತು ಅಗತ್ಯ, ಎಲ್ಲಿ ಕಡಿತ ಮಾಡಬಹುದು ಎಂಬವುಗಳ ಬಗ್ಗೆ ವಾಸ್ತವಾಂಶ ಆಧಾರಿತ ಅಧ್ಯಯನ ವಿಶ್ಲೇಷಣೆ ಬೇಕಾಗುತ್ತದೆ. ಸಂಕಷ್ಟ ಪರಿಸ್ಥಿತಿ ನಿರ್ಮಾಣ ಆಗುವ ಪ್ರಕ್ರಿಯೆಯ ಸಂದರ್ಭದಲ್ಲಿ ಸತತವಾಗಿ ಇವನ್ನು ಗಮನಿಸುತ್ತಿರಬೇಕಾಗುತ್ತದೆ. ಇವನ್ನು ಮಾಡಲು ಸಂಬಂಧಿಸಿದ ಪರಿಣತರು, ತಂತ್ರಜ್ಞರು ಮಾಹಿತಿ ಸಂಗ್ರಹಣಾ ನಿರ್ವಹಣಾ ವ್ಯವಸ್ಥೆ ಬೇಕಾಗುತ್ತದೆ. ಇದಕ್ಕೆ ಬೇಕಾದ ಆಡಳಿತ ಯಂತ್ರ ಇಲ್ಲವೆಂದಲ್ಲ. ಕೇಂದ್ರ ಸರಕಾರದ ನೇತೃತ್ವದಲ್ಲಿ ಇದಕ್ಕಾಗಿಯೇ ಎರಡು ಸಮಿತಿಗಳು ಇವೆ. ಒಂದು ಅಧಿಕಾರಿಗಳ ಮಟ್ಟದಲ್ಲಿ. ಇನ್ನೊಂದು ಪ್ರಧಾನ ಮಂತ್ರಿಯ ಅಧ್ಯಕ್ಷತೆಯಲ್ಲಿ. ಎರಡು ರಾಜ್ಯಗಳ ನಡುವೆ ವಿವಾದ ಉಂಟಾದಾಗ ಅದನ್ನು ಪರಿಹರಿಸುವುದು ಕೇಂದ್ರ ಸರಕಾರದ ಹೊಣೆ. ಮರುಕಳಿಸುತ್ತಿರುವ ಈ ಸಂಕಷ್ಟದ ಪರಿಸ್ಥಿತಿಯಲ್ಲಿ ನೀರಿನ ಹಂಚಿಕೆಗೆ ನೀತಿ ನಿರೂಪಿಸಬೇಕಾದ್ದು ಅವರ ಹೊಣೆ. ಈ ಹೊಣೆಯಿಂದ ಕೇಂದ್ರ ಸರಕಾರದಲ್ಲಿ ಅಧಿಕಾರದಲ್ಲಿರುವ ಪಕ್ಷಗಳು ಜಾರಿಕೊಳ್ಳುತ್ತಾ ಬಂದಿವೆ. ಅವಕ್ಕೆ ಇದು ಬೇಕಾಗಿಯೂ ಇಲ್ಲ. ಈ ಸಮಿತಿಗಳು ಕೆಲಸ ಮಾಡಬೇಕೆಂದು ರಾಜ್ಯ ಸರಕಾರಗಳು ಒತ್ತಾಯ ಹೇರುವುದೂ ಇಲ್ಲ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷಗಳಿಗೂ ಇದು ಬೇಕಾಗಿಲ್ಲ. ವಿವಾದ ಬಿಕ್ಕಟ್ಟಿನ ಸ್ಥಿತಿ ಬಂದಾಗ ರಾಜ್ಯ ಸರಕಾರಗಳು, ಬೇರೆ ಯಾವುದೇ ಪ್ರಕ್ರಿಯೆಗೆ ಪ್ರಯತ್ನಿಸದೆ ಸುಪ್ರೀಂ ಕೋರ್ಟಿನ ಮುಂದೆ ಹೋಗುತ್ತವೆ. ಸುಪ್ರೀಂ ಕೋರ್ಟಾದರೂ ಕೇಂದ್ರದಲ್ಲಿರುವ ಎರಡು ಸಮಿತಿಗಳು ತಮ್ಮ ಹೊಣೆ ನಿಭಾಯಿಸಬೇಕು ಎಂದು ನಿರ್ದೇಶನ ನೀಡಬೇಕು. ಅದೂ ಆಗದೆ ಇರುವುದರಿಂದ ನೀರು ಹಂಚಿಕೆ ವಿವಾದಗಳು ಎಂದೂ ಮುಗಿಯದ ವಿವಾದಗಳಾಗಿವೆ.

ಸೆಪ್ಟೆಂಬರ್ 13: ಕೋಮುವಾದದ ವಿರುದ್ಧ ಸಮಾವೇಶ

ಕರ್ನಾಟಕದಲ್ಲಿ ಕೋಮುವಾದಿ ಶಕ್ತಿಗಳು ತಮ್ಮ ಆಕ್ರಮಣಕಾರಿ ಪ್ರವೃತ್ತಿಯನ್ನು ಮುಂದುವರೆಸುತ್ತಿವೆ. ಅಮ್ನೆಸ್ಟಿ ಇಂಟರ್ ನ್ಯಾಶನಲ್, ತುಮಕೂರು ಸಿದ್ಧಾರ್ಥ ಕಾಲೇಜಿನ ವಿದ್ಯಾರ್ಥಿಯ ಬಂಧನಕ್ಕೆ ಒತ್ತಡ ಈ ಆಕ್ರಮಣಕಾರಿ ಪ್ರವೃತ್ತಿ ಹೆಚ್ಚುತ್ತಿರುವುದಕ್ಕೆ ಇತ್ತೀಚಿನ ಉದಾಹರಣೆಗಳು. ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳು ಮತ್ತೆ ಅಧಿಕಾರಕ್ಕೆ ಬರುವ ಪ್ರಯತ್ನಗಳ ಭಾಗವಾಗಿ ಇವನ್ನು ಮಾಡುತ್ತಿದ್ದು, ಇವು ಚುನಾವಣೆವರೆಗೆ ಮುಂದುವರೆಯುಲಿವೆ. ಇನ್ನಷ್ಟು ತೀವ್ರವಾಗಲಿವೆ. ಇದರ ವಿರುದ್ಧ ಕಾಂಗ್ರೆಸ್ ಆಡಳಿತಾತ್ಮಕವಾಗಿ ಆಗಲಿ, ರಾಜಕೀಯವಾಗಿ ಆಗಲಿ ಪ್ರತಿರೋಧ ಒಡ್ಡುತ್ತಿಲ್ಲ ಅಥವಾ ಆ ಶಕ್ತಿಯನ್ನೇ ಕಳೆದುಕೊಂಡಿದೆ. ಜೆ.ಡಿ(ಎಸ್) ಬಿಜೆಪಿಯ ಜತೆ ಹೋಗುತ್ತಿದ್ದು, ಕೋಮುವಾದಿ ಶಕ್ತಿಗಳ ಆಕ್ರಮಣಕ್ಕೆ ಪ್ರತಿರೋಧ ಒಡ್ಡುವ ಜವಾಬ್ದಾರಿ ಪೂರ್ಣವಾಗಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಮೇಲೆ ಬಿದ್ದಿದೆ. ಈ ಬಗ್ಗೆ ಸಿಪಿಐ(ಎಂ) ಇತರ ಎಡಪಕ್ಷಗಳ ಜತೆ ಮಾತುಕತೆ ನಡೆಸಿ, ಒಂದು ಪ್ರಚಾರಾಂದೋಲನ ನಡೆಸಲು ಸಿದ್ಧತೆ ನಡೆಸಿವೆ.

ಪ್ರಚಾರಾಂದೋಲನದ ಮೊದಲ ಕಾರ್ಯಕ್ರಮವಾಗಿ ಸೆಪ್ಟೆಂಬರ್ 13 ರಂದು ಬೆಂಗಳೂರಲ್ಲಿ ಸೆಕ್ರೆಟಾರಿಯಟ್ ಕ್ಲಬ್ಬಿನಲ್ಲಿ ಒಂದು ದಿನದ ರಾಜ್ಯ ಮಟ್ಟದ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಸಮಾವೇಶದಲ್ಲಿ ಈಗ ವಿವಾದಾಸ್ಪದ ಮತ್ತು ಬಹುಚರ್ಚಿತವಾಗಿರುವ ರಾಜದ್ರೋಹ ಕಾಯಿದೆಯ ಬಗ್ಗೆ ಪ್ರಸಿದ್ಧ ನ್ಯಾಯವಾದಿ, ನ್ಯಾಯಾಧೀಶರುಗಳಿಂದ ವಿಶೇಷ ಉಪನ್ಯಾಸ ಮತ್ತು ಸಂವಾದ ಏರ್ಪಡಿಸಲಾಗಿದೆ. ಅಲ್ಲದೆ ಕೋಮುವಾದದ ಪ್ರಚಾರಾಂದೋಲನದ ಮುಂದಿನ ಕಾರ್ಯಕ್ರಮಗಳ ಬಗ್ಗೆ ಸಹ ಅಂದು ಚರ್ಚಿಸಲಾಗುವುದು.

ಕೋಮುವಾದಿಗಳ ಪ್ರಯೋಗ ಶಾಲೆ ಆಗಿರುವ ಕರಾವಳಿ ಜಿಲ್ಲೆಗಳಲ್ಲಿ ಜಿಲ್ಲಾವಾರು ಜಾಥಾ ಮತ್ತು ಒಂದು ಸಮಾವೇಶವನ್ನು ಪ್ರಚಾರಾಂದೋಲನದ ಭಾಗವಾಗಿ ಮುಂದೆ ಆಯೋಜಿಸಲು ನಿರ್ಧರಿಸಲಾಗಿದೆ.

ಕೇಳಿಸಿದ್ದು

ನೀರು ಹಂಚಿಕೆಗೆ ಸಂಬಂಧಿಸಿದ ನ್ಯಾಯಸಿದ್ಧಾಂತವನ್ನು, ನೀರಿನ ಹಕ್ಕುಗಳಿಗೆ ಸಂಬಂಧಿಸಿದ ನಮ್ಮ ಗ್ರಹಿಕೆಗಳನ್ನು ಮರುಚಿಂತನೆ ಮಾಡಬೇಕಾದ ಸವಾಲನ್ನು ಎದುರಿಸುತ್ತಿದ್ದೇವೆ. ಇದೊಂದು ಬೌದ್ಧಿಕ, ರಾಜಕೀಯ ಮತ್ತು ನೈತಿಕ ಸವಾಲು. ಇದು ತಮಿಳುನಾಡಿನೊಡನೆ ಮತ್ತು ರಾಜ್ಯದೊಳಗೆ ಕಾವೇರಿ ನೀರಿನ ಮೇಲೆ ಯಾರಿಗೆ ಯಾವ ಬಗೆಯ ಹಕ್ಕುಗಳು ಇವೆ ಎನ್ನುವುದನ್ನು ನಿರ್ಧರಿಸಲು, ಸಂಕಷ್ಟ ಬಂದಾಗ ಹೇಗೆ ನೀರಿನ ಹಂಚಿಕೆಯಾಗಬೇಕು ಎನ್ನುವುದನ್ನು ತೀರ್ಮಾನಿಸಲು ಅತ್ಯಗತ್ಯವಾಗಿರುವ ಕ್ರಮ. ಅಂದರೆ ನೀರಿನ ಮೇಲಿನ ಹಕ್ಕುಗಳ ವರ್ಗಶ್ರೇಣಿಯೊಂದು ನಿಗದಿಯಾಗಬೇಕಿದೆ. ಇದು ಕೃಷಿ ಮತ್ತು ಕುಡಿಯುವ ನೀರಿನ ಪೂರೈಕೆಗಳೆರಡಕ್ಕೂ ಅನ್ವಯವಾಗುವುದು.

– **ಪೃಥ್ವೀದತ್ತ ಚಂದ್ರಶೋಭಿ**
(ಪ್ರಜಾವಾಣಿ)

ನವೆಂಬರ್ 7 : ಭೂಮಿ ಪ್ರಶ್ನೆಗೆ ಜೈಲ್ ಭರೋ

ಭೂಮಿಯ ಪ್ರಶ್ನೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಜನತೆಯ ಪ್ರಮುಖ ಪ್ರಶ್ನೆಯಾಗಿ ಹೊಮ್ಮುತ್ತಿದೆ. ಬೆಂಗಳೂರು ಹಾಗೂ ಮುಂಬೈ, ಚೆನ್ನೈ ಮತ್ತು ಮಂಗಳೂರುಗಳ ನಡುವೆ 'ಕೈಗಾರಿಕಾ ಕಾರಿಡಾರ್' ಹೆಸರಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಸರಕಾರ ಸ್ವಾಧೀನಪಡಿಸಿಕೊಳ್ಳುತ್ತಿದೆ. 40 ಲಕ್ಷ ಎಕರೆ ಬಂಜರು ಭೂಮಿಯಲ್ಲಿ 18 ಲಕ್ಷ ಎಕರೆಗೆ ಸಣ್ಣರೈತ/ಕೂಲಿಕಾರರ ಅರ್ಜಿಗಳನ್ನು ನಿರಾಕರಿಸಲಾಗಿದೆ. ಇವು ಮತ್ತು ಎಲ್ಲಾ ಸರಕಾರಿ ಜಮೀನನ್ನು ಭೂ ಬ್ಯಾಂಕಿಗೆ ಸೇರಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ 'ಕಾಂಟ್ರಾಕ್ಟ್ ಕೃಷಿ'ಗೆ ಹಸ್ತಾಂತರ ಮಾಡಲು ಗಂಭಿರ ಪ್ರಯತ್ನಗಳೂ ಆಗುತ್ತಿವೆ. ರೈತ ಕೃಷಿಯನ್ನು ಲಾಭದಾಯಕವಾಗದಂತೆ ಮಾಡಿ, ರೈತಭೂಮಿಯನ್ನು ಬಿಟ್ಟು ಮಾರಿಕೊಂಡೋ ಅಥವಾ ಕಾಂಟ್ರಾಕ್ಟ್‌ಕೊಟ್ಟೋ ಕೃಷಿಯನ್ನು ಬಿಟ್ಟು ಹೋಗುವಂತೆ ಮಾಡುವ ನೀತಿಗಳನ್ನು ಅನುಸರಿಸುವುದೂ ಈ ಹಿನ್ನೆಲೆಯಲ್ಲಿಯೇ ಎಂದು ಗಮನಿಸಬೇಕು. ಇನ್ನೊಂದು ಕಡೆ ನಗರ ಪ್ರದೇಶಗಳಲ್ಲಿ ರೀಯಲ್ ಎಸ್ಟೇಟ್ ಕಂಪನಿಗಳು ಸರಕಾರಿ ಮತ್ತಿತರ ಸಾರ್ವಜನಿಕ ಭೂಮಿಯನ್ನು ಕಬಳಿಸಿ ವಿಲ್ಲಾಗಳು, ಕಾಲೋನಿಗಳು, ಅಪಾರ್ಟ್‌ಮೆಂಟ್‌ಗಳು, ಕಮರ್ಶಿಯಲ್ ಕಟ್ಟಡಗಳು, ಬೃಹತ್ ಮಾಲುಗಳನ್ನು ಕಟ್ಟಿ ಸೂಪರ್ ಲಾಭ ಗಳಿಸುತ್ತಿದ್ದಾರೆ. ಈ ನಿವೇಶನಗಳು, ಮನೆಗಳು, ಅಪಾರ್ಟ್‌ಮೆಂಟ್‌ಗಳು ನಗರ ಪ್ರದೇಶಗಳ ಬಡ, ಮಧ್ಯಮ ವರ್ಗಗಳ ನಿಲುಕಿಗೆ ಸಿಗುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲೂ ಬಡ ರೈತರ ಕೃಷಿ ಕೂಲಿಕಾರರಿಗೆ ಮನೆ ನಿವೇಶನ ಮರೀಚಿಕೆಯಾಗಿದೆ. ಈ ನಡುವೆ ಭೂಕಬಳಿಕೆ ನಿಷೇಧ ಕಾಯಿದೆ 2011 ಪ್ರಕಾರ ವಿಶೇಷ ಕೋರ್ಟು ಸ್ಥಾಪಿಸಿ ಹಕ್ಕು ಪತ್ರ ಇಲ್ಲದ ಎಲ್ಲಾ ಬಗರ್ ಹುಕುಂ ಸಾಗುವಳಿದಾರರು ಮುಂತಾದ ಬಡ ರೈತರು ಕೃಷಿ ಕೂಲಿಕಾರರು, ಅರಣ್ಯವಾಸಿಗಳು, ಆದಿವಾಸಿಗಳನ್ನೂ ಭೂಕಳ್ಳರ ಸಾಲಿಗೆ ಸೇರಿಸಿ ಅವರನ್ನು ಒಕ್ಕಲೆಬ್ಬಿಸುವ ಹುನ್ನಾರ ತಕ್ಷಣದ ಅಪಾಯವಾಗಿದೆ. ಈ ತಕ್ಷಣದ ಅಪಾಯ ನಿವಾರಿಸಲು ಇವರೆಲ್ಲರನ್ನೂ ವಿಶೇಷ ಕೋರ್ಟಿನ ವ್ಯಾಪ್ತಿಯಿಂದ ತೆಗೆಯುವ ಕಾನೂನು ತಿದ್ದುಪಡಿಗೆ ಒತ್ತಾಯಿಸಬೇಕಾಗಿದೆ. ಇದಲ್ಲದೆ ಇವರೆಲ್ಲರಿಗೂ ಹಕ್ಕುಪತ್ರ ಕೊಡಲು, ಗ್ರಾಮೀಣ/ನಗರ ಪ್ರದೇಶಗಳಲ್ಲಿ ಮನೆ ನಿವೇಶನ ಕೊಡಲು ಒತ್ತಾಯಿಸಬೇಕಾಗಿದೆ.

ಭೂಮಿಯ ಹಕ್ಕಿನ ಈ ವ್ಯಾಪಕ ಪ್ರಶ್ನೆಯನ್ನು ತೆಗೆದುಕೊಂಡು ನವೆಂಬರ್ 7 ರಂದು ರಾಜ್ಯವ್ಯಾಪಿ ಜೈಲ್ ಭರೋ ಚಳುವಳಿಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ಕೊಟ್ಟಿದೆ. ಇದರ ಮೊದಲು ಗ್ರಾಮ, ಹೋಬಳಿ, ತಾಲೂಕು, ಜಿಲ್ಲಾ ಮಟ್ಟಗಳಲ್ಲಿ ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾದ ನಿರ್ದಿಷ್ಟ ಹಕ್ಕೊತ್ತಾಯಗಳಿಗೆ ಪ್ರಚಾರ–ಪ್ರಕ್ಷೋಭೆ ಚಳುವಳಿಗಳನ್ನು ನಡೆಸಿ, ಅದು ನವೆಂಬರ್ 7 ರಂದು ರಾಜ್ಯವ್ಯಾಪಿ ಜೈಲ್ ಭರೋ ಚಳುವಳಿಯಲ್ಲಿ ಅಂತಿಮವಾಗಿ ನಿರ್ಣಾಯಕ ಚಳುವಳಿಯಾಗುವಂತೆ ಮಾಡಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ಕೊಟ್ಟಿದೆ.

ಎನ್.ಸಿ.ಆರ್.ಬಿಯ ವರದಿ: ಕರ್ನಾಟಕ ಕೋಮುಗ್ರಸ್ತವೇ?

ಎಸ್.ವೈ. ಗುರುಶಾಂತ

ಕರ್ನಾಟಕ ಅತೀ ಹೆಚ್ಚು ಕೋಮು ಹಾಗೂ ರಾಜಕೀಯ ಗಲಭೆಗಳ ರಾಜ್ಯವೇ? ರಾಜಧಾನಿ ಬೆಂಗಳೂರು ಕ್ರಿಮಿನಲ್‌ಗಳ ನಗರವಾಗುತ್ತಿದೆಯೇ? ಇಂತಹ ಪ್ರಶ್ನೆಗಳು ಮತ್ತೆ ಮತ್ತೆ ಸಾರ್ವಜನಿಕವಾಗಿ ಪ್ರಸ್ತಾಪಿಸಲ್ಪಡುತ್ತಿವೆ.

ಕಾಲ ಕಾಲಕ್ಕೆ ಪ್ರಕಟಗೊಳ್ಳುವ ವರದಿಗಳು ಇವನ್ನು ಸಾರಾಸಗಟಾಗಿ ತಳ್ಳಿ ಹಾಕುತ್ತಲೂ ಇಲ್ಲ. ಇತ್ತೀಚೆಗೆ 'ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ)' ಬಿಡುಗಡೆ ಮಾಡಿದ ವರದಿಯ ಅಂಕಿ–ಅಂಶಗಳು ಕರ್ನಾಟಕ ರಾಜ್ಯ ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಕೋಮು ಹಾಗೂ ರಾಜಕೀಯ ಗಲಭೆಗಳಲ್ಲಿ ಎರಡನೆಯ ಸ್ಥಾನದಲ್ಲಿದೆ ಎಂದು ಹೇಳುತ್ತಿವೆ. ಅದರ ಪ್ರಕಾರ ಮೊದಲ ಸ್ಥಾನ ಹರ್ಯಾಣ ರಾಜ್ಯದ್ದು. ರಾಜಕೀಯ ಗಲಭೆಗಳಲ್ಲಿ –1031 ಮೊಕದ್ದಮೆಗಳಿರುವ ಕೇರಳದ್ದು ಮೊದಲ ಸ್ಥಾನ ಎನ್ನುತ್ತಿದೆ ವರದಿ. ಕರ್ನಾಟಕ 163. 2015ರಲ್ಲಿ ಕರ್ನಾಟಕವು ಒಟ್ಟು 6603 ಗಲಭೆಗಳನ್ನು ಕಂಡಿತು. (ಇದರಲ್ಲಿ ಹಿಂಸಾತ್ಮಕ ಘಟನೆಗಳು, ಪ್ರತಿಭಟನೆಗಳೂ ಸೇರಿವೆ.) ಇದರಲ್ಲಿ 163 ಘಟನೆಗಳು ಕೋಮು ಗಲಭೆ ಎಂದು ಹೆಸರಿಸಲಾಗಿದ್ದು 203 ಜನ ಧಾಳಿಗೊಳಗಾದವರು. ಆದರೆ 2014ರಲ್ಲಿ ನಡೆದ 38 ಘಟನೆಗಳಿಗೆ ಹೋಲಿಸಿದರೆ ಹೆಚ್ಚು. ಇದು ಅತ್ಯಂತ ಅಂದರೆ ಶೇ.330ರಷ್ಟು ಹೆಚ್ಚಳ.

ರಾಜಕೀಯ ಗಲಭೆಗಳು 166 ಇದ್ದು 342 ಜನ ಧಾಳಿಗೀಡಾದವರು ಎಂಬ ಅಂಶವನ್ನು ತಿಳಿಸಿದೆ ಬ್ಯೂರೋ. ಬೆಂಗಳೂರು ನಗರದಲ್ಲಿ ಗಲಭೆಗಳು–373, ಮುಂಬಯಿ–396 ಘಟಿಸಿದ ವರದಿಗಳಿವೆ. ಸೈಬರ್ ಕ್ರೈಮ್‌ನಲ್ಲಿ ಬೆಂಗಳೂರಿನಲ್ಲಿ 2014ರಲ್ಲಿ 675 ದಾಖಲಾಗಿದ್ದರೆ 2015ರಲ್ಲಿ 1041 (ಕರ್ನಾಟಕ ಒಟ್ಟು 1414) ಲೂಟಿ–99, ದೆಹಲಿ–182, ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಬೆಂಗಳೂರು ಹೈಟೆಕ್ ಮಹಾನಗರದಲ್ಲೇ ದಲಿತರ ಮೇಲೆ ದೌರ್ಜನ್ಯದ 127 ಘಟನೆಗಳು ದಾಖಲಾಗಿವೆ ! ಎಳೆಯ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯಗಳು 273 ಘಟನೆಗಳು ದಾಖಲಾಗಿದ್ದು 276 ಬಲಿಯಾಗಿದ್ದಾರೆ. ರಾಜ್ಯದಲ್ಲಿ ಇಂತಹ ಪ್ರಕರಣಗಳು 1029 ದಾಖಲಾಗಿವೆ.

ಗಲಭೆಗಳ ಹೆಚ್ಚಳ

ಹಾಗೆಯೇ ಕೇಂದ್ರ ಗೃಹ ಖಾತೆ ಬಿಡುಗಡೆ ಮಾಡಿದ ಅಂಕಿ ಅಂಶಗಳೂ ಎನ್‌ಸಿಆರ್‌ಬಿಗಿಂತ ಸ್ವಲ್ಪ ವ್ಯತ್ಯಾಸವಿದ್ದರೂ ಸಹ ಕರ್ನಾಟಕದಲ್ಲಿ ಕೋಮು ಗಲಭೆಗಳ ಹೆಚ್ಚಳವನ್ನು ದಾಖಲಿಸುತ್ತವೆ. 2011ರ ಜನವರಿ ಮತ್ತು ಜೂನ್ 2015ರ ವರೆಗಿನ ಒಟ್ಟು ಘಟನೆಗಳನ್ನು ಅದು ಪ್ರಸ್ತಾಪಿಸಿದೆ. ಅದರಂತೆ 321 ಕೋಮುಗ್ರಸ್ತ ಗಲಭೆಗಳು ನಡೆದಿದ್ದು 939 ಜನ ಗಾಯಗೊಂಡಿದ್ದಾರೆ. 16 ಜನ ಹತ್ಯೆಗೀಡಾಗಿದ್ದಾರೆ. 36 ಘಟನೆಗಳು ನಡೆದದ್ದು ಜನವರಿ 2015ರಿಂದ ಜೂನ್ 2015ರವರೆಗೆ ಇದರಲ್ಲಿ 2 ಸಾವು 123 ಜನ ಗಾಯಗೊಂಡಿದ್ದಾರೆ.

ಭಾರತ ದೇಶದಲ್ಲಿ 2011 ರಿಂದ 15ರ ಡಿಸೆಂಬರ್ 1ರವರೆಗೆ ಒಟ್ಟು 3045 ಕೋಮು ಗಲಭೆಗಳು ದಾಖಲಾಗಿವೆ. ಅಂದರೆ ಕರ್ನಾಟಕದ ಭಾಗ ಶೇ.10.54. ದಕ್ಷಿಣ ಭಾರತದಲ್ಲಿ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವೇ ಹೆಚ್ಚು ಘಟನೆಗಳನ್ನೂ ಹೊಂದಿದೆ. 2010 ಮತ್ತು 2013ರ ನಡುವೆಯೇ 222 ಘಟನೆಗಳು ರಾಜ್ಯದಲ್ಲಿ ದಾಖಲಾಗಿರುವುದು ಗಮನಿಸಬೇಕಾದ್ದು. ಮೇಲಿನ ಅಂಶಗಳನ್ನು ಪರಿಗಣಿಸಿದರೆ ವರ್ಷದಲ್ಲಿ ಸರಾಸರಿ 700ರಷ್ಟು ಗಲಭೆಗಳಾಗಿವೆ. ಪ್ರತಿ ತಿಂಗಳಿಗೆ ಸರಾಸರಿ 58 ಎಂದಾಗಿದೆ.

ದೇಶದಲ್ಲಿ 2011 ಜನವರಿಯಿಂದ ಅಕ್ಟೋಬರ್ 2015ರೊಳಗೆ ನಡೆದಿರುವ ಒಟ್ಟು ಗಲಭೆಗಳ ಶೇ.85ರಷ್ಟು ನಡೆದಿರುವುದು ಕೇವಲ 8 ರಾಜ್ಯಗಳಲ್ಲಿ ಎಂಬುದು ಅತ್ಯಂತ ಗಮನಾರ್ಹ ವಿಷಯ. ಅವೆಂದರೆ ಬಿಹಾರ, ಗುಜರಾತ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಉತ್ತರ ಪ್ರದೇಶ. ಕಳೆದ ಈ ಐದು ವರುಷಗಳಲ್ಲಿ ಎಡರಂಗ ಆಡಳಿತವಿರುವ ತ್ರಿಪುರಾ ರಾಜ್ಯದಲ್ಲಿ ಒಂದೇ ಒಂದು ಕೋಮುಗಲಭೆ ಇಲ್ಲ. ಇದನ್ನೂ ಒಳಗೊಂಡು ಈಶಾನ್ಯ ರಾಜ್ಯದ ಬಹುತೇಕ ಈ 7 ರಾಜ್ಯಗಳಲ್ಲಿ ಕೋಮುಗಲಭೆಗಳು ದಾಖಲಾಗಿಲ್ಲ ಎನ್ನುತ್ತದೆ ವರದಿ.

ಭಾರತದಲ್ಲಿ ಅತೀ ಕಡಿಮೆ ಗಲಭೆಗಳು ನಡೆದಿದ್ದು 2011ರಲ್ಲಿ 580 ಘಟನೆಗಳು. 2015 ಅಕ್ಟೋಬರ್‌ವರೆಗೆ–823 ಅತೀ ಹೆಚ್ಚು. 2013ರಲ್ಲಿ ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಕೋಮು ಗಲಭೆಗಳು ಗಮನಾರ್ಹವಾಗಿ ಏರಿಕೆಯಾಗಿವೆ. ಕಾರಣ ಅದು ಚುನಾವಣಾ ವರ್ಷ. ಮತೀಯ ಆಧಾರದಲ್ಲಿ ಮತ ಕ್ರೋಢೀಕರಣಕ್ಕೆ ಸಂಘಪರಿವಾರ, ಬಿಜೆಪಿ ಅತ್ಯಂತ ಯೋಜಿತವಾಗಿ ಕೋಮುಧಾಳಿಗಳನ್ನು ಅಲ್ಲಿ ನಡೆಸಿತು. ಇಂತಹ ಕೋಮು ಧಾಳಿಗಳು ಬಿಹಾರದಲ್ಲಿ ಹಿಂದಿಗಿಂತ 3 ಪಟ್ಟು ಉತ್ತರ ಪ್ರದೇಶದಲ್ಲಿಯೂ 3 ಪಟ್ಟು ಹೆಚ್ಚಾದವು.

ಕೋಮು ಗಲಭೆಗಳು ಹೆಚ್ಚಿರುವ 8 ರಾಜ್ಯಗಳನ್ನೂ ಒಳಗೊಂಡು ದೇಶದ ಬಹುತೇಕ ರಾಜ್ಯಗಳಲ್ಲಿ ಕೋಮುವಾದಿ–ಮತೀಯ ಮೂಲಭೂತವಾದಿ ಶಕ್ತಿಗಳ ಧಾಳಿಗಳು ವಿಸ್ತರಿಸಿವೆ. ಕೋಮುಗಲಭೆ ಎನ್ನುವಾಗಲೂ ಸಂಘಪರಿವಾರದಂತಹ ಶಕ್ತಿಗಳ ಏಕಮುಖ ದಾಳಿಗಳೇ ಆಗಿರುತ್ತವೆ. ಅಲ್ಲದೇ ಅನೇಕ ಸಣ್ಣ ಪುಟ್ಟ ಘಟನೆಗಳು ಎಂದು ಹಲವಾರು ಪ್ರಕರಣಗಳು ಕೋಮುಗಲಭೆಗಳ ಕಾಯ್ದೆಯಡಿ ದಾಖಲಾಗುವುದಿಲ್ಲ. ಈ ಅಂಕಿ–ಅಂಶಗಳ ಬಗ್ಗೆ ಅಭಿಪ್ರಾಯಿಸಿರುವ 'ಐಸೆಕ್' ಸಂಸ್ಥೆಯ ಮಾಜಿ ನಿರ್ದೇಶಕ ಆರ್.ಎಸ್. ದೇಶಪಾಂಡೆಯವರು ಇತರೆ ರಾಜ್ಯಗಳಿಗಿಂತ ಕೇಸ್‌ಗಳನ್ನು ತ್ವರಿತವಾಗಿ ದಾಖಲಿಸುವ ಕ್ರಮವೂ ಇಲ್ಲಿ ಪಾತ್ರ ವಹಿಸುತ್ತದೆ' ಎನ್ನುತ್ತಾರೆ. ಅದೇ ಹೊತ್ತಿನಲ್ಲಿ ಗಲಭೆಗಳು ಹೆಚ್ಚುತ್ತಿರುವುದನ್ನು ನಿರ್ಲಕ್ಷಿಸಲಾಗುವುದಿಲ್ಲ ಕೂಡ.

ರಾಜಕೀಯ ಹಿತಾಸಕ್ತಿ

ದೇಶದಲ್ಲಿ ಮತ್ತು ರಾಜ್ಯದಲ್ಲಿ ಕೋಮುಗಲಭೆಗಳು ಹೆಚ್ಚುತ್ತಾ ಹೋಗಿರುವುದನ್ನು ಇಲ್ಲಿರುವ ವಿವರಗಳಿಂದ ಸ್ಪಷ್ಟವಾಗಿ ಗುರುತಿಸಬಹುದು. ಶಾಂತಿ, ಸಾಮರಸ್ಯ–ಸೌಹಾರ್ದತೆಯ ಬೀಡು ಎಂದು ಕರೆಯುತ್ತಿರುವ ಕರ್ನಾಟಕವನ್ನು ಹಂತ ಹಂತವಾಗಿ ಅಸಹಿಷ್ಣುತೆ, ಅಶಾಂತಿ, ಮತೀಯ ದ್ವೇಷ, ಗಲಭೆಗಳ ರಾಜ್ಯವನ್ನಾಗಿ ಮಾಡಲಾಗುತ್ತಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ಗಲಭೆಗಳ ಪ್ರಮಾಣವೂ ಹೆಚ್ಚಲು ದೇಶದ ರಾಜಕೀಯದಲ್ಲಾದ ಬದಲಾವಣೆಗಳ ಪರಿಣಾಮವೂ ಇದೆ ಹೌದು. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಮತ್ತೇ ಅಧಿಕಾರಕ್ಕೇರುತ್ತಿದ್ದಂತೆ, ಸಂಘ ಪರಿವಾರದ ಶಕ್ತಿಗಳು ಇನ್ನಷ್ಟು ಚುರುಕಾಗಿವೆ, ಆಕ್ರಮಣಶೀಲವಾಗಿವೆ. ಕೇಂದ್ರದ ಅಧಿಕಾರದ ಸರ್ವ ಬಲ ಬಳಸಿ ಮತೀಯ ಆಧಾರದಲ್ಲಿ ಸಮಾಜವನ್ನು ವಿಭಜಿಸುವ ದುಷ್ಟ ಆಟಕ್ಕೆ ಕೋಮುವಾದಿಗಳು, ಮತೀಯ ಮೂಲಭೂತವಾದಿಗಳು ಇಳಿದಿದ್ದಾರೆ. ಕರ್ನಾಟಕದಲ್ಲಿ 2010 ಮತ್ತು 2013ರ ಅವಧಿಯಲ್ಲಿ ಬಿಜೆಪಿ ಅಧಿಕಾರವಿರುವಾಗಲೇ ಈ ಗಲಭೆಗಳು ತೀವ್ರವಾಗಿದ್ದವು. ಸರಕಾರವೇ ಗಲಭೆಖೋರರನ್ನು ರಕ್ಷಿಸುವ, ಕೃತ್ಯಗಳನ್ನು ಸಮರ್ಥಿಸುವ ಭಂಡತನವನ್ನು ಮುಚ್ಚು ಮರೆಯಿಲ್ಲದೇ ಮಾಡುತ್ತಿತ್ತು.

ಇದರಿಂದ ರೋಸಿ ಹೋದ ಜನತೆ ಪರ್ಯಾಯವಾಗಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರು. ಪರಿಸ್ಥಿತಿ ಬದಲಾಯಿತೇ? ನಿಜ, ಹಿಂದಿನಂತೆಯೇ ಅತ್ಯಂತ ದ್ವೇಷಮಯವಾಗಿದೆ ಎಂದು ಸಾರಾ ಸಗಾಟಾಗಿ ಹೇಳಲಾಗದಿದ್ದರೂ ಗಲಭೆಗಳಿಂದ ರಾಜ್ಯ ಮುಕ್ತವಾಗಲಿಲ್ಲ. ಸಂಘ ಪರಿವಾರದ ಆಕ್ರಮಣಶೀಲತೆ ತಗ್ಗಲಿಲ್ಲ. ರಾಜ್ಯದಲ್ಲಿ ಕರಾವಳಿ ಜಿಲ್ಲೆಗಳು ಕೋಮುವಾದಿಗಳ ಹಿಂಸಾತ್ಮಾಕ ಕೃತ್ಯಗಳಿಗೆ ನರಮಂಡಲ ಕೇಂದ್ರ ಎನ್ನುತ್ತವೆ ವಿಶ್ಲೇಷಣೆಗಳು. ಈ ಗಲಭೆಗಳು ಕರಾವಳಿಯಿಂದ ಮಲೆನಾಡಿನತ್ತ, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ ಹೀಗೆ ಎಲ್ಲಾ ಜಿಲ್ಲೆಗಳನ್ನೂ ವ್ಯಾಪಿಸುತ್ತಿವೆ. 2014 ಮತ್ತು 2015ರಲ್ಲಿ ಗಲಭೆಗಳ ನಿರಂತರ ಏರಿಕೆಯಿದೆ. ಮುಖ್ಯವಾಗಿ ಕರಾವಳಿ ಜಿಲ್ಲೆಗಳಲ್ಲಿ ಗುಜರಾತ್‌ನ 'ಪ್ರೋಗ್ರಾಂ' ಮಾದರಿಯನ್ನು ಅನುಸರಿಸುತ್ತಾ, ಗೋ ರಕ್ಷಣೆಯ ರಾಜಕೀಯವನ್ನು ಹತ್ಯಾ ರಾಜಕೀಯವನ್ನಾಗಿಸುತ್ತಿರುವುದು ಇದನ್ನೇ ರಾಜ್ಯದಲ್ಲಿ ಪ್ರಧಾನ ಪ್ರಶ್ನೆಯನ್ನಾಗಿಸಲಾಗುತ್ತಿದೆ. ಇದಲ್ಲದೇ 2015ರಲ್ಲೇ ಬೆಳಗಾವಿ–ಕಾಕೋಡ್ಕರ್‌ಗಲ್ಲಿ, ಬಾಗಲಕೋಟೆ, ಮುದ್ದೇಬಿಹಾಳ, ಚಿಕ್ಕೋಡಿ, ಸುರಪುರಗಳಲ್ಲಿ ಗಣೇಶೋತ್ಸವದ ಸಂದರ್ಭವನ್ನು ಅಲ್ಪಸಂಖ್ಯಾತರ ವಿರುದ್ಧ ಜನರನ್ನು ಎತ್ತಿಕಟ್ಟಿ ಗಲಭೆ ಎಬ್ಬಿಸಲು ನೆಪವಾಗಿ ಬಳಸಲಾಯಿತು.

ಶರಣಾಗತಿಯ ಕಾಂಗ್ರೆಸ್

ಕೆ.ಜೆ.ಜಾರ್ಜ್ ಗೃಹ ಸಚಿವರಿದ್ದ ಅವಧಿಯಲ್ಲಿ ದಕ್ಷಿಣ ಕನ್ನಡದಲ್ಲಿ ಗಲಭೆಗಳು ನಡೆಯುತ್ತಲೇ ಹೋದವಲ್ಲದೇ ಚುನಾವಣೆ ಫಲಿತಾಂಶದ ನಂತರ ಹುಟ್ಟಿದ್ದ ಶಾಂತಿ ಸ್ಥಾಪನೆಯ ಆಶಾವಾದಕ್ಕೆ ಸಂಘ ಪರಿವಾರದ ಕೃತ್ಯಗಳು ಪೂರ್ಣ ಬೆಂಕಿ ಹಚ್ಚಿದವು. ಅಲ್ಲದೇ ಶಿವಮೊಗ್ಗ, ತುಮಕೂರಿನ ಶಿರಾ, ರಾಯಚೂರು ಜಿಲ್ಲೆಗಳಲ್ಲಿ ಕೋಮುಗಲಭೆಗಳು ಸಂಭವಿಸಿದವು. ಉದಾರೀಕರಣದ ಆರ್ಥಿಕ ನೀತಿಗಳನ್ನೇ ಅನುಸರಿಸುವ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ನಿರೀಕ್ಷೆಗಳನ್ನು ಈಡೇರಿಸುತ್ತಿಲ್ಲ ಎಂಬ ಅತೃಪ್ತಿ ಹೆಚ್ಚುತ್ತಿರುವಂತೆ ಸಂಘಪರಿವಾರ ಅದನ್ನು ಬಳಸಲು ಕೋಮುಗಲಭೆಗಳನ್ನು ಅತ್ಯಂತ ವ್ಯವಸ್ಥಿತವಾಗಿ ಹೆಣೆದು ಬಳಸಿಕೊಳ್ಳುತ್ತಿದೆ. ಆಡಳಿತ ಯಂತ್ರದಲ್ಲಿಯೂ ಸಂಘಪರಿವಾರವನ್ನು ಬೆಂಬಲಿಸುವ ಸ್ವಯಂ ಸೇವಕರಿರುವುದನ್ನೂ ಬಹಿರಂಗವಾಗಿ ಒಪ್ಪಿಕೊಳ್ಳಲಾಗಿದೆ!

ನಾಡಿನ ಖ್ಯಾತ ಸಂಶೋಧಕ ಡಾ|| ಎಂ.ಎಂ. ಕಲಬುರ್ಗಿಯವರ ಹತ್ಯೆ. ರಾಜ್ಯವನ್ನು, ದೇಶವನ್ನೂ ತಲ್ಲಣಗೊಳಿಸಿತು. ಈ ಹತ್ಯೆಗಾರರಿಗೆ ಗಡಿಯಾಚೆ ಸಂಬಂಧವಿರುವುದು ಮತ್ತಷ್ಟು ಗಾಬರಿ ಹುಟ್ಟಿಸುವ ಸಂಗತಿ. ಟಿಪ್ಪು ಜಯಂತಿ ವಿರೋಧದ ಹೆಸರಿನಲ್ಲಿ ಕೊಡಗು ಮತ್ತೆ ಕೋಮುವಾದಿಗಳ ಅಟ್ಟಹಾಸದಲ್ಲಿ ನಲುಗಿತು. ದಕ್ಷಿಣ ಕನ್ನಡ, ಕೊಡಗು, ಮೈಸೂರು ಮುಂತಾದೆಡೆ ಅವರದ್ದೇ ಕ್ರಿಮಿನಲ್ ಕಾರಣಗಳಿಗೆ ಹತ್ಯೆಯಾದವರನ್ನೂ ಹುತಾತ್ಮರೆಂದು ಬಿಂಬಿಸಿ, ಹಿಂಸಾತ್ಮಕ ಗಲಭೆಗಳಿಗೆ ಕುಮ್ಮಕ್ಕು ನೀಡಲಾಯಿತು ಮತ್ತು ಗಂಭೀರ ಸಂಗತಿಯೆಂದರೆ ಕೇಂದ್ರದ ಮೋದಿ ಮಾದರಿಯಲ್ಲಿ ವಿಚಾರವಂತರನ್ನು, ಜನಪರ ಹೋರಾಟಗಾರರನ್ನು 'ದೇಶದ್ರೋಹಿ'ಗಳೆಂದು ಕ–ರೆದು ಮನಬಂದಂತೆ ದೇಶದ್ರೋಹದ ಕೇಸ್‌ಗಳನ್ನು ದಾಖಲಿಸಲಾಯಿತು. ಬಳ್ಳಾರಿ ಜಿಲ್ಲೆ ಹೊಸಪೇಟೆಯ ಸಾಮಾಜಿಕ ಕಳಕಳಿಯ ಯುವಕ ಖಾಜಾ ಪೀರ್ ಹೆಸರಿನಲ್ಲಿ ಕರಪತ್ರ ಹಾಕಿಸಿ ಆತನಿಗೆ ಐಎಸ್‌ಐಎಸ್ ನಂಟಿದೆ ಎಂದು ಸುಳ್ಳು ಪ್ರಚಾರಿಸಿ ಜನರನ್ನು ಪ್ರಚೋದಿಸಲಾಯಿತು. ಆತನ ಮೇಲೆ ಮೊಕದ್ದಮೆ ಹೂಡಲಾಯಿತು. ಗಲಭೆಗೆ ಯತ್ನಿಸಿದರೂ ಜನತೆಯ ಜಾಗೃತಿಯಿಂದ ಸಂಚುಖೋರರ ಯತ್ನ ಫಲಿಸಲಿಲ್ಲ. ಹಂಪಿ ಹೊನ್ನೂರು ವಲಿ ದರ್ಗಾ, ಹನುಮಂತನ ಬಳಕೆ ಯತ್ನ ನಡೆದೇ ಇವೆ. ಇಂತಹ 15 ಪ್ರಕರಣಗಳು ಇತ್ತೀಚೆಗೆ ರಾಜ್ಯದಲ್ಲಿ ದಾಖಲಾದ ಬಗ್ಗೆ ವರದಿಗಳಿವೆ. ಹೀಗೆ ಅನೇಕ ಘಟನೆಗಳನ್ನು ಪ್ರಸ್ತಾಪಿಸುತ್ತಾ ಹೋಗಬಹುದು.

ಇಂದು ರಾಜ್ಯದಲ್ಲಿ ಪ್ರಗತಿಪರರು, ಜನಪರ ಹೋರಾಟಗಾರರು, ಎಡ ಚಿಂತಕರು, ವಿಚಾರವಾದಿಗಳ ಮೇಲೆ ಕೋಮುವಾದಿಗಳ ಅಸಹನೆಯು ಹತ್ಯಾ ರಾಜಕಾರಣವಾಗಿ ಬೆಳೆಯುತ್ತಿದೆ. ಈ ಪ್ರತಿಗಾಮಿಗಳನ್ನು ಮಟ್ಟ ಹಾಕುವಲ್ಲಿ ಸರಕಾರವೂ ವಿಫಲವಾಗಿದೆ. ಕೋಮುವಾದಿಗಳು, ಮತೀಯವಾದಿಗಳು ನಿರ್ಭಯವಾಗಿದ್ದಾರೆ. ಜಾತ್ಯಾತೀತತೆ, ಪ್ರಜಾಪ್ರಭುತ್ವಕ್ಕೆ, ಸಾಮಾಜಿಕ ನ್ಯಾಯಕ್ಕೆ ಬದ್ಧವೆಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷವೂ ಸಹ ಕೋಮುವಾದವನ್ನು ದೃಢವಾಗಿ ಎದುರಿಸದೇ ಸೋತಿದೆ, ಇಲ್ಲವೇ ರಾಜಿ ಮನೋಭಾವ ತೋ ರುತ್ತಿದೆ. ಇಷ್ಟೆಲ್ಲಾ ಘಟನೆಗಳು ನಡೆದ ಬಳಿಕವಾದರೂ ಸನ್ನಿವೇಶದ ಗಂಭೀರತೆಯನ್ನು ಪರಿಗಣಿಸುತ್ತಿಲ್ಲ. ಬದಲಾಗಿ 'ಮೃದು ಹಿಂದುತ್ವ'ದ ಧೋರಣೆ ಯು ಸರಕಾರ ಮತ್ತು ಆಡಳಿತ ಕಾಂಗ್ರೆಸ್ ಪಕ್ಷದ ವಿವಿಧ ಹಂತಗಳಲ್ಲಿ ಜೀವಂತವಿದೆ. ಮೇಲಾಗಿ ಮತೀಯವಾದಿಗಳ ಅರ್ಭಟವನ್ನು, ದುರಾಕ್ರಮಣವನ್ನೂ ಎದುರಿಸುವ ಬದ್ಧತೆ ಕಾಣುತ್ತಿಲ್ಲ. ಬದಲಾಗಿ ಅವರ ಧಾಳಿಗಳಿಗೆ ಹೆದರುತ್ತಿದೆ. ಇಲ್ಲವಾದಲ್ಲಿ ಕರಾವಳಿಯಲ್ಲಿ ಸಂಘಪರಿವಾರದವರ ಪುಂಡಾಟಿಕೆ ಮುಂದುವರೆಯುತ್ತಿರಲಿಲ್ಲ. ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ದಂಧೆಗಾರ ಕೊಲೆಯಾದಾಗ 5 ಲಕ್ಷ ಪರಿಹಾರ ಹಣ ನೀಡುತ್ತಿರಲಿಲ್ಲ. ಕೊಡಗಿನ ಗಲಭೆಗಳಿಗೆ ಕಾರಣವಾದವರ ಬದಲು ಪೋಲಿಸ್ ಅಧಿಕಾರಿಗಳ ಮೇಲೆ ಆರೋಪ ಮಾಡುತ್ತಿರಲಿಲ್ಲ. ರಕ್ಷಿತ ಅರಣ್ಯದಲ್ಲಿ ಪ್ರತ್ಯೇಕತಾವಾದಿಗಳಿಗೆ ಸ್ಮಾರಕ ಮಾಡಲು ಅವಕಾಶ ನೀಡುತ್ತಿರಲಿಲ್ಲ, ಮುಖ್ಯವಾಗಿ ಯಾರೋ ದೂರು ಹೇಳಿದರೆಂದು ತುಮಕೂರಿನಲ್ಲಿ 2 ಸಲ ಎ.ಐ.ಎಸ್.ಎಫ್ ವಿದ್ಯಾರ್ಥಿ ನಾಯಕರು, ಗೃಹ ಸಚಿವ ಡಾ.ಜಿ.ಪರಮೇಶ್ವರ್‌ರವರ ಕಾಲೇಜಿನ ವಿದ್ಯಾಥಿಯೊಬ್ಬನ ಮೇಲೆ, ಬೆಂಗಳೂರಿನ ಅಮ್ನೆಸ್ಟಿ ಇಂಟರ್ ನ್ಯಾಷನಲ್ ಸಂಸ್ಥೆ ಮೇಲೆ ಸತ್ಯಾಸತ್ಯ ಪರಿಶೀಲಿಸದೇ ಏಕಾಏಕಿ 'ದೇಶದ್ರೋಹ'ದ ಕೇಸು ಹಾಕುತ್ತಿರಲಿಲ್ಲ.

ಅಪಾಯಕಾರಿ ಸನ್ನಿವೇಶ

ಹೀಗೆ ರಾಜ್ಯದ ಕಾಂಗ್ರೆಸ್ ಸರಕಾರ ಕೋಮುವಾದಿಗಳನ್ನು, ಮತೀಯವಾದಿಗಳನ್ನು ದಮನಿಸಲು ಸೋತಿದೆ. ಸಂಘ ಪರಿವಾರ–ಬಿಜೆಪಿ ಪಕ್ಷ ಮತ್ತಷ್ಟು ಗಲಭೆ, ದುರಾಕ್ರಮಣ, ಹತ್ಯಾ ರಾಜಕಾರಣವನ್ನೂ ಮುಂದೊತ್ತುತ್ತಲೇ ಬರುತ್ತಿದೆ.

ಆದ್ದರಿಂದಲೇ ಎನ್.ಸಿ.ಆರ್.ಬಿ.ಯ ವರದಿ ಪರಿಪೂರ್ಣ ಎನ್ನಲಾಗದಿದ್ದರೂ ಅದರ ವಿವರಗಳು ನಾಡಿನ ಜನತೆಯನ್ನು ಎಚ್ಚರಿಸುವಂತಿದೆ. ಕೋಮುಗಲಭೆ ಮತ್ತು ರಾಜಕೀಯ ಗಲಭೆಗಳಲ್ಲಿ 2ನೇ ಸ್ಥಾನ ಕರ್ನಾಟಕದ್ದು ಎನ್ನುವಾಗಲೂ ಇಡೀ ರಾಜ್ಯವೇ ಗುಜರಾತ್‌ನಂತೆ, ಉತ್ತರ ಪ್ರದೇಶದಂತೆ ಕೋಮು ವಿಭಜನೆ ಮತೀಯ ಕ್ರೋಢಿಕರಣಗಳನ್ನು ದಟ್ಟವಾಗಿ ಆವರಿಸಿಕೊಂಡಿಲ್ಲ ಎಂಬುದು ಸತ್ಯ. ಈಗಲೂ ಕರ್ನಾಟಕದಲ್ಲಿ ಮತ ನಿರಪೇಕ್ಷತೆಯ ಶಕ್ತಿಗಳು ಮತ್ತು ಸೌಹಾರ್ದ ಪರಂಪರೆ ಶಕ್ತಿಯುತವಾಗಿದೆ. ಆದ್ದರಿಂದ ಕೋಮುವಾದಿಗಳು ಫ್ಯಾಸಿಸ್ಟ್ ಸ್ವರೂಪದ ಧಾಳಿಗಳನ್ನು ಪದೇ ಪದೇ ನಡೆಸುತ್ತಿದ್ದಾರೆ.

ಆದ್ದರಿಂದ ಈ ಶಕ್ತಿಗಳನ್ನು ಎದುರಿಸುವುದಕ್ಕೆ ಅಧಿಕಾರ ಕೇಂಧ್ರದಲ್ಲಿರುವ ಯಾರನ್ನೋ ಕಾಯುತ್ತಾ ಕೂರುವುದರಲ್ಲಿ ಅರ್ಥವೇ ಇಲ್ಲ. ಪ್ರತಿರೋಧ ಒಡ್ಡಲು, ನಮ್ಮ ನಾಡು, ಜನತೆಯ ಒಗ್ಗಟ್ಟು ಉಳಿಸಿಕೊಳ್ಳಲು ಪ್ರತಿಯೊಬ್ಬರೂ ಕ್ರಿಯಾಶೀಲವಾಗುವುದು ಅತ್ಯಗತ್ಯ. ನಾಡಿನ ಜನತೆಯ ಒಗ್ಗಟ್ಟು, ಸಾಮಾಜಿಕ ಸ್ವಾಸ್ತ್ಯತೆ, ಶಾಂತಿ ಕಾಪಾಡುತ್ತಾ ಸಮಾಜ ಬದಲಾವಣೆಯ ಹೋರಾಟದಲ್ಲಿ ಎಲ್ಲರನ್ನೂ ತೊಡಗಿಸುವುದು ತುರ್ತಿನ ಕರ್ತವ್ಯ. ಎನ್.ಸಿ.ಆರ್.ಬಿ.ಯ ವರದಿ ಎಚ್ಚರಿಕೆಯ ಗಂಟೆಯೂ ಕೂಡ. ●

ಮಂಗಳೂರಿನ ಸುರಲ್ಪಾಡಿ ಮುಸ್ಲಿಂ ಜಮಾತ್ ತನ್ನ ಜಮಾತಿನ ಸದಸ್ಯ ಬಾವ ಪದರಂಗಿ ಕುಟುಂಬವನ್ನು ಸಣ್ಣ ಪುಟ್ಟ ಭಿನ್ನ ಮತದ ಹಿನ್ನಲೆಯಲ್ಲಿ ಜಮಾತಿನಿಂದ ಹೊರಹಾಕಿರುವುದು ವಿಷಾದನೀಯ. ಜನನ, ಮರಣ, ಮದುವೆಗಳನ್ನೆಲ್ಲ ದಾಖಲಿಸುವ ಅಧಿಕಾರ ಹೊಂದಿರುವ ಊರಿನ ಜಮಾತಿನಿಂದ ಹೊರಹಾಕಲ್ಪಟ್ಟರೆ ಆ ಕುಟುಂಬ ಇಡೀ ಊರಿನಿಂದ ಬೇರ್ಪಟ್ಟು ಏಕಾಂಗಿಯಾಗುತ್ತದೆ. ಬಹಿಷ್ಕೃತಗೊಳ್ಳುತ್ತದೆ. ಬಾವ ಪದರಂಗಿ ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರಾಗಿ ಗುರುತಿಸಿಕೊಂಡವರು. ಈಗಿನ ಆಧುನಿಕ ಕಾಲಘಟ್ಟದಲ್ಲಿ ಅವರ ಮೇಲೆ ಈ ರೀತಿ ಬಹಿಷ್ಕಾರ ಹಾಕಿರುವುದು ಒಪ್ಪಲಾಗದು. ಆದರಲ್ಲೂ ಜಮಾತಿನಿಂದ ಹೊರಹಾಕಲ್ಪಟ್ಟ ಸುದ್ದಿಯ ಬಗ್ಗೆ ಮಾಹಿತಿ ಪಡೆಯಲು ತೆರಳಿದ ಮಾಧ್ಯಮದ ಮಂದಿಯ ಮೇಲೆ ದೌರ್ಜನ್ಯವೆಸಗಿರುವುದು ಜನಸಮುದಾಯದ ಆಕ್ರೋಶಕ್ಕೆ ಕಾರಣವಾಗಿದೆ. ಈಗಲಾದರೂ ಊರಿನ ಹಿರಿಯರು ಪ್ರತಿಷ್ಟೆ ತೊರೆಯಬೇಕು. ತಕ್ಷಣ ಬಾವಾ ಪದರಂಗಿ ಕುಟುಂಬದ ಮೇಲಿನ ಉಚ್ಚಾಟನೆಯ ನಿರ್ಧಾರವನ್ನು ಹಿಂಪಡೆಯಬೇಕು. ಸೂರಲ್ಪಾಡಿ ಮುಸ್ಲಿಂ ಜಮಾತ್ ಅಂತಹದ್ದೊಂದು ನಿರ್ಧಾರ ಕೈಗೊಳ್ಳುತ್ತದೆ ಎಂಬ ನಿರೀಕ್ಷೆ ನಮ್ಮೆಲ್ಲರದ್ದು. ಇಲ್ಲದಿದ್ದಲ್ಲಿ ಬಾವ ಪದರಂಗಿ ಪರ ನಾಡಿನ ಪ್ರಜ್ಞಾವಂತರು ನಿಲ್ಲಲಿದ್ದಾರೆ.

– ಮುನೀರ್ ಕಾಟಿಪಳ್ಳ

ಉಡುಪಿ: ನಿವೇಶನ ಹಕ್ಕು ಪತ್ರಕ್ಕೆ ಒತ್ತಾಯಿಸಿ ಪ್ರತಿಭಟನೆ


ಸಾಲಿಗ್ರಾಮ

ಉಡುಪಿ ಜಿಲ್ಲೆಯ ಕಾರ್ಕಡ, ಗುಂಡ್ಮಿ ಚಿತ್ರಪಾಡಿ ಹಾಗೂ ಪಾರಂಪಳ್ಳಿ ಗ್ರಾಮಗಳ ಬಡ ನಿವೇಶನ ರಹಿತರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯೂಯು)ದ ತಾಲೂಕು ಸಮಿತಿ ನೇತೃತ್ವದಲ್ಲಿ ಮನೆ, ನಿವೇಶನ ಹಕ್ಕು ಪತ್ರ ಕೋರಿ ಸಲ್ಲಿಸಿದ ಅರ್ಜಿಯನ್ನು ಕೂಡಲೇ ವಿಲೇವಾರಿ ಮಾಡಬೇಕು ಎಂದು ಒತ್ತಾಯಿಸಿ ಸೆಪ್ಟಂಬರ್ 4ರಂದು ಸಾಲಿಗ್ರಾಮ ಪಟ್ಟಣ ಪಂಚಾಯತ್ ಕಛೇರಿ ಎದುರು ಬೃಹತ್ ಪ್ರತಿಭಟನಾ ಮುಷ್ಕರ ಮಾಡಿದರು.

ಮನೆ, ನಿವೇಶನ ರಹಿತ ಅರ್ಜಿದಾರರು ಪ್ರತಿಭಟನಾ ಮುಷ್ಕರ ಹೋರಾಟದ ಪೂರ್ವದಲ್ಲಿ ಸಾಲಿಗ್ರಾಮದ ಗಣೇಶ ಕೃಪಾ ಸಭಾಭವನದಲ್ಲಿ ಜರಗಿದ ಬೃಹತ್ ಸಮಾವೇಶದಲ್ಲಿ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡುತ್ತಾ "ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ 4 ಗ್ರಾಮಗಳ ಮನೆ, ನಿವೇಶನ ರಹಿತರು ಭೂಮಿ ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಸಲ್ಲಿಸಿದ 838 ಅರ್ಜಿಗಳನ್ನು ಕೂಡಲೇ ಪರಿಶೀಲಿಸಿ, ನಿವೇಶನ ರಹಿತರ ಅಂತಿಮ ಪಟ್ಟಿ 3 ತಿಂಗಳ ಅವಧಿಯೊಳಗೆ ಸಂಪೂರ್ಣಗೊಳಿಸಬೇಕು ಎಂದು ಸರಕಾರವನ್ನು ಒತ್ತಾಯಿಸಿದರು. ಇಲ್ಲವಾದರೆ ಭೂಮಿ ಹಕ್ಕಿನ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ನಿವೇಶನ ರಹಿತರ ಸಮಾವೇಶದಲ್ಲಿ ಕೃಷಿ ಕೂಲಿಕಾರರ ಸಂಘದ ಉಡುಪಿ ತಾಲೂಕು ಅಧ್ಯಕ್ಷ ಎಚ್.ವಿಠಲ ಪೂಜಾರಿ ಮಾತನಾಡಿದರು. ಸರಕಾರಿ ಸ್ಥಳವನ್ನು ಗುರುತಿಸಿ ನಿವೇಶನ ರಹಿತರಿಗೆ ಭೂಮಿ ಹಕ್ಕು ಪತ್ರ ಮಂಜೂರು ಮಾಡಬೇಕು ಎಂದು ಹೇಳಿದರು.

ಸಾಲಿಗ್ರಾಮದ ಪ್ರಮುಖ ರಸ್ತೆಯಲ್ಲಿ ನಿವೇಶನ ರಹಿತ ಅರ್ಜಿದಾರರು ಪ್ರತಿಭಟನಾ ಮೆರವಣಿಗೆಯಲ್ಲಿ ಭೂಮಿ ಹಕ್ಕು ಪತ್ರಕ್ಕಾಗಿ ಘೋಷಣೆ ಕೂಗುತ್ತಾ ಸಾಲಿಗ್ರಾಮ ಪಟ್ಟಣ ಪಂಚಾಯತ್ ಕಛೇರಿ ಎದುರು ಬೃಹತ್ ಪ್ರತಿಭಟನಾ ಮುಷ್ಕರ ನಡೆಸಿದರು.

ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಸಂಘದ ಸಾಲಿಗ್ರಾಮ ಸಮಿತಿ ಅಧ್ಯಕ್ಷ ಮಾಧವ ಸಾಲಿಗ್ರಾಮ, ಕಾರ್ಯದರ್ಶಿ ರಾಮ ಕಾರ್ಕಡ, ಕವಿರಾಜ ಉಡುಪಿ, ಶೋಭಾ ಗುಂಡ್ಮಿ, ಪದ್ಮಾವತಿ ಶೆಟ್ಟಿ, ಕುಶಲ ಇವರು ಉಪಸ್ಥಿತರಿದ್ದರು.

ರ್‍ಯಾಲಿ, ಪ್ರತಿಭಟನಾ ಪ್ರದರ್ಶನದ ನಂತರ, ಸಾಲಿಗ್ರಾಮ ಪಟ್ಟಣ ಪಂಚಾಯತ್ ಅಧ್ಯಕ್ಷೆ ವಸುಮತಿ ನಾಗೇಶ ನಾಯರಿ, ಉಪಾಧ್ಯಕ್ಷ ಉದಯ ಪೂಜಾರಿ, ಸದಸ್ಯರಾದ ಕರುಣಾಕರ ಪೂಜಾರಿ ಇವರಿಗೆ ನಿವೇಶನ ರಹಿತರ ಭೂಮಿ ಹಕ್ಕಿನ ಬೇಡಿಕೆಯ ಮನವಿಯನ್ನು ಹಸ್ತಾಂತರಿಸಲಾಯಿತು.

ಬಳ್ಕೂರು : ನಿವೇಶನ ಹಕ್ಕು ಪತ್ರಕ್ಕೆ ಆಗ್ರಹಿಸಿ ಸಮಾವೇಶ

ಬಳ್ಕೂರು ಗ್ರಾಮದಲ್ಲಿರುವ ಸರಕಾರಿ ಸ್ಥಳದಲ್ಲಿರುವ ನಿವೇಶನ ರಹಿತರಿಗೆ ಹಕ್ಕು ಪತ್ರ ವಿತರಣೆ ಮಾಡಲು ಒತ್ತಾಯಿಸಿ ಬಳ್ಕೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತ ಅರ್ಜಿದಾರರ ಬೃಹತ್ ಸಮಾವೇಶವು ಆಗಸ್ಟ್ 27ರಂದು ಬಳ್ಕೂರು ಗ್ರಾಮ ಪಂಚಾಯತ್ ಹಳೇ ಕಛೇರಿ ವಠಾರದಲ್ಲಿ ಯಶಸ್ವಿಯಾಗಿ ಜರಗಿತು.

ಸಿಐಟಿಯು ಕುಂದಾಪುರ ತಾಲೂಕು ಅಧ್ಯಕ್ಷ ಎಚ್. ನರಸಿಂಹ ಮಾತನಾಡಿದರು. ಕೃಷಿ ಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಮುಖಂಡರಾದ ರಮೇಶ ಗುಲ್ವಾಡಿ, ಜ್ಯೋತಿ ಉಪಾಧ್ಯ, ಮಹಾಬಲ ಬಳ್ಕೂರು, ಉಪಸ್ಥಿತರಿದ್ದರು.

ಕೋಣಿ : ನಿವೇಶನ ರಹಿತರ ಧರಣಿ ಮುಷ್ಕರ

ಕೋಣಿ ಗ್ರಾಮ ಪಂಚಾಯತ್ ವ್ಯಾಪ್ತಿ ಮನೆ, ನಿವೇಶನ ರಹಿತರು ಭೂಮಿ ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಆಗಸ್ಟ್ 28ರಂದು ಕೋಣಿ ಗ್ರಾಮ ಪಂಚಾಯತ್ ಕಛೇರಿ ಎದುರು ಬೃಹತ್ ಪ್ರತಿಭಟನಾ ಸತ್ಯಾಗ್ರಹ ಜರಗಿತು.

ಧರಣಿ ಮುಷ್ಕರ ಹೋರಾಟಗಾರರನ್ನು ಉದ್ದೇಶಿಸಿ ಕೃಷಿ ಕೂಲಿಕಾರರ ಸಂಘದ ಮುಖಂಡ ರಮೇಶ ಪೂಜಾರಿ ಮಾತನಾಡಿದರು. ಕೋಣಿ ಗ್ರಾಮ ಪಂಚಾಯತ್ ಕಛೇರಿ ವತಿಯಿಂದ ನಿವೇಶನ ರಹಿತರ ಅಂತಿಮ ಪಟ್ಟಿ ಸಿದ್ಧಪಡಿಸಿ ವರ್ಷ ಕಳೆದರೂ ಸರಕಾರಿ ಭೂಮಿ ಗುರುತಿಸಿ ನಿವೇಶನ ಹಕ್ಕು ಪತ್ರ ಕೊಡದ ಸರಕಾರದ ನೀತಿಯನ್ನು ಖಂಡಿಸಿದರು.

28 ಸೆಪ್ಟಂಬರ್ 2016ರಂದು ಕುಂದಾಪುರ ತಹಶೀಲ್ದಾರ್ ಕಛೇರಿ ಎದುರು ಜರಗುವ ನಿವೇಶನ ರಹಿತರ ಬೃಹತ್ ಪ್ರತಿಭಟನಾ ಮುಷ್ಕರ ಯಶಸ್ವಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.


ಕಂದಾವರ

ಕೋಣಿ ಗ್ರಾಮ ಪಂಚಾಯತ್ ಅಧ್ಯಕ್ಷ ಕೆ. ಸಂಜೀವ ಮೊಗವೀರ ಕಾರ್ಯದರ್ಶಿ ನಾರಾಯಣ ನಾಯ್ಕ, ಗ್ರಾಮ ಪಂಚಾಯತ್ ಸದಸ್ಯೆ ಕೃಷ್ಣ ಪಿ.ಕೆ. ಇವರಿಗೆ ಸಾಮೂಹಿಕ ಮನವಿಯನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ, ಮುಖಂಡರಾದ ರಾಜೀವ ಪಡು–ಕೋಣೆ, ಗಣಪತಿ ಶೇಟ್ ಕೋಣಿ, ಉಪಸ್ಥಿತರಿದ್ದರು. ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

ಕಂದಾವರ : ನಿವೇಶನ ರಹಿತರ ಪ್ರತಿಭಟನೆ

ಕಂದಾವರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಕ್ಕುಪತ್ರಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ನಿವೇಶನ ರಹಿತರ ಅಂತಿಮ ಪಟ್ಟಿ ಸಿದ್ಧಪಡಿಸಿದರೂ ಹಕ್ಕು ಪತ್ರ ವಿತರಣೆಗೆ ವಿಳಂಬ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿ ನಿವೇಶನ ರಹಿತ ಅರ್ಜಿದಾರರು ಕಂದಾವರ ಗ್ರಾಮ ಪಂಚಾಯತ್ ಕಚೇರಿ ಎದುರು ಪ್ರತಿಭಟನಾ ಸತ್ಯಾಗ್ರಹವನ್ನು ನಡೆಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಗ್ರಾಮ ಪಂಚಾಯತ್ ಅಧ್ಯಕ್ಷ ಸವಿತಾ ಆರ್. ಪೂಜಾರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗಾಯತ್ರಿ, ಪಂಚಾಯತ್ ಸದಸ್ಯರಾದ ಸುರೇಂದ್ರ ಶೇರುಗಾರ, ರಾಮು ಶೇರುಗಾರ, ರಾಮು, ಗ್ರಾಮ ಲೆಕ್ಕಾಧಿಕಾರಿ ರಾದೇಶ ಇವರಿಗೆ ನಿವೇಶನ ರಹಿತರ ಪರವಾಗಿ ಭೂಮಿ ಹಕ್ಕಿನ ಬೇಡಿಕೆಯ ಮನವಿಯನ್ನು ಅರ್ಪಿಸಲಾಯಿತು. ಕೃಷಿಕೂಲಿಕಾರರ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ ಉಪಸ್ಥಿತರಿದ್ದರು.

ಸಂತೋಷ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಾಗೇಂದ್ರ, ಪಂಚಾಯತ್ ಸದಸ್ಯರಾದ ಮಹೇಶ, ದಿನಕರ ಶೆಟ್ಟಿ, ಮಲ್ಲಿಕಾರ್ಜುನ ಇವರಿಗೆ ಮನವಿ ಅರ್ಪಿಸಲಾಯಿತು.

ವರದಿ : ವೆಂಕಟೇಶ ಕೋಣಿ

ಶ್ರೀ ಕಟೀಲು ದೇವಿಗೆ ಅವಹೇಳನ
ಕೋಮು ಸಾಮರಸ್ಯವನ್ನು ಕದಡಲು ಪ್ರಯತ್ನ –ಸೂಕ್ತ ಕ್ರಮಕ್ಕೆ ಆಗ್ರಹ

ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಿಗೆ ಅವಹೇಳನ ಮಾಡುವ ಕೃತ್ಯವು ಸಾಮಾಜಿಕ ಜಾಲತಾಣಗಳಲ್ಲಿ ಹರಡಿದೆ. ಇದು ಖಂಡನೀಯ. ಇದೇ ಸಂದರ್ಭದಲ್ಲಿ ಘಟನೆಯನ್ನು ಮುಂದಿರಿಸಿಕೊಂಡು ಕೋಮು ವಿಷ ಭಾವನೆಯನ್ನು ಬಿತ್ತುವ ಕೆಲಸವನ್ನು ಕೆಲವೊಂದು ಶಕ್ತಿಗಳು ಕೈಗೊಂಡಿವೆ. ಇದು ಕೂಡ ಖಂಡನೀಯ. ಕರಾವಳಿ ಜಿಲ್ಲೆಗಳ ಅಭಿವೃದ್ಧಿ ಮತ್ತು ಶಾಂತಿ ಹಾಗೂ ಸೌಹಾರ್ದತೆಯನ್ನು ಕಾಪಾಡಲು ಎಲ್ಲರೂ ಒಂದುಗೂಡಬೇಕೆಂದು ಸೆಪ್ಟಂಬರ್ 08ರ ಪತ್ರಿಕಾ ಹೇಳಿಕೆಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಉಡುಪಿ ಜಿಲ್ಲಾ ಸಮಿತಿ ಜನತೆಯನ್ನು ಮನವಿ ಮಾಡಿದೆ.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೋಮು ಸಾಮರಸ್ಯವನ್ನು ಹಾಳು ಮಾಡಲು ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಿವೆ. ಲವ್ ಜಿಹಾದ್, ಗೋರಕ್ಷಣೆ ಮೊದಲಾದ ಹೆಸರಿನಲ್ಲಿ ಕೊಲೆ, ಸುಲಿಗೆ, ದೌರ್ಜನ್ಯಗಳು ನಡೆದಿವೆ. ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಿಗಳನ್ನು, ದೇವರುಗಳನ್ನು ನಿಂದಿಸುವ, ಆ ಮೂಲಕ ವಿವಿಧ ಕೋಮುಗಳಿಗೆ ಸೇರಿದ ಜನರನ್ನು ಉದ್ರೇಕಿಸುವ ಪ್ರಯತ್ನಗಳು ನಡೆಯುತ್ತಿವೆ.

ಯಾರೇ ಆಗಲಿ ದೇವರನ್ನು ಅವಹೇಳನ ಮಾಡುವುದು ಪ್ರಾರ್ಥನಾ ಮಂದಿರದ ಎದುರು ಮಾಂಸದ ತುಂಡುಗಳನ್ನು ಬಿಸಾಡುವುದು, ಮೂರ್ತಿಗಳನ್ನು ಒಡೆಯುವುದು, ವ್ಯಕ್ತಿಗಳನ್ನು ನಿಂದಿಸುವುದು, ಗೋ ಸಾಗಣೆಯ ಹೆಸರಿನಲ್ಲಿ ಹಲ್ಲೆ ಮಾಡುವುದು, ಕೊಲ್ಲುವುದು ತಪ್ಪು ಮತ್ತು ಖಂಡನೀಯ. ಅಂತಹ ಸಮಾಜ ಘಾತುಕ ಶಕ್ತಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕುಕೃತ್ಯವನ್ನು ಪ್ರತಿಭಟಿಸಬೇಕು. ಆದರೆ ಪ್ರತಿಭಟಿಸುವ ಹೆಸರಿನಲ್ಲಿ ಒಂದು ಧರ್ಮಕ್ಕೆ ಸೇರಿದ ಎಲ್ಲರನ್ನೂ ಹೊಣೆ ಮಾಡುವುದು ಸರಿಯಲ್ಲ. ಅಂತಹ ಪ್ರಚೋದನೆಗಳು ನಿಲ್ಲಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ವರದಿ : ಬಾಲಕೃಷ್ಣ ಶೆಟ್ಟಿ

ಕುಂದಾಪುರದಲ್ಲಿ ಕೃಷಿ ಕೂಲಿಕಾರರ ಸಂಘದ 6ನೇ ರಾಜ್ಯ ಸಮ್ಮೇಳನ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ **(AIAWU)**ದ 6ನೇ ರಾಜ್ಯ ಸಮ್ಮೇಳನವು ಡಿಸೆಂಬರ್ ಮೊದಲ ವಾರ ಉಡುಪಿ ಜಿಲ್ಲೆಯ ಕುಂದಾಪುರ ನಗರದಲ್ಲಿ ನಡೆಯಲಿದ್ದು ಪೂರ್ವ ಸಿದ್ಧತೆಗಾಗಿ ಸ್ವಾಗತ ಸಮಿತಿ ರಚನಾ ಸಭೆಯು ಆಗಸ್ಟ್ ಮೂರನೇ ವಾರದಲ್ಲಿ ಕುಂದಾಪುರ ಕಾರ್ಮಿಕ ಭವನದಲ್ಲಿ ಯಶಸ್ವಿಯಾಗಿ ಜರುಗಿತು.


ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಸ್ವಾಗತ ಸಮಿತಿ ರಚನಾ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಾ "ರಾಜ್ಯದಲ್ಲಿ ಕೃಷಿ ಕೂಲಿಕಾರರನ್ನು ಸಂಘಟಿಸುತ್ತಾ ಅವರ ಬದುಕಿನ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಶ್ರಮಿಸುತ್ತಿರುವ ಏಕೈಕ ಬಲಿಷ್ಠ ಸಂಘಟನೆ ನಮ್ಮದು. ಕರ್ನಾಟಕದಲ್ಲಿ ಸರಿ ಸುಮಾರು ಒಂದು ಕೋಟಿಯಷ್ಟು ಕೃಷಿಕೂಲಿಕಾರರು ಇದ್ದಾರೆ. ಗ್ರಾಮೀಣ ಪ್ರದೇಶದ ರೈತರ ಭೂಮಿಯಲ್ಲಿನ ಕೆಲಸವನ್ನು ಇವರು ಅವಲಂಬಿಸಿದ್ದಾರೆ. ಕಳೆದ 25 ವರ್ಷಗಳಿಂದ ದೇಶದಲ್ಲಿ ಜಾರಿಗೆ ತರಲಾಗಿರುವ ಉದಾರೀಕರಣದ ಧೋರಣೆಗಳಿಂದಾಗಿ ಕೃಷಿ ಕ್ಷೇತ್ರ ತೀವ್ರ ಇಕ್ಕಟ್ಟಿಗೆ ಒಳಗಾಗಿದ್ದು, ರೈತರು ದಿವಾಳಿಯಾಗುತ್ತಿದ್ದಾರೆ. ಸಣ್ಣ ಹಾಗೂ ಅತೀ ಸಣ್ಣ ರೈತರು ಭೂಮಿ ಕಳೆದುಕೊಂಡಿದ್ದಾರೆ. ಹೀಗಾಗಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಿದೆ. ಆದ್ದರಿಂದ ಕೃಷಿ ಕೂಲಿಕಾರರ ಬದುಕಿನ ಬವಣೆಯ ಪರಿಹಾರದ ಬೇಡಿಕೆಯೊಂದಿಗೆ ಕೃಷಿ ಕೂಲಿಕಾರರ ಕರ್ನಾಟಕ ರಾಜ್ಯ 6ನೇ ಸಮ್ಮೇಳನ ಕುಂದಾಪುರ ನಗರದಲ್ಲಿ ಯಶಸ್ವಿಯಾಗಿ ಜರುಗಿಸಲು ಸ್ವಾಗತ ಸಮಿತಿಯ ಸದಸ್ಯರೆಲ್ಲರೂ ಶಕ್ತಿ ಮೀರಿ ದುಡಿಯಬೇಕು ಎಂದು ಹೇಳಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕೆ.ಶಂಕರ, ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಕೋಶಾಧಿಕಾರಿಯಾಗಿ ರಾಜೀವ ಪಡುಕೋಣೆ ಒಳಗೊಂಡಂತೆ 65 ಮಂದಿ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಯು. ದಾಸಭಂಡಾರಿರವರು ಸಭೆಯ ಅ ಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಹೆಚ್.ನರಸಿಂಹ, ಸುರೇಶ ಕಲ್ಲಾಗರ, ಮಹಾಬಲ ವಡೇರ ಹೋಬಳಿ, ಬಾಲಕೃಷ್ಣ ಶೆಟ್ಟಿ, ವಿ.ನರಸಿಂಹ, ಉದಯಕುಮಾರ ತಲ್ಲೂರು, ರತಿಶೆಟ್ಟಿ, ಪಿ.ವಿಶ್ವನಾಥ ರೈ, ಎ.ಎಂ.ಪೂಜಾರಿ, ಬಾಬು ಬಳ್ಕೂರು, ಗೋಪಾಲ ಶೆಟ್ಟಿಗಾರ, ಎಚ್.ವಿಠಲ ಪೂಜಾರಿ, ಸುಬ್ರಹ್ಮಣ್ಯ ಪಡುಕೋಣೆ, ಜಿ.ಭಾಸ್ಕರ ಮಯ್ಯ, ಶ್ರೀಕಾಂತ ಹೆಮ್ಮಾಡಿ, ಕೃನಾ.ಚಾರ, ಮಾಧವ ಸಾಲಿಗ್ರಾಮ, ರಾಮ ಕಾರ್ಕಡ, ರಾಜೇಶ ವಡೇರ ಹೋಬಳಿ, ಶೀಲಾವತಿ, ಜಯಶ್ರೀ ಪಡುವರಿ, ನಾಗರತ್ನ ನಾಡ, ಗಣಪತಿ ಶೇಟ್, ಚಿಕ್ಕಮೊಗವೀರ ಗಂಗೊಳ್ಳಿ, ಅರುಣ ಗಂಗೊಳ್ಳಿ, ಪದ್ಮಾವತಿ ಶೆಟ್ಟಿ, ಕುಶಲ, ಸುಬ್ರಹ್ಮಣ್ಯ ಆಚಾರ, ಕವಿರಾಜ ರಮಾನಾಥ ಭಂಡಾರಿ, ಶಂಕರ ಆನಗಳ್ಳಿ, ಉಪಸ್ಥಿತರಿದ್ದರು.

– ವೆಂಕಟೇಶ ಕೋಣಿ

ಅತಿಥಿ ಅಂಕಣ



ದಲಿತ ರಾಜಕೀಯದಲ್ಲಿ ಹೊಸ ತಿರುವು

ಪ್ರೊ. ರಾಜೇಂದ್ರ ಚೆನ್ನಿ

ಕೆಲವು ದಿನಗಳಿಂದ ಭಾರತದ ಅನೇಕ ವಲಯಗಳಲ್ಲಿ ಗಂಭೀರವಾಗಿ ಚರ್ಚೆಯಾಗುತ್ತಿರುವ ವಿಷಯವೆಂದರೆ ದಲಿತ ಚರಿತ್ರೆಯಲ್ಲಿ ಒಂದು ಹೊಸ ತಿರುವು. ದಲಿತ ರಾಜಕೀಯ ಸಂವೇದನೆಯಲ್ಲಿ ಆಗುತ್ತಿರುವ ಅರ್ಥಪೂರ್ಣವಾದ ಪಲ್ಲಟದ ಬಗ್ಗೆ. 'ಜನಶಕ್ತಿ' ಯೂ ಕೂಡ ಈ ಬಗ್ಗೆ ಲವಲವಿಕೆಯಿಂದ ಸ್ಪಂದಿಸಿದೆ. ಅಂತರ್ಜಾಲದ ಮೂಲಕ ಲಭ್ಯವಾಗುತ್ತಿರುವ ಪ್ರಭಾವಿ ಲೇಖನಗಳು, ವಿಶ್ಲೇಷಣೆಗಳು ಹೊಸ ಚಿಂತನೆಗೆ ಅನುವು ಮಾಡಿಕೊಡುತ್ತಿವೆ. ಇದೆಲ್ಲ ಆರಂಭವಾದದ್ದು ಈ ದೇಶದ ಜಾತಿಗ್ರಸ್ತ ಮನಸ್ಸನ್ನು ಎಚ್ಚರಿಸಿದ ಎರಡು ಘಟನೆಗಳಿಂದ. ಒಂದು ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ ವೇಮುಲನ ಆತ್ಮಹತ್ಯೆ. ಇದರ ಹಿಂದಿನ ವಾಸ್ತವಗಳನ್ನು ಮುಚ್ಚಿಡುವ ಎಲ್ಲಾ ಪ್ರಯತ್ನಗಳ ನಂತರವೂ ಅದು ಒಂದು ಸಾಂಸ್ಥಿಕವಾದ ಹತ್ಯೆಯೇ ಎನ್ನುವುದೇ ಬಹುಪಾಲು ಜನರಿಗೆ ಸತ್ಯವೆಂದು ಕಂಡುಬಂದಿದೆ. ಬಲಪಂಥೀಯ ರಾಜಕೀಯ, ಅಂದಿನ ಉನ್ನತ ಶಿಕ್ಷಣ ಸಚಿವರ ಆರ್.ಎಸ್.ಎಸ್. ತತ್ವನಿಷ್ಠೆ ಹಾಗೂ ವಿದ್ಯಾರ್ಥಿ ಸಂಘವೊಂದರ ಪಾತ್ರ– ಇವುಗಳು 'ನಕ್ಷತ್ರದ ಧೂಳು' ಆಗಿದ್ದ ಯುವ ಪ್ರತಿಭೆಯ ಸಾವಿಗೆ ಕಾರಣವೆನ್ನುವುದರಲ್ಲಿ ಸಂಶಯವಿಲ್ಲ. ಇತ್ತೀಚೆಗೆ ಬಲಪಂಥೀಯ ಸಂಘಟನೆಗಳು 'ಎಲ್ಲಿ ಇದನ್ನು ಸಾಕ್ಷಿಯೊಂದಿಗೆ ಸಾಬೀತು ಮಾಡಿ ಇಲ್ಲದಿದ್ದರೆ ನೆಟ್ಟಗಿರುವುದಿಲ್ಲ' ಎನ್ನುವ ಬೆದರಿಕೆಗಳನ್ನು ಹಾಕುತ್ತಿವೆ. ಯಾವುದೇ ಅಪರಾಧದ ಕೆಲಸವನ್ನು ಮಾಡಿದ ಕೂಡಲೇ ಇವು ಟಜರಂಚಿಟಘುಣುಭಿ ಆದ ಅಂದರೆ ವಕೀಲಿ ಶೈಲಿಯ ಊಹೆಗಳನ್ನು ಮುಂದಿಡುತ್ತವೆ. ಆದರೆ ಇಂದಿನ ನಾಗರೀಕ ಸಮುದಾಯದಲ್ಲಿ ಇಂಥ ವಕೀಲಿ ವಾದಗಳಿಗೆ ಬೆಲೆಯೇ ಇಲ್ಲ. ಮಾಧ್ಯಮಗಳ ಇಂದಿನ ಯುಗದಲ್ಲಿ ಯಾರೂ ಹಳೆಯ ಸಿನೇಮಾಗಳಲ್ಲಿಯಂತೆ ಅಂತಿಮ ದೃಶ್ಯದಲ್ಲಿ ನ್ಯಾಯಾಧೀಶರು ಏನು ಹೇಳುತ್ತಾರೆ ಎಂದು ಕೇಳಲು ಕಾಯುವುದಿಲ್ಲ. ಸತ್ಯವೇನೆಂಬುದು ಬಹು ಬೇಗನೇ ಗ್ರಹಿಕೆಗೆ ಬರುತ್ತದೆ. ಸ್ವತಃ ಮಾಧ್ಯಮಗಳ ಆ್ಯಂಕರ್‌ಗಳು ಅದೆಷ್ಟು ತಿರುಚಲು ಪ್ರಯತ್ನಿಸಿದರೂ ಘಟನೆಗಳಿಗೆ ಇರುವ ಅವುಗಳದ್ದೇ ಆದ ಸತ್ಯವು ಜನರ ಗ್ರಹಿಕೆಯ ಭಾಗವಾಗಿ ಬಿಡುತ್ತದೆ. ಹೀಗಾಗಿ ಗೋರಕ್ಷಣೆಯ ಹೆಸರಿನಲ್ಲಿ ದಲಿತರ ಮೇಲಿನ ಹಲ್ಲೆ, ಅವರ ಕೊಲೆ

ಇದೆಲ್ಲ ಆರಂಭವಾದದ್ದು ಈ ದೇಶದ ಜಾತಿಗ್ರಸ್ತ ಮನಸ್ಸನ್ನು ಎಚ್ಚರಿಸಿದ ಎರಡು ಘಟನೆಗಳಿಂದ. ಒಂದು ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ ವೇಮುಲನ ಆತ್ಮಹತ್ಯೆ. ರೋಹಿತ ವೇಮುಲನ ಆತ್ಮಹತ್ಯೆಯು ಅದೆಷ್ಟು ಆಳವಾಗಿ ಜನಮಾನಸವನ್ನು ಕೆದಕಿದೆಯೆಂದರೆ ತಾವು ಅದ-ಕ್ಕೆ ಕಾರಣರಲ್ಲವೆನ್ನುವುದಕ್ಕೆ ಹಾಗೆ ಹೇಳುವವರು ಸಾಕ್ಷಿಗಳನ್ನು ತರಬೇಕು. ಇನ್ನೊಂದು ಘಟನೆಯೆಂದರೆ ಉನಾನಲ್ಲಿ ದಲಿತರ ಮೇಲೆ ನಡೆದ ಬರ್ಬರವಾದ ಆಕ್ರಮಣ ಹಾಗೂ ಅದಕ್ಕೆ ಹುಟ್ಟಿಕೊಂಡ ಅಪೂರ್ವವಾದ ಪ್ರತಿಭಟನೆ. ಇಂಥ ಕ್ರಾಂತಿಕಾರಿಯಾದ ಪ್ರತಿಭಟನೆಯು ಆರಂಭವಾದ ಮೇಲೆ ದೇಶದುದ್ದಕ್ಕೂ ವೈಚಾರಿಕ ಸಂಚಲನ ಉಂಟಾಗಿದೆ. ಆದರೆ ಕರ್ನಾಟಕದ ದಲಿತ ಸಂಘಟನೆಗಳು ದಲಿತ ಚರಿತ್ರೆಯ ಹೊಸ ತಿರುವಿನಲ್ಲಿ ಭಾಗಿಯಾಗಿರುವಂತೆ ಕಾಣುವುದಿಲ್ಲ.

ಇವುಗಳ ಬಗ್ಗೆ ಪೋಲೀಸರು, ಕೋರ್ಟುಗಳು ಏನು ಹೇಳುತ್ತಿವೆಯೆಂದು ಆ ಕೃತ್ಯಗಳನ್ನು ಮಾಡಿದವರು ಕಾಯುತ್ತಾರೆಯೇ ಹೊರತು ಜನರಲ್ಲ. ರೋಹಿತ ವೇಮುಲನ ಆತ್ಮಹತ್ಯೆಯು ಅದೆಷ್ಟು ಆಳವಾಗಿ ಜನಮಾನಸವನ್ನು ಕೆದಕಿದೆಯೆಂದರೆ ತಾವು ಅದ-ಕ್ಕೆ ಕಾರಣರಲ್ಲವೆನ್ನುವುದಕ್ಕೆ ಹಾಗೆ ಹೇಳುವವರು ಸಾಕ್ಷಿಗಳನ್ನು ತರಬೇಕು. ಸಾಮಾಜಿಕ ತಾಣಗಳಲ್ಲಿ ವಿಷವನ್ನು ಉಗುಳುವ ಅಸಹ್ಯ ವರ್ಗವೊಂದನ್ನು ಬಿಟ್ಟರೆ ಈ ದೇಶದ ಮನಸ್ಸಿಗೆ ಆ ಯುವಕನ ಸಾವನ್ನು ಹೇಗೆ ನೋಡಬೇಕೆನ್ನುವುದು ಗೊತ್ತಿದೆ.

ಇನ್ನೊಂದು ಘಟನೆಯೆಂದರೆ ಉನಾನಲ್ಲಿ ದಲಿತರ ಮೇಲೆ ನಡೆದ ಬರ್ಬರವಾದ ಆಕ್ರಮಣ ಹಾಗೂ ಅದಕ್ಕೆ ಹುಟ್ಟಿಕೊಂಡ ಅಪೂರ್ವವಾದ ಪ್ರತಿಭಟನೆ. ಇದು ಖಂಡಿತವಾಗಿಯೂ ಅಂಬೇಡ್ಕರ್ ನಂತರದ ಭಾರತದಲ್ಲಿ ದಲಿತ ಸಂವೇದನೆಯನ್ನು ಪಲ್ಲಟಗೊಳಿಸಿದ ಘಟನೆ. ಈ ಪ್ರತಿಭಟನೆಯ ಆಳ ಮತ್ತು ವಿಸ್ತಾರಗಳು



ಕ್ರಮೇಣವಾಗಿ ನಮಗೆ ಗೊತ್ತಾಗುತ್ತಿವೆ. ಅದು ಕೇವಲ ಆ ಕ್ಷಣದ ಸಿಟ್ಟಿನ, ಆಕ್ರೋಶದ ಪ್ರತಿಭಟನೆಯಲ್ಲ. ಅದು ಜಾತಿಸಮಾಜ ಹಾಗೂ ಬಲಪಂಥೀಯ ರಾಜಕೀಯಗಳ ಬಗ್ಗೆ ದಲಿತರ ಮೇಲಿನ ಹತ್ಯೆಯ ಘಟನೆಯಿಂದ ಹುಟ್ಟಿಕೊಂಡಿರುವ ಹೊಸ ತಿಳುವಳಿಕೆಯ ಪರಿಣಾಮವಾಗಿದೆ. ಪ್ರತಿಭಟನೆಯ ನೇತೃತ್ವ ವಹಿಸಿಕೊಂಡಿರುವ ಜಿಗ್ನೇಶ್ ಅವರ ಸೈದ್ಧಾಂತಿಕ ತೈಯಾರಿ ಹಾಗೂ ಖಚಿತತೆಯು ಅಚ್ಚರಿ ಹುಟ್ಟಿಸುವಂತಿದೆ. ಈ ಪ್ರತಿಭಟನೆಯಲ್ಲಿ ದಲಿತರು ಮಾಡಿದ ಶಪಥ ಹಾಗೂ ಮುಂದಿಟ್ಟಿರುವ ಬೇಡಿಕೆಗಳು ಇಡೀ ದಲಿತ ಚಳುವಳಿಯ ಇಂದಿನ ಪ್ರಣಾಳಿಕೆಯಂತಿವೆ. ಶಪಥವೆಂದರೆ ಇನ್ನು ಮೇಲೆ ಕಳಂಕಿತವೆನ್ನುವ ಕಾರಣದಿಂದ ನಮ್ಮನ್ನು ಅಸ್ಪಶ್ಯರನ್ನಾಗಿ ಮಾಡುವ ಕೆಲಸಗಳನ್ನು ನಾವು ಮಾಡುವುದಿಲ್ಲವೆನ್ನುವುದು. ಇದು ನೇರವಾಗಿ ಜಾತಿವ್ಯವಸ್ಥೆಯ ಬೇರಿಗೆ ಹಾಕಿದ ಕೊಡಲಿ ಏಟಾಗಿದೆ. ಏಕೆಂದರೆ ಜಾತಿ ಸಮಾಜ ನಿಂತಿರುವುದು ಅಸ್ಪಶ್ಯತೆಯ ಮೇಲೆ. ಅಸ್ಪಶ್ಯತೆ ನಿಂತಿರುವುದು ಮೈಲಿಗೆಯೆನ್ನುವ ಕೆಲಸಗಳ ಮೇಲೆ. ಮುಖ್ಯವೆಂದರೆ ಈ ಕೆಲಸಗಳನ್ನು ದಲಿತರು ಮಾಡದಿದ್ದರೆ ಸವರ್ಣೀಯ ಜಾತಿಗಳ ಕೊನೆಗಾಲ ಬಂದಂತೆಯೆ. ಆ ಕೆಲಸಗಳನ್ನು ಅವರು ಮಾಡುವುದಿಲ್ಲವೆನ್ನುವುದರ ಮೂಲಕ ಜಾತಿ ವ್ಯವಸ್ಥೆಯ ಆಧಾರವನ್ನೇ ದಲಿತರು ಭಗ್ನಗೊಳಿಸಿದ್ದಾರೆ. ಜಾತಿವ್ಯವಸ್ಥೆಯೆಂದರೆ ಸಾಮರಸ್ಯ ಹಾಗೂ ಶ್ರಮವಿಭಜನೆಯೆಂದು ಹೇಳುವ ವರ್ಗಗಳು ಹಾಗೂ ಜಾತಿಗಳು ಈಗ ಬದಲಾಗಿರುವ ಶ್ರಮವಿಭಜನೆಯ ಪ್ರಕಾರ ಮಲಹೊರಲೇ ಬೇಕು, ಸತ್ತ ಪ್ರಾಣಿಗಳ ಕಳೇಬರವನ್ನೂ ಹೊರಲೇ ಬೇಕು.

ಪ್ರತಿಭಟನೆಯಲ್ಲಿ ಮೂಡಿಬಂದ ಬೇಡಿಕೆಯೆಂದರೆ "ಗೋವಿನ ಬಾಲ ನೀವು ಇಟ್ಟುಕೊಳ್ಳಿ; ದಲಿತರಿಗೆ ತಲಾ ಐದು ಎಕರೆ ಜಮೀನನ್ನು ಕೊಡಿ" ಇದು ಕೇವಲ ಘೋಷಣೆಯಲ್ಲ. ಇತಿಹಾಸದ ಚಕ್ರವನ್ನೇ ಅಲ್ಲಾಡಿಸುವ ಕ್ರಿಯೆ. ಏಕೆ-ಂದರೆ ದಲಿತರ ಸ್ಥಿತಿಗೆ ಕಾರಣವೆಂದರೆ ಅವರಲ್ಲಿ ಬಹುಸಂಖ್ಯಾತರು ಭೂರಹಿತ ಕೃಷಿ ಕೂಲಿಕಾರರು. ಐದು ಎಕರೆ ಭೂಮಿಯಿಂದ ಅವರ ಬವಣೆಗಳು ಮುಗಿಯುವುದಿಲ್ಲ. ಆದರೆ ಅವರನ್ನು ಹಿಂಸಿಸುತ್ತಿರುವ ಬಲಿಷ್ಟ, ಭೂಒಡೆಯ ಶೂದ್ರಜಾತಿಗಳ ಸೊಂಟವನ್ನೇ ಮುರಿದಂತಾಗುತ್ತದೆ. ನಾವು ಗಮನಿಸಿದಂತೆ ದಲಿತರ ಮೇಲೆ ನಡೆಯುತ್ತಿರುವ ಅತಿ ಹೆಚ್ಚು ದೌಜನ್ಯಗಳಿಗೆ ಕಾರಣವಾಗಿರುವುದು ನ್ಯಾಯಯುತವಾಗಿ ಅವರಿಗೆ ಕೊಡಲಾದ ಭೂಮಿಯನ್ನು ಅವರು ಕೇಳಿದಾಗ, ಭೂಮಾಲೀಕ ಜಾತಿಗಳು ತೋರಿಸುವ ಅಮನುಷವಾದ ಹಿಂಸೆ. ಈ ಜಾತಿಗಳು ಕರ್ನಾಟಕದಂಥ ರಾಜ್ಯಗಳಲ್ಲಿ ರಾಜಕೀಯವಾಗಿಯೂ ಬಲಿಷ್ಠವಾಗಿವೆ. ಇವುಗಳ ಮರ್ಮಕ್ಕೆ ಪೆಟ್ಟು ಬೀಳುವುದು ದಲಿತರು ಭೂಮಿಯ ಒಡೆಯರಾದಾಗ.



ಇಂಥ ಕ್ರಾಂತಿಕಾರಿಯಾದ ಪ್ರತಿಭಟನೆಯು ಆರಂಭವಾದ ಮೇಲೆ ದೇಶದುದ್ದಕ್ಕೂ ವೈಚಾರಿಕ ಸಂಚಲನ ಉಂಟಾಗಿದೆ. ಆದರೆ ಕರ್ನಾಟಕದ ದಲಿತ ಸಂಘಟನೆಗಳು ದಲಿತ ಚರಿತ್ರೆಯ ಹೊಸ ತಿರುವಿನಲ್ಲಿ ಭಾಗಿಯಾಗಿರುವಂತೆ ಕಾಣುವುದಿಲ್ಲ. ಹೀಗೆಂದು ನಾನು ಅಂದುಕೊಂಡಿರುವುದು ತಪ್ಪಾಗಿದ್ದರೆ ಅದಕ್ಕಿಂತ ಸಂತೋಷದ ವಿಷಯವೇ ಇಲ್ಲ. ದಲಿತರಿಗೆ ಸಲ್ಲಬೇಕಾದ ಸಾಮಾಜಿಕ ನ್ಯಾಯದ ನಿಜವಾದ ವ್ಯಾಖ್ಯೆ ನಮ್ಮೆದುರಿಗಿದೆ. ಇದನ್ನು ಅರ್ಥಮಾಡಿಕೊಳ್ಳದ ಯಾವ ಪ್ರಗತಿಪರ ಚಳುವಳಿಗೂ ಭವಿಷ್ಯವಿಲ್ಲ. ●



ವಿದ್ಯಾರ್ಥಿಗಳ ಪರವಾಗಿ ಹೋರಾಟ ನಡೆಸಿದ 'ಅಪರಾಧ'ಕ್ಕೆ ಎಸ್‌ಎಫ್‌ಐ ಮುಖಂಡರಿಗೆ ಜೈಲು ಶಿಕ್ಷೆ !!

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಹಾಗೂ ಉಪಾಧ್ಯಕ್ಷರಾದ ಬಸವರಾಜ ಪೂಜಾರ್ ರವರನ್ನು ಸೆಪ್ಟಂಬರ್ 6ರ ಮಂಗಳವಾರ ಮಧ್ಯರಾತ್ರಿ 1.30ಕ್ಕೆ ಬೆಂಗಳೂರಿನ ಕಾಟನ್ ಪೇಟೆ ಪೋಲಿಸರು ಬಂಧಿಸಿದರು.

ಸಂಪಂಗಿರಾಮನಗರದ ಎಸ್.ಎಫ್.ಐ. ರಾಜ್ಯ ಸಮಿತಿ ಕಛೇರಿಯಲ್ಲಿ ಮಲಗಿದ್ದ ಸಂದರ್ಭದಲ್ಲಿ ರಾತ್ರಿ 12ಕ್ಕೆ ನಿದ್ರೆಗೆ ಇನ್ನೂ ಜಾರಿರಲಿಲ್ಲ. ಅಷ್ಟೊತ್ತಲ್ಲಿ ಕಾಲಿಂಗ್ ಬೆಲ್ ಸದ್ದು. ಯಾರೆಂದು ನೋಡಿದರೆ ನಾಲ್ಕಾರು ಜನ ಪೋಲಿಸರು. ಯಾಕೆಂದು ಕೇಳಿದ್ದಕ್ಕೆ ಕೋರ್ಟ್‌ಗೆ ಸರಿಯಾಗಿ ಹಾಜರಾಗದ ಕಾರಣ ನಿಮ್ಮನ್ನು ನಮ್ಮ ವಶಕ್ಕೆ ಪಡೀತಾ ಇದಿವಿ ಎಂದರು. ತಲೆ ಕೆಡಿಸಿಕೊಳ್ಳದೆ ಇಬ್ಬರು ಪೊಲೀಸ್ ಜೀಪ್ ಏರಿ ಕುಳಿತಾಗ ಸಮಯ ಬರೋಬ್ಬರಿ 1.30ಗಂಟೆಯಾಗಿತ್ತು.

ಹಿನ್ನೆಲೆ :

ರಾಜ್ಯ ಸರಕಾರ ಶಿಕ್ಷಣಕ್ಕೆ 30% ಹಣ ಮೀಸಲಿರಿಸಲು, ಹಾಸ್ಟೆಲ್ ವಿದ್ಯಾರ್ಥಿಗಳ ಅಹಾರ ಭತ್ಯೆಯನ್ನು 3,500 ರೂ. ಗೆ ಹೆಚ್ಚಿಸಲು, ಎಲ್ಲಾ ಶಾಲಾ ಕಾಲೇಜು-ಹಾಸ್ಟೆಲ್‌ಗಳಿಗೂ ಸ್ವಂತ ಕಟ್ಟಡ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು, ಬೋಧಕ ಬೋಧಕೇತರ ಹುದ್ದೆಗಳ ಖಾಯಂ ನೇಮಕಾತಿ ಸೇರಿದಂತೆ ಹಲವಾರು ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗಾಗಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯ ಸಮಿತಿಯು 2015 ರ ಜನವರಿ 28-29ರಂದು ಎರಡು ದಿನಗಳ ಕಾಲ ಮಹಾ ಧರಣಿ ನಡೆಸಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ವಿದ್ಯಾರ್ಥಿಗಳು ಈ ಧರಣಿಯಲ್ಲಿ ಭಾಗವಹಿಸಿದ್ದರು. ಅಷ್ಟಾದರೂ ರಾಜ್ಯ ಸರಕಾರ ಈ ಬೇಡಿಕೆಗಳ ಕುರಿತು ಪರಿಗಣಿಸದೆ ಇರುವುದರಿಂದ ಜನವರಿ 30ರಂದು ರಾಜ್ಯ ಮಟ್ಟದ ಬೃಹತ್ ಮೆರವಣಿಗೆ ನಡೆಸಲಾಗಿತ್ತು. ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗೆ ಸ್ಪಂದಿಸುವ ಬದಲು ರಾಜ್ಯ ಸರ್ಕಾರ ಲಾಠಿ ಚಾರ್ಜ್ ಮೂಲಕ ಹತ್ತಿಕ್ಕಲು ಮುಂದಾಯ್ತು. ಪೊಲೀಸರು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲೆ ಮನಬಂದಂತೆ ಲಾಠಿ ಹರಿಸಿತು. ಹಲವರ ಮೇಲೆ ಕೇಸನ್ನೂ ದಾಖಲಿಸಲಾಗಿತ್ತು.

ಸಂಘಟನಾ ಕೆಲಸದ ಒತ್ತಡಗಳ ಮಧ್ಯೆ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಹಾಗೂ ರಾಜ್ಯ ಉಪಾಧ್ಯಕ್ಷ ಬಸವರಾಜ ಪೂಜಾರ್ ರವರು ಮೂರು ಬಾರಿ ಕೋರ್ಟ್ ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಇದನ್ನೇ ಮುಂದೆ ಮಾಡಿಕೊಂಡು ಪೋಲಿಸರು ಸೆಪ್ಟೆಂಬರ್ 6ರ ಮಧ್ಯರಾತ್ರಿ 1.30ಕ್ಕೆ ಬಂಧಿಸಿ ಸ್ಟೇಶನ್‌ಗೆ ಕರೆದೊಯ್ದಿದ್ದಾರೆ. ದೇಸಾಯಿಯವರು ಸೆಪ್ಟೆಂಬರ್ 7ರಂದು ನ್ಯಾಯಾಲಯಕ್ಕೆ ಹಾಜರಾಗುವುದಾಗಿ ಪೊಲೀಸರಿಗೆ ಮುಂಚಿತವಾಗಿಯೇ ತಿಳಿಸಿದ್ದರೂ ಮಹಾಪರಾಧ ಮಾಡಿದವರನ್ನು ಬಂಧಿಸುವಂತೆ ಬಂಧಿಸಿ ಕರೆದೊಯ್ದಿದ್ದಲ್ಲದೆ ಅವರನ್ನು ಪರಪ್ಪನ ಅಗ್ರಹಾರದ ಸೆರೆಮನೆಗೆ ಕಳುಹಿಸಲಾಗಿದೆ.

ಸತತ 43 ಗಂಟೆಗಳ ಕಾಲ ಬಂಧನದಲ್ಲಿ ಇದ್ದ ಗುರುರಾಜ ದೇಸಾಯಿ ಹಾಗೂ ಬಸವರಾಜ ಪೂಜಾರ್ ರವರು ಸೆಪ್ಟಂಬರ್ 8ರ ಗುರುವಾರದಂದು ರಾತ್ರಿ 10 ಗಂಟೆಗೆ ಬಿಡುಗಡೆಯಾದರು ಈ ಸಮಯದಲ್ಲಿ ಎಸ್.ಎಫ್.ಐ. ರಾಜ್ಯಾಧ್ಯಕ್ಷರಾದ ಅಂಬರೀಷ್, ರಾಜ್ಯ ಮುಖಂಡರಾದ ಚಿಕ್ಕರಾಜು, ವೆಂಕಟೇಶ್, ವೇಗನಂದ, ಸೌಮ್ಯ, ಅಮರೇಶ್ ಸಿ, ಯುವಜನ ಮುಖಂಡರಾದ ಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು. ●



ಕಾಶ್ಮೀರದಲ್ಲಿ ಅನಾಹುತಕಾರಿ ದಾರಿ ಬೇಡ

ದಿಲ್ಲಿಗೆ ಮರಳಿದ ಸರ್ವಪಕ್ಷ ನಿಯೋಗ ಶಾಂತಿ ಮರಳಬೇಕು ಮತ್ತು ಎಲ್ಲ ಪ್ರಶ್ನೆಗಳನ್ನು ಸಂವಾದ ಮತ್ತು ಚರ್ಚೆಗಳ ಮೂಲಕ ಪರಿಹರಿಸಿಕೊಳ್ಳಬೇಕು ಎಂದು ಮನವಿ ಹೊರಡಿಸಿದೆ. ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ಸಂವಾದಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸದಸ್ಯರು ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಕೋರಿದ್ದಾರೆ. ಆದರೂ, ಸಪ್ಟಂಬರ್ 6ಕ್ಕೆ ಸಾಮೂಹಿಕ ಅಸಂತೃಪ್ತಿ ಪ್ರಾರಂಭವಾಗಿ ಎರಡು ತಿಂಗಳಾದರೂ, ಮೋದಿ ಸರಕಾರ ಕಾಶ್ಮೀರ ಕಣಿವೆಯಲ್ಲಿನ ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿ ತನ್ನ ನಿಲುವನ್ನು ಬದಲಿಸುವ ಸಂಕೇತಗಳು ಇಲ್ಲ.



ಪ್ರಕಾಶ ಕಾರಟ್

ಸರ್ವಪಕ್ಷ ಸಂಸದೀಯ ನಿಯೋಗ ಸಪ್ಟಂಬರ್ 4 ಮತ್ತು 5ರಂದು ಜಮ್ಮು ಮತ್ತು ಕಾಸ್ಮೀರಕ್ಕೆ ಭೇಟಿ ನೀಡಿತು. ಕೇಂದ್ರ ಸರಕಾರ ಬಹಳ ವಿಳಂಬದ ನಂತರ ಈ ಭೇಟಿಗೆ ಒಪ್ಪಿಕೊಂಡಿತ್ತು. ಇದು ಸುಮಾರು ಎರಡು ತಿಂಗಳ ಹಿಂದೆ ಕಾಶ್ಮೀರ ಕಣಿವೆಯಲ್ಲಿ ಆರಂಭವಾದ ಸಾಮೂಹಿಕ ಪ್ರತಿಭಟನೆಯ ಹಿನ್ನೆಲೆಯಲ್ಲಿ ಇಟ್ಟ ಮೊದಲ ರಾಜಕೀಯ ಹೆಜ್ಜೆ.

ಹುರಿಯತ್ ಮುಖಂಡರೊಂದಿಗೆ ಭೇಟಿಯ ಕಾರ್ಯಕ್ರಮ ಇಲ್ಲದಿದ್ದರೂ ನಿಯೋಗದ ಕೆಲವು ಸದಸ್ಯರು ಕೆಲವು ಹುರಿಯತ್ ಮುಖಂಡರನ್ನು ಭೇಟಿ ಮಾಡಲು ಒಂದು ಪ್ರಯತ್ನ ನಡೆಸಿದರು. ಸಿಪಿಐ(ಎಂ), ಜೆಡಿ(ಯು), ಸಿಪಿಐ ಮತ್ತು ಆರ್‌ಜೆಡಿಗೆ ಸೇರಿದ ಸೀತಾರಾಮ್ ಯೆಚೂರಿ, ಶರದ್ ಯಾದವ್, ಡಿ.ರಾಜ, ಮತ್ತು ಜಯಪ್ರಕಾಶ ಯಾದವ್ ಮೀರ್‌ವೈಝ್ ಉಮರ್ ಫಾರುಕ್, ಯಾಸಿನ್ ಮಲಿಕ್, ಶಬ್ಬೀರ್ ಶಾಹ ಮತ್ತು ಅಬ್ದುಲ್ ಘನಿ ಭಟ್ ಅವರನ್ನು ಭೇಟಿಯಾದರು. ಸೈಯದ್ ಅಲಿ ಶಾಹ್ ಗಿಲಾನಿ ಮಾತ್ರವೇ ಅವರನ್ನು ಭೇಟಿಯಾಗಲು ನಿರಾಕರಿಸಿದರು.

ಪ್ರತಿಭಟನೆಗಳನ್ನು ಪ್ರಭುತ್ವ ದಮನ ಮಾಡುತ್ತಲೇ ಇರುವುದು ಮತ್ತು ಈ ಹಿಂದೆ ನಡೆದ ಮಾತುಕತೆಗಳನ್ನು ಅನುಸರಿಸಿ ಕ್ರಮ ಕೈಗೊಳ್ಳುವಲ್ಲಿ ವಿಫಲತೆಯಿಂದಾಗಿ ಏನಾದರೂ ಅರ್ಥಪೂರ್ಣ ಸಂವಾದಕ್ಕೆ ಸೂಕ್ತವಾದ ಪರಿಸ್ಥಿತಿಗಳನ್ನು ಸೃಷ್ಟಿಸಿಲ್ಲ ಎಂಬ ನಿಲುವನ್ನು ಎಲ್ಲ ಹುರಿಯತ್ ಮುಖಂಡರು ತಳೆದರು. ಸರ್ವಪಕ್ಷ ನಿಯೋಗದ ಈ ನಾಲ್ವರು ಸದಸ್ಯರ ಈ ಹೆಜ್ಜೆಯಿಂದಾಗಿ ಕಾಶ್ಮೀರ ಪ್ರಶ್ನೆ ಪೂರ್ವಶರತ್ತುಗಳಿಲ್ಲದ ಒಂದು ಸಂವಾದದ ಮೂಲಕ ಮಾತ್ರವೇ ಇತ್ಯರ್ಥವಾಗಲು ಸಾಧ್ಯ ಎಂಬ ಒಂದು ಸಂಕೇತವನ್ನು ಕಳಿಸಲಾಗಿದೆ.

ದಿಲ್ಲಿಗೆ ಮರಳಿದ ಸರ್ವಪಕ್ಷ ನಿಯೋಗ ಶಾಂತಿ ಮರಳಬೇಕು ಮತ್ತು ಎಲ್ಲ ಪ್ರಶ್ನೆಗಳನ್ನು ಸಂವಾದ ಮತ್ತು ಚರ್ಚೆಗಳ ಮೂಲಕ ಪರಿಹರಿಸಿಕೊಳ್ಳಬೇಕು ಎಂದು ಮನವಿ ಹೊರಡಿಸಿದೆ. ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ಸಂವಾದಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸದಸ್ಯರು ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಕೋರಿದ್ದಾರೆ.

ಆದರೂ ಮೋದಿ ಸರಕಾರ ಕಣಿವೆಯಲ್ಲಿನ ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿ ತನ್ನ ನಿಲುವನ್ನು ಬದಲಿಸುವ ಸಂಕೇತಗಳು ಇಲ್ಲ. ಸಪ್ಟಂಬರ್ 6ಕ್ಕೆ ಸಾಮೂಹಿಕ ಅಸಂತೃಪ್ತಿ ಪ್ರಾರಂಭವಾಗಿ ಎರಡು ತಿಂಗಳಾಯಿತು. ಪೆಲಟ್ ಗನ್‌ಗಳ ಬಳಕೆಯನ್ನು ಹಿಂತೆಗೆದುಕೊಳ್ಳಬೇಕೆಂಬುದು ಸಾಮಾನ್ಯ ಪರಿಸ್ಥಿತಿಯನ್ನು ತರುವ ಕನಿಷ್ಟ ಬೇಡಿಕೆಗಳಲ್ಲಿ ಒಂದು. ಕೇಂದ್ರ ಸರಕಾರ ಈ ಬಗ್ಗೆ ಪ್ರಕಟಣೆ ಮಾಡಿಲ್ಲ. ತದ್ವಿರುದ್ಧವಾಗಿ, 20ವರ್ಷದ ನಸೀರ್ ಅಹ್ಮದ್ ಧರ್ ಎಂಬ ವ್ಯಕ್ತಿ ಅನಂತನಾಗ್ ಜಿಲ್ಲೆಯಲ್ಲಿ ಪೆಲಟ್ ಗನ್‌ಗಳಿಂದ ಸತ್ತಿದ್ದಾರೆ. ಇದರೊಂದಿಗೆ ನಾಗರಿಕರ ಸಾವುಗಳ ಸಂಖ್ಯೆ 74ಕ್ಕೇರಿದೆ, 7000ಕ್ಕಿಂತಲೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪೆಲಟ್ ಗನ್‌ಗಳನ್ನು ಹಿಂತೆದುಕೊಳ್ಳುವ ಬದಲು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಪ್ರಕಾರ “ಪೆಲಟ್‌ಗಳನ್ನು ಅಗತ್ಯ ಬಿದ್ದಾಗ ಮಾತ್ರವೇ ಬಳಸಲಾಗುತ್ತಿದೆ”.

ಸರಕಾರದ ಒಳಗಿನ ಮೂಲಗಳು ಹುರಿಯತ್ ಮುಖಂಡರ ಮೇಲೆ ತೀವ್ರಕ್ರಮ ಕೈಗೊಳ್ಳಲಾಗುವುದು ಎಂದು ಮಾಧ್ಯಮಗಳಿಗೆ ಹೇಳಿವೆ, ಅವರ ಭದ್ರತೆಯನ್ನು, ಸರಕಾರ ನೀಡಿರುವ ವೈದ್ಯಕೀಯ ಮತ್ತು ವಿದೇಶಿ ಪ್ರವಾಸ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುವ ಯೋಜನೆಗಳಿವೆ ಎನ್ನಲಾಗಿದೆ. ಗೃಹಮಂತ್ರಿ ರಾಜನಾಥ್ ಸಿಂಗ್ ಇದನ್ನು ನಿರಾಕರಿಸಿದರೂ, ಈ ಸಾಮೂಹಿಕ ಪ್ರತಿಭಟನೆ ಪ್ರತ್ಯೇಕತಾವಾದಿ ಮುಖಂಡರ ಮೂಲಕ ಪಾಕಿಸ್ತಾನದಿಂದ ಪ್ರೇರಿತವಾದದ್ದು ಎಂಬ ತಮ್ಮ ರಾಜಕೀಯ ನಿಲುವನ್ನೇ ಕೇಂದ್ರ ಸರಕಾರ ಮತ್ತು ಬಿಜೆಪಿ ಮುಂದುವರಿಸ ಬಯಸುವಂತೆ ಕಾಣುತ್ತಿದೆ. ವಾಸ್ತವ ಸಂಗತಿಯೆಂದರೆ ಕೆಳಗೆ ಈ ಸಾಮೂಹಿಕ ಆಂದೋಲನಕ್ಕೆ ಯುವಜನರ ಒಂದು ಹೊಸ ಪೀಳಿಗೆ ನೇತೃತ್ವ ನೀಡುತ್ತಿದೆ.

ಹೆಚ್ಚು ದಮನ ಕ್ರಮಗಳಿಂದೇನೂ ಜನರ ಪ್ರತಿಭಟನೆಗಳನ್ನು ಅಡಗಿಸಲು ಸಾಧ್ಯವಿಲ್ಲ. ಹುರಿಯತ್ ಕಾನ್ಫರೆನ್ಸ್ ಈದ್-ಉಲ್-ಜುಹಾದಂದು ಶ್ರೀನಗರದಲ್ಲಿರುವ ವಿಶ್ವ ಸಂಸ್ಥೆಯ ಕಚೇರಿಗೆ ಪ್ರತಿಭಟನಾ ಮೆರವಣಿಗೆ ನಡೆಸಬೇಕು ಎಂದು ಕರೆ ನೀಡಿದೆ. ಪ್ರತಿಭಟನೆಗಳ ವೇಳಾಪಟ್ಟಿಯನ್ನು ಸಪ್ಟಂಬರ್ 16ರ ವರೆಗೆ ವಿಸ್ತರಿಸಲು ಅವರು ಕರೆ ನೀಡಿದ್ದಾರೆ.

ಬಿಜೆಪಿ ಸರಕಾರ ಆರಿಸಿರುವ ದಾರಿ ಕಾಶ್ಮೀರದ ಜನತೆಗೆ ವಿನಾಶಕಾರಿಯಾಗಲಿದೆ ಮತ್ತು ದೇಶಕ್ಕೆ ಗಂಭೀರ ಪರಿಣಾಮ ಉಂಟು ಮಾಡಲಿದೆ. ತಕ್ಷಣವೇ ಮಾಡಬೇಕಾದ ಕೆಲಸ ಎಂದರೆ ಪರಿಸ್ಥಿತಿಯನ್ನು ತಿಳಿಗೊಳಿಸುವುದು ಮತ್ತು ಶಾಂತಿ ಹಾಗೂ ಸಾಮಾನ್ಯ ಸ್ಥಿತಿ ಮರಳುವಂತೆ ಮಾಡುವುದು. ಹೀಗಾಗಬೇಕಾದರೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು : ಪೆಲಟ್ ಗನ್‌ಗಳ ಬಳಕೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳುವುದು; ನಾಗರಿಕ ಪ್ರದೇಶಗಳಿಂದ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಎಎಫ್‌ಎಸ್‌ಪಿಎ) ಮತ್ತು ಸೇನೆಯನ್ನು ಹಿಂತೆಗೆದುಕೊಳ್ಳುವುದು; ಭದ್ರತಾ ಪಡೆಗಳು ನಾಗರಿಕರ ಮೇಲೆ ನಡೆಸಿರುವ ಅತ್ಯಾಚರಣೆಗಳ ಎಲ್ಲ ಸಂದರ್ಭಗಳ ಒಂದು ನ್ಯಾಯಾಂಗ ವಿಚಾರಣೆ; ಮತ್ತು ಜೀವ ಕಳಕೊಂಡಿರುವ ಎಲ್ಲ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಹಾಗೂ ಗಾಯಗೊಂಡವರ ಪುನರ್ವಸತಿ ಮತ್ತು ಅವರಿಗೆ ಜೀವನಾಧಾರ ಲಭ್ಯಗೊಳಿಸುವುದು.

ಇದನ್ನು ಅನುಸರಿಸಿ ಆ ರಾಜ್ಯದಲ್ಲಿ ಎಲ್ಲ ಛಾಯೆಗಳ ರಾಜಕೀಯ ಅಭಿಪ್ರಾಯದೊಂದಿಗೆ ಪೂರ್ವಶರತ್ತುಗಳೇನೂ ಇಲ್ಲದ ವ್ಯವಸ್ಥಿತ ಸಂವಾದವನ್ನು ಆರಂಭಿಸಬೇಕು. ಇದರೊಂದಿಗೆ, ಪಾಕಿಸ್ತಾನದೊಂದಿಗೆ ಕಾಶ್ಮೀರವೂ ಸೇರಿರುವ ಸಮಗ್ರ ಸಂವಾದವನ್ನು ಪುನರಾರಂಭಿಸುವುದು.

ಕಾಶ್ಮೀರ ಪ್ರಶ್ನೆಯ ಬಗ್ಗೆ ಒಂದು ಪ್ರಜಾಸತ್ತಾತ್ಮಕ ಪರಿಹಾರವನ್ನು ಮತ್ತು ಕಾಶ್ಮೀರದ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರಶ್ನೆಯನ್ನು ಭಾರತದ ಜನತೆಯ ಬಳಿ ಒಯ್ಯುವುದು ಅಗತ್ಯವಾಗಿದೆ. ಇದಕ್ಕೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಬಿಜೆಪಿ ಮತ್ತು ಮೋದಿ ಸರಕಾರದ ಕೋಮುವಾದಿ-ರಾಷ್ಟ್ರೀಯವಾದಿ ವ್ಯಾಖ್ಯಾನವನ್ನು ಎದುರಿಸುವ ಒಂದು ಪ್ರಚಾರಾಂದೋಲನವನ್ನು ನಡೆಸಬೇಕು. ಕಾಶ್ಮೀರ ಸಮಸ್ಯೆಗೆ ಒಂದು ರಾಜಕೀಯ ಪರಿಹಾರಕ್ಕೆ ಬೆಂಬಲವಾಗಿ ಜನಾಭಿಪ್ರಾಯವನ್ನು ಅಣಿನೆರೆಸಬೇಕಾಗಿದೆ.



‘ವಿಕಾಸ’ ಮತ್ತು ‘ವಿಶ್ವಾಸ’ ಎರಡೂ ಆಕಾಶದಿಂದ ಉದುರಲಾರದು

– ಸೀತಾರಾಮ್ ಯೆಚೂರಿ

ಕಾಶ್ಮೀರ ಪ್ರಶ್ನೆಯ ಪ್ರಜಾಸತ್ತಾತ್ಮಕ ಪರಿಹಾರಕ್ಕೆ ಕಳೆದ ಎರಡು ತಿಂಗಳಿಂದ ಸತತವಾಗಿ ಗಂಭೀರ ಪ್ರಯತ್ನಗಳನ್ನು ನಡೆಸಿಕೊಂಡು ಬಂದಿರುವ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಸತತ ಆಗ್ರಹದಿಂದಾಗಿ ಕೊನೆಗೂ ಮೋದಿ ಸರಕಾರ ಒಂದು ಸರ್ವಪಕ್ಷ ನಿಯೋಗವನ್ನು ಶ್ರೀನಗರಕ್ಕೆ ಒಯ್ಯಲು ನಿರ್ಧರಿಸಿದಾಗ ಎಡಪಕ್ಷಗಳು ಈಬಗ್ಗೆ ಗಂಭಿರ ಅಧ್ಯಯನ ಮತ್ತು ಪ್ರಯತ್ನಗಳನ್ನು ನಡೆಸಿರುವ ಎಲ್ಲ ಪರಿಣಿತರು ಮತ್ತು ಬುದ್ಧಿಜೀವಿಗಳೊಂದಿಗೆ ಸಮಾಲೋಚಿಸಿ ಮೂರ್ತ ಪ್ರಸ್ತಾವಗಳನ್ನು ಮುಂದಿಟ್ಟವು. ಕೇಂದ್ರ ಮತ್ತು ರಾಜ್ಯ ಸರಕಾರ ಭಿನ್ನ ಅಭಿಪ್ರಾಯ ಹೊಂದಿರುವ ಹುರಿಯತ್ ಮುಖಂಡರನ್ನು ಅಧಿಕೃತವಾಗಿ ಆಹ್ವಾನಿಸಲು ಹಿಂಜರಿಯುತ್ತಿದ್ದಾಗ ನಿಯೋಗದಲ್ಲಿದ್ದ ಸಿಪಿಐ(ಎಂ), ಸಿಪಿಐ, ಜೆಡಿ(ಯು) ಮತ್ತು ಆರ್‌ಜೆಡಿ ಸದಸ್ಯರು ಆ ಮುಖಂಡರನ್ನು ಕಂಡು ಮಾತಾಡಲು ಪ್ರಯತ್ನಿಸಿದರು. ಈ ಎಲ್ಲದರ ನೇತೃತ್ವ ವಹಿಸಿದ್ದ ಸೀತಾರಾಮ್ ಯೆಚೂರಿ ಶ್ರೀನಗರದಿಂದ ಮರಳಿದ ನಂತರ ಹೇಳಿರುವ ಕೆಲವು ಮಾತುಗಳು ಇಲ್ಲಿವೆ.

ಭಾರತ ಯಾವುದೇ ಪಂಥದ ಉಗ್ರಗಾಮಿಗಳು ಮತ್ತು ಕಟ್ಟಾವಾದಿಗಳು ಕಾಶ್ಮೀರ ಕುರಿತ ವ್ಯಾಖ್ಯಾನದೊಂದಿಗೆ ಪರಾರಿಯಾಗಲು ಬಿಡಲು ಸಾಧ್ಯವಿಲ್ಲ. ನಾವು ಪರಿಸ್ಥಿತಿಯನ್ನು, ಆತ್ಮವಿಶ್ವಾಸದ ನಿಲುವಿನಿಂದ, ನಮ್ಮ ವ್ಯವಸ್ಥೆ, ನಮ್ಮ ಪ್ರಜಾಪ್ರಭುತ್ವ, ಮತ್ತು ಬಹಳ ಮುಖ್ಯವಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿನ ನಮ್ಮ ಜನತೆಯಲ್ಲಿ ವಿಶ್ವಾಸದೊಂದಿಗೆ ನಿರ್ವಹಿಸಬೇಕು......

ಮಾತಾಡದೆ, ಅದರಲ್ಲೂ ವಿಶೇಷವಾಗಿ, ನಾವು ಸಮ್ಮತಿಸಲಾರದವರೊಂದಿಗೆ ಮತ್ತು ವಿಭಿನ್ನ ಛಾಯೆಗಳ ಅಭಿಪ್ರಾಯಗಳನ್ನು ಹೊಂದಿರುವವರೊಂದಿಗೆ ಮಾತಾಡದೆ ಬೇರೆ ಪರ್ಯಾಯವಿಲ್ಲ. ಅಸಮರ್ಪಕ ತಯಾರಿ ಮತ್ತು ರಾಜ್ಯಕ್ಕೆ ಒಂದು ಸರ್ವಪಕ್ಷ ನಿಯೋಗವನ್ನು ಒಯ್ಯುವಲ್ಲಿ ವಿಳಂಬದಿಂದಾಗಿ ನಮಗೆ ಹೆಚ್ಚೇನೂ ಸಾಧಿಸಲಾಗಿಲ್ಲ. ಸರಕಾರ ಹಲವು ಕಾರ್ಯಗುಂಪುಗಳ ಶಿಫಾರಸುಗಳು ಮತ್ತು ಸರಭಾಷಣಕಾರರ 2010ರ ವರದಿಯಲ್ಲಿನ ಪ್ರಸ್ತಾವಗಳನ್ನು ಗುರುತಿಸಿಕೊಂಡು ಪ್ರಶ್ನೆಗಳನ್ನು ಕ್ರೋಡೀಕರಿಸಿ ಸಿದ್ಧವಾಗಿ ಹೋಗಬೇಕಾಗಿತ್ತು. ಇದರಿಂದ ನಿರ್ದಿಷ್ಟ ಪ್ರಸ್ತಾವಗಳು ಮತ್ತು ಪರ್ಯಾಯಗಳ ಸುತ್ತ ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ಗಮನ ಕೇಂದ್ರೀಕರಿಸಿದ ಚರ್ಚೆ ಸಾಧ್ಯವಾಗುತ್ತಿತ್ತು.. ಸರಕಾರ ಅದನ್ನು ಮಾಡಲಿಲ್ಲ. ಅದನ್ನು ಮಾಡಿದ್ದರೆ, ನಿಯೋಗದ ಭೇಟಿ ಬಹಳಷ್ಟು ಅರ್ಥಪೂರ್ಣವಾಗುತ್ತಿತ್ತು.....

ಪ್ರಧಾನ ಮಂತ್ರಿ ಮೋದಿಯವರ ‘ವಿಕಾಸ್ ಔರ್ ವಿಶ್ವಾಸ್’ ಘೋಷಣೆಗೆ ಬೆಂಬಲವಾಗಿ ಮೂರ್ತ ಕ್ರಿಯೆಯಿಲ್ಲದಿದ್ದರೆ ಅದು ಟೊಳ್ಳಾಗಿ, ಅರ್ಥಹೀನವಾಗಿ ಕಾಣುತ್ತದೆ. ‘ವಿಕಾಸ’ ಮತ್ತು ‘ವಿಶ್ವಾಸ’ ಎರಡೂ ಆಕಾಶದಿಂದ ಉದುರಲಾರದು. ಅವನ್ನು ಮೂರ್ತ ಯೋಜಿತ ಕ್ರಿಯೆಗಳಿಂದ ಸೃಷ್ಟಿಸಬೇಕಾಗಿದೆ. ಆಗಿನ ಪ್ರಧಾನಿ ವಾಜಪೇಯಿ, ‘ಜಮ್ಹೂರಿಯತ್, ಇನ್ಸಾನಿಯತ್ ಔರ್ ಕಶ್ಮೀರಿಯತ್’(ಪ್ರಜಾಪ್ರಭುತ್ವ, ಮಾನವೀಯತೆ ಮತ್ತು ಕಾಶ್ಮೀರಿತನ) ಘೋಷಣೆ ಕೊಟ್ಟರು, ಅದರೊಂದಿಗೆ ಭಾರತ ಸರಕಾರ ಒಂದು ಕದನ ವಿರಾಮು ಪ್ರಕಟಿಸಿತು. ಇದನ್ನು ಆಗ ‘ರಮ್ಜಾನ್ ಕದನ ವಿರಾಮ’ ಎನ್ನಲಾಗಿತ್ತು. ಅದೇ ರೀತಿ ಭಾರತ ಸರಕಾರ ಇಂದು ನಾವು ಸೂಚಿಸಿದ ರೀತಿಯಲ್ಲಿ ಮೂರ್ತ ಹೆಜ್ಜೆಗಳನ್ನು ಇಡಬೇಕು.



ಶ್ರೀನಗರಕ್ಕೆ ಸರ್ವಪಕ್ಷ ನಿಯೋಗ ಹೊರಡುವ ಮೊದಲು ಎಡಪಕ್ಷಗಳು ಕರೆದ ಸಮಾಲೋಚನಾ ಸಭೆ



ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್



ದೆಹಲಿ


ಗುವಾಹಟಿ


ಜಮ್ಮು ಕಾಶ್ಮೀರ



ಕಾರ್ಮಿಕರಲ್ಲಿ ಗೊಂದಲ ಮೂಡಿಸುವ ಪ್ರಯತ್ನಗಳ ಮೂಲಕ ಬಿಜೆಪಿ ನೇತೃತ್ವದ ಸರಕಾರ ಮತ್ತು ಅದರೊಂದಿಗೆ ಶಾಮೀಲಾಗಿ ತಾನು ಕರೆ ನೀಡದೇ ಇದ್ದ ಮುಷ್ಕರದಿಂದ ಹಿಂದೆ ಸರಿಯುವುದಾಗಿ ಘೋಷಿಸಿದ ಬಿಎಂಎಸ್ ತಮ್ಮ ಕಾರ್ಪೊರೆಟ್ ದಣಿಗಳಿಗೆ ಸೇವೆ ಸಲ್ಲಿಸಲಿಕ್ಕಾಗಿ ಕಾರ್ಮಿಕರಿಗೆ ಮೋಸ ಮಾಡಲೂ ಹೇಸದಿದ್ದರೂ ದೇಶದ ದುಡಿಯುವ ವರ್ಗ ಅವರ ಮೋಸಕ್ಕೆ ಬಲಿಬೀಳಲಿಲ್ಲ. ಭಾರತದಲ್ಲಿ ನವ-ಉದಾರವಾದಿ ನೀತಿಗಳು ದಾಂಗುಡಿ ಇಟ್ಟ ನಂತರ ನಡೆದ ಈ ಹದಿನೇಳನೇ ಸಾರ್ವತ್ರಿಕ ಮುಷ್ಕರದ ಬಗ್ಗೆ ಬಂದಿರುವ ವರದಿಗಳ ಪರಾಮರ್ಶೆ ಮಾಡುತ್ತ 2016 ಸೆಪ್ಟೆಂಬರ್ ಎರಡರ ಸಾರ್ವತ್ರಿಕ ಮುಷ್ಕರ ನಿಸ್ಸಂಶಯವಾಗಿಯೂ ದೇಶದ ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಒಂದು ಮೈಲುಗಲ್ಲಾಗಿ ಉಳಿಯುತ್ತದೆ ಎಂದಿದ್ದಾರೆ ಸಿಐಟಿಯುನ ಅಖಿಲ ಭಾರತ ಮುಖಂಡರಾದ


ಕೆ. ಹೇಮಲತಾ



ಹರಿಯಾಣ


ಕೇರಳ

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಸೆಪ್ಟೆಂಬರ್ 2



ದುಡಿಯುವ ಜನರ ಆಕ್ರೋಶದ ಪ್ರತಿಫಲನ

2016 ಸೆಪ್ಟೆಂಬರ್ 2ರಂದು ನಡೆದ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವು ಸರಿಯಾಗಿ ಒಂದು ವರ್ಷದ ಹಿಂದೆ ಅಂದರೆ 2015ರ ಸೆಪ್ಟೆಂಬರ್ ಎರಡರಂದು ನಡೆದ ಹೋರಾಟಕ್ಕಿಂತಲೂ ದೊಡ್ಡದಾಗಿತ್ತು ಹಾಗೂ ವಿಶಾಲವಾದುದಾಗಿತ್ತು. ಅದೇ 12 ಅಂಶಗಳ ಬೇಡಿಕೆ ಆಧಾರದಲ್ಲಿ ಈ ವರ್ಷದ ಸಾರ್ವತ್ರಿಕ ಮುಷ್ಕರ ನಡೆಯಿತು. ಕಳೆದ ವರ್ಷದ ಮುಷ್ಕರದಲ್ಲಿ 15 ಕೋಟಿ ಕಾರ್ಮಿಕರು ಭಾಗವಹಿಸದ್ದರೆಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹೇಳಿದ್ದವು. ಈ ಸಲದ ಮುಷ್ಕರದ ಪ್ರಭಾವ ಎಷ್ಟಿತ್ತೆಂದರೆ, ಭಾಗಿಯಾದವರ ಸಂಖ್ಯೆಯ ಬಗ್ಗೆ ಕಾರ್ಮಿಕ ಸಂಘಟನೆಗಳು ಹೇಳುವುದಕ್ಕೂ ಮೊದಲೇ ಇಲೆಕ್ಟ್ರಾನಿಕ್ ಮಾಧ್ಯಮಗಳು ಮುಷ್ಕರದಲ್ಲಿ 18 ಕೋಟಿ ಕಾರ್ಮಿಕರು ಪಾಲ್ಗೊಂಡಿದ್ದರೆಂದು ವರದಿ ಮಾಡಿದವು.

ಇದು ಕಾರ್ಮಿಕರ ಅನುಕೂಲಕ್ಕಾಗಿ ತಾನು ಕೆಲಸ ಮಾಡುತ್ತಿರುವುದಾಗಿ ಹಾಗೂ ಅವರಿಗೆ ಸಾಮಾಜಿಕ ಭದ್ರತೆ ವ್ಯವಸ್ಥೆಗಳನ್ನು ಕಲ್ಪಿಸುತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ಕೇಂದ್ರ ಸರಕಾರದ ಮುಖಕ್ಕೆ ಹೊಡೆದಂತಿದೆ. ಸರಿಯಾದ ಉತ್ತರದಂತಿದೆ. 2015ರಲ್ಲಿ ಕೊನೆ ಗಳಿಗೆಯಲ್ಲಿ ಮುಷ್ಕರದಿಂದ ಹಿಂದೆ ಸರಿದ ಬಿಎಂಎಸ್, ಈ ಸಲ ಮುಷ್ಕರ ಕರೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿಯೇ ಇರಲಿಲ್ಲ ಎನ್ನುವುದು ಇಲ್ಲಿ ಗಮನಾರ್ಹ.

ಕಾರ್ಮಿಕರಲ್ಲಿ ಗೊಂದಲ ಮೂಡಿಸಲು ಮತ್ತು ಮುಷ್ಕರವನ್ನು ಹಾಳುಗೆಡವಲು ಬಿಜೆಪಿ ನೇತೃತ್ವದ ಸರಕಾರ ತನ್ನಿಂದಾದ ಎಲ್ಲಾ ಪ್ರಯತ್ನಗಳನ್ನು ನಡೆಸಿದ್ದನ್ನೂ ಇಲ್ಲಿ ಗಮನಿಸಬೇಕು.

ಸರಕಾರದ ಈ ಎಲ್ಲಾ ಪ್ರಯತ್ನಗಳಿಗೆ ಬಿಎಂಎಸ್ ಕೈಜೋಡಿಸಿತು. ತಾನು ಕರೆ ನೀಡದೇ ಇದ್ದ ಮುಷ್ಕರದಿಂದ ಹಿಂದೆ ಸರಿಯುವುದಾಗಿ ಘೋಷಿಸಿದ ಬಿಎಂಎಸ್, ಕಾರ್ಮಿಕರಿಗೆ ಐತಿಹಾಸಿಕ ಜಯ ಲಭಿಸಿದೆ ಎಂದೂ ಹೇಳಿಕೊಂಡಿತು. ಇವೆಲ್ಲವೂ ತಮ್ಮ ಕಾರ್ಪೊರೆಟ್ ದಣಿಗಳಿಗೆ ಸೇವೆ ಸಲ್ಲಿಸಿ ಕಾರ್ಮಿಕರಿಗೆ ಮೋಸ ಮಾಡುವ ಆರ್‌ಎಸ್‌ಎಸ್ ನೇತೃತ್ವದ ಪರಿವಾರದ ಸದಸ್ಯರಾದ ಬಿಜೆಪಿ ಮತ್ತು ಬಿಎಂಎಸ್‌ನ ತಂತ್ರಗಳ ಭಾಗವಾಗಿವೆ. ಕಾರ್ಪೊರೆಟ್ ಮಾಧ್ಯಮ, ಅದರಲ್ಲೂ ಮುಖ್ಯವಾಗಿ ಇಲೆಕ್ಟ್ರಾನಿಕ್ ಮಾಧ್ಯಮ ಎಂದಿನಂತೆ ಈ ಸುಳ್ಳಿನ ಕಂತೆಗಳನ್ನು ಪ್ರಸಾರ ಮಾಡಿ ತಪ್ಪು ದಾರಿಗೆಳೆಯುವ ಪ್ರಚಾರ ಪ್ರಕ್ರಿಯೆ ತನ್ನ ಪಾಲನ್ನೂ ನೀಡಿತು.

ಏನೇ ಇದ್ದರೂ ದೇಶದ ದುಡಿಯುವ ವರ್ಗ ಮೋಸಕ್ಕೆ ಬಲಿಬೀಳಲಿಲ್ಲ. ವರದಿಗಳು ತೋರಿಸುವ ಪ್ರಕಾರ, ವಿಜಯೋತ್ಸವ ರ್‍ಯಾಲಿಗಳು ಮತ್ತು ಮೆರವಣಿಗೆಗಳನ್ನು ನಡೆಸಲು ಬಿಎಂಎಸ್ ನಾಯಕತ್ವ ಕರೆ ನೀಡಿದರೂ ಬಿಎಂಎಸ್ ಸದಸ್ಯರು ಮುಷ್ಕರವನ್ನು ವಿರೋಧಿಸಲು ಸಿದ್ಧರಿರಲಿಲ್ಲ. ವಾಸ್ತವವಾಗಿ ಅನೇಕ ಕಡೆ ಬಿಎಂಎಸ್ ಸದಸ್ಯರೂ ಮುಷ್ಕರದಲ್ಲಿ ಭಾಗಿಯಾದರು.

ಪುಣೆ ಕೈಗಾರಿಕಾ ಪ್ರದೇಶದವರಂತೆ ಯಾವುದೇ ಸಂಘಗಳಲ್ಲಿ ಸಂಘಟಿತರಾಗದ ಮತ್ತು ಕಳೆದ ವರ್ಷದ ಮುಷ್ಕರದಲ್ಲಿ ಪಾಲ್ಗೊಂಡ ಕಾರ್ಮಿಕರು ಈ ವರ್ಷದ ಹೋರಾಟದಲ್ಲೂ ಭಾಗವಹಿಸಿದರು. ಅನೇಕ ಕಡೆ ಮುಷ್ಕರವು ಹೊಸ ಪ್ರದೇಶಗಳಿಗೂ ಹಬ್ಬಿ ಕಾರ್ಮಿಕರ ಹೊಸ ವಿಭಾಗಗಳನ್ನು ತಲುಪಿತು ಕೂಡ. ಸಾಂಪ್ರದಾಯಿಕವಾಗಿ ಟ್ರೇಡ್ ಯೂನಿಯನ್‌ಗಳು ಬಲಿಷ್ಠವಾಗಿರುವ ರಾಜ್ಯಗಳು ಮಾತ್ರವಲ್ಲದೆ ಇತರ ಅನೇಕ ರಾಜ್ಯಗಳಲ್ಲಿ ಕೂಡ ಮುಷ್ಕರವು ಬಂದ್ ಆಗಿ ಪರಿವರ್ತನೆಗೊಂಡಿತು. ರಸ್ತೆ ಸಾರಿಗೆ ನೌಕರರು ದೊಡ್ಡ ಪ್ರಮಾಣದಲ್ಲಿ ಮುಷ್ಕರದಲ್ಲಿ ಭಾಗವಹಿಸಿದ್ದು ಇದಕ್ಕೆ ಬಹುಮುಖ್ಯ ಕಾರಣ. ಅವರ ಮುಷ್ಕರದಿಂದಾಗಿ ಈ ರಾಜ್ಯಗಳಲ್ಲಿ ಜನಜೀವನ ಸ್ತಬ್ಧಗೊಂಡಿತು. ಅಸ್ಸಾಂ, ಬಿಹಾರ, ಹರ್ಯಾಣ, ಜಾರ್ಖಂಡ್, ಕರ್ನಾಟಕ, ಮಧ್ಯಪ್ರದೇಶ, ಓಡಿಶಾ, ಪಂಜಾಬ್‌ನ ಅನೇಕ ಜಿಲ್ಲೆಗಳಲ್ಲಿ ಬಂದ್‌ನಂಥ ವಾತಾವರಣ ಇತ್ತು. ಕಾರ್ಮಿಕರಿಗೆ ಬೆದರಿಕೆ ಹಾಕುವ ಮೂಲಕ ಪಶ್ಚಿಮ ಬಂಗಾಳದಲ್ಲಿ ಮುಷ್ಕರವನ್ನು ದಮನಮಾಡಲು ಟಿಎಂಸಿ ಸರಕಾರ ಪ್ರಯತ್ನಿಸಿದರೂ ರಾಜ್ಯ ಸಾರಿಗೆ ಬಸ್‌ಗಳು ಖಾಲಿಖಾಲಿಯಾಗಿ ಸಂಚರಿಸಿದವು. ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಬಂದ್‌ನಂಥ ಸನ್ನಿವೇಶ ಇತ್ತು. ಕೇರಳ ಮತು ತ್ರಿಪುರಾದಲ್ಲಿ ಎಂದಿನಂತೆ ಮುಷ್ಕರವು ಬಂದ್ ಆಗಿ ಪರಿವರ್ತನೆಯಾಯಿತು.

ಸರಕಾರದ ನೀತಿಗಳ ವಿರುದ್ಧ ಕಾರ್ಮಿಕರ ಆಕ್ರೋಶ ಹಲವು ರೀತಿಗಳಲ್ಲಿ ವ್ಯಕ್ತವಾಯಿತು. ಯಾವುದೇ ಸಂಘದ ಸದಸ್ಯರಾಗಿರದ 70000 ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಗುಜರಾತ್‌ನಲ್ಲಿ ಮುಷ್ಕರದಲ್ಲಿ ಪಾಲ್ಗೊಂಡರು. ಅನೇಕ ಜಿಲ್ಲಾ ಕೇಂದ್ರಗಳಲ್ಲಿ ನಡೆದ ಮತಪ್ರದರ್ಶನಗಳಲ್ಲೂ ಅವರು ಭಾಗವಹಿಸಿದರು. ಗುಜರಾತ್‌ನ ಭಾವನಗರ್, ಆಂಧ್ರ ಪ್ರದೇಶದ ಗಂಗಾವರಂ ಹಾಗೂ ಕಾಕಿನಾಡಾದ ಸಣ್ಣ ಬಂದರುಗಳ ಎಲ್ಲಾ ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿದರು. ಈ ಕಾರ್ಮಿಕರು ಮುಷ್ಕರಕ್ಕೆ ಕರೆ ಕೊಟ್ಟ ಯಾವುದೇ ಕೇಂದ್ರೀಯ ಟ್ರೇಡ್ ಯೂನಿಯನ್‌ನ ಸದಸ್ಯರಲ್ಲ. ಅದೇ ರೀತಿ ದೇಶದ ಅನೇಕ ಕೈಗಾರಿಕಾ ಪ್ರದೇಶಗಳಲ್ಲಿ ಯಾವುದೇ ಯೂನಿಯನ್‌ನ ಸದಸ್ಯರಲ್ಲದ ಸಾವಿರಾರು ಕಾರ್ಮಿಕರೂ ಮುಷ್ಕರದಲ್ಲಿ ಭಾಗಿಯಾದರು.

ಕಳೆದ ವರ್ಷದಷ್ಟು ಉತ್ತಮ ಮುಷ್ಕರ ಬಂದರು ವಲಯದಲ್ಲಿ ಈ ಬಾರಿ ಆಗದಿದ್ದರೂ ಹಾಗೂ ಕೆಲವು ಜಿಲ್ಲೆಗಳಲ್ಲಿ ಸಾರಿಗೆ ನೌಕರರ ಮುಷ್ಕರ ಕಳೆದ ವರ್ಷದಷ್ಟು ಪರಿಣಾಮಕಾರಿಯಾಗದಿದ್ದರೂ ಒಟ್ಟಾರೆಯಾಗಿ ಇನ್ನೂ ಹೆಚ್ಚು ಕೈಗಾರಿಕಾ ಪ್ರದೇಶಗಳಲ್ಲಿ ಹಾಗೂ ವಲಯಗಳಲ್ಲಿ ಮುಷ್ಕರ ನಡೆದಿದೆ ಮತ್ತು ಕಾರ್ಮಿಕರ ಅನೇಕ ಹೊಸ ವಿಭಾಗಗಳವರು ಸೇರ್ಪಡೆಯಾಗಿದ್ದಾರೆ.

ಕಾರ್ಮಿಕರು ಸರಕಾರ ಮಾಧ್ಯಮದಲ್ಲಿ ನೀಡಿದ ಭಾರಿ ಜಾಹಿರಾತುಗಳು ಹಾಗೂ ಬಿಎಂಎಸ್ ನೀಡಿದ ಸಾಥ್‌ನಿಂದ ಆದ ಅಪಪ್ರಚಾರವನ್ನು ಮಾತ್ರವೇ ಎದುರಿಸಬೇಕಾಗಿ ಬರಲಿಲ್ಲ. ಅನೇಕ ರಾಜ್ಯಗಳಲ್ಲಿ ಅವರನ್ನು ಕಿರುಕುಳ, ಪೊಲೀಸ್ ದೌರ್ಜನ್ಯಕ್ಕೆ ಹಾಗೂ ದೈಹಿಕ ದಾಳಿಗೆ ಒಳಪಡಿಸಲಾಯಿತು.

ಹರ್ಯಾಣದಲ್ಲಿ ರಸ್ತೆ ಸಾರಿಗೆ ನೌಕರರ 22 ನಾಯಕರನ್ನು ಬಂಧಿಸಲಾಯಿತು ಹಾಗೂ ಮುಷ್ಕರನಿರತ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಲಾಯಿತು. ಗುತ್ತಿಗೆ ನೌಕರರು ವಾಸವಿದ್ದ ವಸತಿ ಪ್ರದೇಶಗಳಿಗೆ ತೆರಳಿದ ಪೊಲೀಸರು, ಅವರು ಕೆಲಸಗಳಿಗೆ ಹೋಗುವಂತೆ ಬಲವಂತ ಮಾಡಿದರು.

ಮುಷ್ಕರದಲ್ಲಿ ಭಾಗವಹಿಸಿದ್ದಕ್ಕಾಗಿ ಜಾರ್ಖಂಡ್‌ನಲ್ಲಿ ಅನೇಕ ಕಲ್ಲಿದ್ದಲು ಕಾರ್ಮಿಕರನ್ನು ಅಮಾನತು ಮಾಡಲಾಯಿತು.

ನೊಯ್ಡಾದಲ್ಲಿ ಕಾರ್ಮಿಕರಲ್ಲಿ ಭೀತಿ ಹುಟ್ಟಿಸಲು ಧ್ವಜ ಪಥಸಂಚಲನ ನಡೆಸಿದ ಪೊಲೀಸರು ಸಿನಿಮಾ ಮಂದಿರವೊಂದರ ಬಳಿ ಶಾಂತಿಯುತವಾಗಿ ನಿಂತಿದ್ದ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಿದರು.

ಪಶ್ಚಿಮ ಬಂಗಾಳದಲ್ಲಿ ಮಾಜಿ ಸಂಸತ್ ಸದಸ್ಯ, ಸಿಟು ನಾಯಕ ಸೂರಜ್ ಪಾಠಕ್ ಮತ್ತು ಅನೇಕ ಸಿಐಟಿಯು ಮುಖಂಡರನ್ನು ಬಂಧಿಸಲಾಯಿತು. ರ್‍ಯಾಲಿಗಳಲ್ಲಿ ಭಾಗವಹಿಸಿದ ಮಹಿಳೆಯರ ಸಹಿತ


ಆಂಧ್ರಪ್ರದೇಶ


ಪಾಟ್ನ


ತಮಿಳುನಾಡು

ಕಾರ್ಮಿಕರು ಮತ್ತು ಅವರ ಬೆಂಬಲಿಗರ ಮೇಲೆ ಟಿಎಂಸಿ ಬೆಂಬಲಿಗರು ಹಲ್ಲೆಗಳನ್ನು ಮಾಡಿದರು.

ಅಸ್ಸಾಮನ ಅನೇಕ ಭಾಗಗಳಲ್ಲಿ ಸುಮಾರು 5000 ಕಾರ್ಮಿಕರನ್ನು ಬಂಧಿಸಲಾಯಿತು.

ಎಲ್ಲಾ ರಾಜ್ಯಗಳು ಹಾಗೂ ಆಯಾಯ ವಲಯಗಳಿಂದ ಸಮಗ್ರ ವರದಿ ಇನ್ನೂ ಬರಬೇಕಾಗಿದೆಯಷ್ಟೆ. ಆದರೆ ಸೆಪ್ಟಂಬರ್ ಎರಡರ ಸಂಜೆ ವರೆಗೆ ಹರಿದು ಬರುತ್ತಿದ್ದ ವರದಿಗಳು ಮುಷ್ಕರದ ಅಗಾಧತೆ ಮತ್ತು ಅದಕ್ಕೆ ಸಿಕ್ಕಿದ ಬೆಂಬಲದ ಪ್ರಮಾಣವನ್ನು ಸೂಚಿಸುತ್ತವೆ.

ಅನೇಕ ರಾಜ್ಯಗಳಲ್ಲಿ ಸ್ಥಳೀಯ ರಾಜ್ಯ ಮಟ್ಟದ ಸಂಘಟನೆಗಳು ಮುಷ್ಕರದಲ್ಲಿ ಸೇರಿದವು. ತೆಲಂಗಾಣದಲ್ಲಿ ಟಿಆರ್‌ಎಸ್ ಸಂಯೋಜಿತ ಸಂಘಗಳು ಮುಷ್ಕರದಲ್ಲಿ ಭಾಗಿಯಾದವು. ಆಂಧ್ರ ಪ್ರದೇಶದಲ್ಲಿ ಆಳುವ ಪಕ್ಷವಾದ ಟಿಡಿಪಿಯ ಟಿಎನ್‌ಟಿಯುಸಿ, ತೆಲಂಗಾಣದ ಮುಷ್ಕರಕ್ಕೆ ಬೆಂಬಲ ನೀಡಿತು. ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಕೂಡ, ಟಿಎನ್‌ಟಿಯುಸಿ ಮುಷ್ಕರವನ್ನು ವಿರೋಧಿಸಿದರೂ ಅದಕ್ಕೆ ಸೇರಿದ ಕಾರ್ಮಿಕರು ಮುಷ್ಕರದಲ್ಲಿ ಭಾಗಿಯಾದರು.

ಒಡಿಶಾದಲ್ಲಿ ಟ್ರೇಡ್ ಯೂನಿಯನ್ ನಾಯಕರು ತಮ್ಮನ್ನು ಭೇಟಿಯಾದಾಗ ಮುಖ್ಯಮಂತ್ರಿಯವರೇ ಸ್ವತಃ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದರು. ಎಡ ಪಕ್ಷಗಳು ಮುಷ್ಕರಕ್ಕೆ ಬಹಿರಂಗ ಬೆಂಬಲ ವ್ಯಕ್ತಪಡಿಸಿದವು. ಕೆಲವು ರಾಜ್ಯಗಳಲ್ಲಿ ಬಿಎಂಎಸ್‌ನ ಸ್ಥಳೀಯ ಘಟಕಗಳು ಮುಷ್ಕರವನ್ನು ವಿರೋಧಿಸುವ ಸ್ಥಿತಿಯಲ್ಲಿರಲಿಲ್ಲ. ಅನೇಕ ರಾಜ್ಯಗಳಲ್ಲಿ ಬಿಎಂಎಸ್ ಸದಸ್ಯರು ಕೂಡ ಮುಷ್ಕರವನ್ನು ಸೇರಿದರು.

ದೇಶಾದ್ಯಂತ ಬಹುತೇಕ ಬ್ಯಾಂಕ್ ಮತ್ತು ವಿಮಾ ನೌಕರರು ಮುಷ್ಕರದಲ್ಲಿ ಭಾಗವಹಿಸಿದರು. ಬಹುತೇಕ ರಾಜ್ಯಗಳಲ್ಲಿ ರಾಜ್ಯ ಸರಕಾರಿ ನೌಕರರು ಕೂಡ ಸಂಪಿನಲ್ಲಿ ಭಾಗವಹಿಸಿದರು. ಅರುಣಾಚಲ ಪ್ರದೇಶ, ಮಣಿಪುರ, ಮಿಝೋರಂ, ನಾಗಾಲ್ಯಾಂಡ್, ಮೇಘಾಲಯ ಮತ್ತಿತರ ಈಶಾನ್ಯ ರಾಜ್ಯಗಳ ಸರಕಾರಿ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿ ಉಲ್ಲೇಖನೀಯ. ಯಾಕೆಂದರೆ ಅವರು ಮುಷ್ಕರದಲ್ಲಿ ಭಾಗವಹಿಸಿದ್ದು ಇದೇ ಮೊದಲು. ಆದಾಯ ತೆರಿಗೆ ಹಾಗೂ ಅಂಚೆ ಇಲಾಖೆ ನೌಕರರು ಮೊದಲಾದ ಕೇಂದ್ರ ಸರಕಾರಿ ನೌಕರರು ಭಾರೀ ಪ್ರಮಾಣದಲ್ಲಿ ಮುಷ್ಕರದಲ್ಲಿ ಪಾಲ್ಗೊಂಡರು. ಹಲವು ರಕ್ಷಣಾ ಉತ್ಪಾದನಾ ಘಟಕಗಳ ನೌಕರರು ಕೂಡ ಮುಷ್ಕರದಲ್ಲಿ ಭಾಗವಹಿಸಿದರು. ಬಿಎಸ್‌ಎನ್‌ಎಲ್ ನೌಕರರು ದೇಶಾದ್ಯಂತ ಮುಷ್ಕರದಲ್ಲಿ ಪಾಲ್ಗೊಂಡರು. ಕಲ್ಲಿದ್ದಲು ಕ್ಷೇತ್ರದಲ್ಲಿ ಮುಷ್ಕರ ಹೆಚ್ಚು ಕಡಿಮೆ ಸಂಪೂರ್ಣವಾಗಿತ್ತು. ಸಾರ್ವಜನಿಕ ರಂಗದ ಬಹುತೇಕ ಗುತ್ತಿಗೆ ನೌಕರರು ಮುಷ್ಕರದಲ್ಲಿ ಭಾಗವಹಿಸಿದರು. ಮೆಡಿಕಲ್ ಮತ್ತು ಇತರ ಮಾರಾಟ ಪ್ರತಿನಿಧಿಗಳ ಮುಷ್ಕರ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಸಂಪೂರ್ಣವಾಗಿತ್ತು.

ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟ ನೌಕರರು ... ಈ ರೀತಿಯಾಗಿ ವಿವಿಧ ಯೋಜನೆಗಳಲ್ಲಿ ಕೆಲಸ ಮಾಡುವವರು ದೇಶಾದ್ಯಂತ ಮುಷ್ಕರದಲ್ಲಿ ಭಾಗವಹಿಸಿದರು. ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಬಿಹಾರ, ಮಹಾರಾಷ್ಟ್ರ ಮತ್ತಿತರ ಕಡೆ ಮುಷ್ಕರದಲ್ಲಿ ಪಾಲ್ಗೊಂಡರು.

ಪ್ಲಾಂಟೇಷನ್, ಗೋಡಂಬಿ, ನಾರು, ಮತ್ತು ಮೀನುಗಾರಿಕೆಯಂಥ ಸಾಂಪ್ರದಾಯಿಕ ಕ್ಷೇತ್ರಗಳ ಕಾರ್ಮಿಕರೂ ಲಕ್ಷಾಂತರ ಸಂಖ್ಯೆಯಲ್ಲಿ ಮುಷ್ಕರಕ್ಕೆ ಸಾಥ್ ನೀಡಿದರು. ಬೀಡಿ, ನಿರ್ಮಾಣ, ತಲೆಹೊರೆ ಕಾರ್ಮಿಕರು, ಆಟೋ ಚಾಲಕರು, ಬೀದಿ ಬದಿ ವ್ಯಾಪಾರಿಗಳು, ಮನೆಗೆಲಸದವರು ಮುಂತಾದ ಅಸಂಘಟಿತ ವಲಯದ ಲಕ್ಷಾಂತರ ಕಾರ್ಮಿಕರು ದೇಶಾದ್ಯಂತ ಸಂಪಿನಲ್ಲಿ ಭಾಗವಹಿಸಿದರು. ರಸ್ತೆ ತಡೆ, ರೈಲು ತಡೆ ಮುಂತಾದ ಚಳವಳಿಗಳಲ್ಲಿ ಭಾಗವಹಿಸಿದರು. ಮುನಿಸಿಪಲ್, ಪಂಚಾಯತ್ ನೌಕರರು, ಗ್ರಾಮ ಚೌಕಿದಾರರು ಮೊದಲಾದ ವಿಭಾಗಗಳ ಕಾರ್ಮಿಕರೂ ಪಾಲ್ಗೊಂಡರು.

ಆಂಧ್ರ ಪ್ರದೇಶದಲ್ಲಿ, ವಿಶಾಖ ಉಕ್ಕು ಮತ್ತು ಡಿಸಿಐನಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ತಿರುಪತಿ ಪಟ್ಟಣದ ಟಿಟಿಡಿಯಲ್ಲಿ ಕೆಲಸ ಕಾರ್ಯಗಳು ಅಸ್ತವ್ಯಸ್ತಗೊಂಡವು. ಇಡೀ ರಾಜ್ಯದಲ್ಲಿ ಆಟೋಗಳು ಮುಷ್ಕರ ನಡೆಸಿದವು. ರೇಣಿಗುಂಟ ಕೈಗಾರಿಕಾ ಪ್ರದೇಶ ಸಹಿತ ಎಲ್ಲಾ ಕೈಗಾರಿಕಾ ಸಮುಚ್ಚಯಗಳು ಮುಚ್ಚಿದ್ದವು. ಅನೇಕ ಪ್ರಮುಖ ನಗರಗಳಲ್ಲಿ ಟ್ರಕ್ ಮಾಲಿಕರು ಮಷ್ಕರದಲ್ಲಿ ಭಾಗವಹಿಸಿದ್ದರು. ತಲೆಹೊರೆ ಕಾರ್ಮಿಕರು ಮುಷ್ಕರ ನಡೆಸಿದ್ದರಿಂದ ರಾಜ್ಯದಲ್ಲಿ ವಾಣಿಜ್ಯ ಚಟುವಟಿಕೆಗಳು ಸ್ಥಗಿತಗೊಂಡವು.

ಅಸ್ಸಾಮ್‌ನಲ್ಲಿ ಮುಷ್ಕರ ಸಂಪೂರ್ಣ ಬಂದ್‌ನ ಸ್ವರೂಪ ಪಡೆಯಿತು. ರಾಜ್ಯದ ಯಾವುದೇ ತೈಲಾಗಾರ ಕಾರ್ಯನಿರ್ವಹಿಸಲಿಲ್ಲ. ಓಎನ್‌ಜಿಸಿ ಸ್ಥಗಿತಗೊಂಡಿತು. 15 ಲಕ್ಷಕ್ಕೂ ಹೆಚ್ಚು ತೋಟ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಎಲ್ಲಾ ಖಾಸಗಿ ಹಾಗೂ ಸರಕಾರಿ ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು. ಅಸಂಘಟಿತ ಕಾರ್ಮಿಕರು, ರೈತರು, ಕೃಷಿ ಕಾರ್ಮಿಕರು ರೈಲು ತಡೆ ನಡೆಸಿದ್ದರಿಂದ ರೈಲು ಸಂಚಾರ ಅಸ್ತವ್ಯಸ್ತಗೊಂಡಿತು.

ಬಿಹಾರದಲ್ಲಿ ಕೂಡ ಅನೇಕ ಜಿಲ್ಲೆಗಳಲ್ಲಿ ಮುಷ್ಕರ ಬಂದ್ ಆಗಿ ಯಶಸ್ವಿಯಾಯಿತು. ರಾಜ್ಯದ ಬಹುತೇಕ ಎಲ್ಲಾ ಕೈಗಾರಿಕಾ ಪ್ರದೇಶಗಳ ಕಾರ್ಮಿಕರು ಸಂಪಿಗೆ ಬೆಂಬಲ ನೀಡಿ ಭಾಗಿಯಾದರು.

ಗುಜರಾತ್‌ನ 22 ಜಿಲ್ಲೆಗಳಲ್ಲಿ ಸುಮಾರು 4 ಲಕ್ಷ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡರು.

ಗುರ್‌ಗಾಂವ್ ಮತ್ತು ಮಾನೇಸರ್ ಕೈಗಾರಿಕಾ ಪ್ರದೇಶಗಳ ಸಹಿತ ಹರ್ಯಾಣದಲ್ಲಿ ಮುಷ್ಕರ ಅತ್ಯಂತ ಯಶಸ್ವಿಯಾಗಿತ್ತು. ಮಾರುತಿ ಸಉಜುಕಿ, ಹೋಂಡಾ, ಹೀರೋ ಹೋಂಡಾ ಮತ್ತು ಇತರ ಕೈಗಾರಿಕಾ ಘಟಕಗಳ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು.

ಜಮ್ಮು ವಲಯದಲ್ಲಿ ಮುಷ್ಕರಕ್ಕೆ ಬೆಂಬಲವಾಗಿ ಮತಪ್ರದರ್ಶನಗಳು ನಡೆದವು; ಕಾಶ್ಮೀರ ವಲಯದಲ್ಲಿ ಕರ್ಫ್ಯೂ ಮುಂದುವರಿದಿತ್ತು. ವಿವಿಧ ವಿಭಾಗಗಳ ಕಾರ್ಮಿಕರು ಮತಪ್ರದರ್ಶನಗಳಲ್ಲಿ ಭಾಗವಹಿಸಿದ್ದರು.

ಜಾರ್ಖಂಡ್‌ನ ಜಮ್ಶೆಡ್‌ಪುರದಲ್ಲಿ, ಇದುವರೆಗೆ ಯಾವುದೇ ಮುಷ್ಕರದಲ್ಲಿ ಭಾಗವಹಿಸದಿದ್ದ ಕಾರ್ಮಿಕರು ಹಾಗೂ ಅನೇಕ ಕೈಗಾರಿಕಾ ಪ್ರದೇಶಗಳ ಕಾರ್ಮಿಕರು ಮುಷ್ಕರ ನಡೆಸಿದರು. ಇದು 2015ರ ಮುಷ್ಕರಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿತ್ತು.

ಕರ್ನಾಟಕದಲ್ಲಿ ಸುಮಾರು 50 ಲಕ್ಷ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಸ್ತೆ ಸಾರಿಗೆ ವಲಯದಲ್ಲಿ ಹಾಗೂ ಬೆಂಗಳೂರು

ಪುಟ 10 ಕ್ಕೆ



ವಾರಾಣಸಿ



ಮಹಾರಾಷ್ಟ್ರ

ಸೆ.2 ಮಹಾಮುಷ್ಕರ–ಟಿವಿ ಪತ್ರಿಕೆಗಳು ಕಂಡಂತೆ

ಮಾಧ್ಯಮ ಮಂಥನ

– ವಸಂತ

ಟಿವಿ ಪತ್ರಿಕೆ ಮುಂತಾದ ಮಾಧ್ಯಮಗಳ ಒಡೆತನದ ಸ್ವರೂಪ, ಸ್ವಭಾವಗಳಲ್ಲಿ ಈಚಿನ ವರ್ಷಗಳಲ್ಲಿ ಆದ ಭಾರೀ ಬದಲಾವಣೆಗಳ ಹಿನ್ನೆಲೆಯಲ್ಲಿ ಕಳೆದ ವಾರ ನಡೆದ ಸೆಪ್ಟಂಬರ್ 2 (ಸೆ. 2) ಮಹಾ ಮುಷ್ಕರದ ಸಕಾರಾತ್ಮಕ ಸಮಗ್ರ ಕವರೇಜ್ ಯಾರೂ ನಿರೀಕ್ಷಿಸಿರಲಿಲ್ಲ. ಆದರೂ ಈ ಬಾರಿಯ ಕವರೇಜ್ ನಕಾರಾತ್ಮಕತೆಯ ಹಾಗೂ ಕಾರ್ಮಿಕರ ವಿರುದ್ಧವಾದ ವಿಕೃತ ಪಕ್ಷಪಾತದ ಪಾತಾಳ ಮುಟ್ಟಿತು ಎಂದು ಹೇಳದೆ ವಿಧಿಯಿಲ್ಲ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದನಿ ಇಲ್ಲದವರ ದನಿ ಕೇಳಿಸುವಂತೆ ಮಾಡುವ ಮಾಧ್ಯಮಗಳ ಮೂಲಭೂತ ಕರ್ತವ್ಯಗಳ ಚ್ಯುತಿ ಮತ್ತು ಸ್ಥಾಪಿತ ಹಿತಾಸಕ್ತಿಗಳಿಂದ ಮಾಧ್ಯಮಗಳ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕಾದ ಪತ್ರಕಾರಿತೆಯ ಭಂಗ.



ಕನ್ನಡ ಮತ್ತು ಇಂಗ್ಲೀಷ್ ಟಿವಿ ಚಾನೆಲು ಮತ್ತು ಪತ್ರಿಕೆಗಳಲ್ಲಿ ಸೆ. 2 ಮಹಾ ಮುಷ್ಕರದ ಮೊದಲು, ಆ ದಿನ ಮತ್ತು ಆ ಮೇಲಿನ ಹೆಚ್ಚುಕಡಿಮೆ ಸಾಮಾನ್ಯವಾಗಿ ಕಂಡು ಬಂದ ಸುದ್ದಿ–ವಿಶ್ಲೇಷಣೆಗಳನ್ನು ವಿಮರ್ಶಿಸಿದರೆ ಇದು ಸ್ಪಷ್ಟವಾಗುತ್ತದೆ. ಸಂಖ್ಯೆಯಲ್ಲಿ ದೊಡ್ಡದಾಗಿರುವ ಮತ್ತು, ಒಡೆತನ ಹಾಗೂ ಪತ್ರಕರ್ತರ ಹಿನ್ನೆಲೆಯಲ್ಲಿ ವೈವಿಧ್ಯತೆ ಇರುವ ಈ ಸುದ್ದಿ ಮಾಧ್ಯಮಗಳಲ್ಲಿ ಸೆ. 2 ಮಹಾ ಮುಷ್ಕರದ ಕವರೇಜಿನಲ್ಲಿ ನಿರೀಕ್ಷಿಬಹುದಾದ ವೈವಿಧ್ಯತೆ ಇರಲಿಲ್ಲ. ಬದಲಾಗಿ ಈ ಕೆಳಗಿನ ಹೆಚ್ಚು ಕಡಿಮೆ ಆಶ್ಚರ್ಯ ಹುಟ್ಟಿಸುವ ಸಾಮಾನ್ಯ ಅಂಶಗಳು ಇದ್ದವು (ಇವನ್ನು ಪ್ರಜಾವಾಣಿ ಸೆ. 5 ಮತ್ತು ವಿಜಯ ಕರ್ನಾಟಕ ಸೆ. 3 ಸಂಪಾದಕೀಯಗಳ ಉದಾಹರಣೆಗಳೊಂದಿಗೆ ಕೊಡಲಾಗಿದೆ) :

ಮುಷ್ಕರ–ಬಂದ್ ಗೊಂದಲ:

11 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ಕೊಟ್ಟಿದ್ದು 'ಮಹಾ ಮುಷ್ಕರ'ಕ್ಕೆ. ಆದರೆ ಸೆ.2 ರ ಮೊದಲೇ, ಕರೆ ಕೊಟ್ಟಿರುವುದು "ಭಾರತ್ ಬಂದ್'ಗೆ ಎಂಬಂತೆ ಸುದ್ದಿ ಮಾಡಲಾಯಿತು. 'ನಾಳೆ ಭಾರತ್ ಬಂದ್' ಇತ್ಯಾದಿ ಸರ್ವೇಸಾಮಾನ್ಯ ತಲೆ ಬರಹಗಳಾಗಿದ್ದವು.

ಮುಷ್ಕರದ ದಿನ ಯಾವ ಸಾರ್ವಜನಿಕ ಸೇವೆ ಇರುತ್ತವೆ/ಇರುವುದಿಲ್ಲ ಎಂಬ ಬಗ್ಗೆ ಹಿಂದಿನ ದಿನವೇ "ಭವಿಷ್ಯ' ಹೇಳುವುದು ಮುಖ್ಯ ಸುದ್ದಿಗಳಾದವು. ಸೆ. 2 ಮುಷ್ಕರದ ಸಫಲತೆ/ವಿಫಲತೆಯನ್ನು ಸಹ ಬಂದ್ ನ ಪೂರ್ಣತೆ/ಅಪೂರ್ಣತೆಯಿಂದ ಅಳೆಯಲಾಯಿತು. 'ಕೇರಳ ಮತ್ತೆರಡು ರಾಜ್ಯಗಳಲ್ಲಿ ಬಿಟ್ಟರೆ ಬಂದ್ ವಿಫಲ', 'ಬಂದ್ ಗೆ ಮಿಶ್ರ ಪ್ರತಿಕ್ರಿಯೆ', "ಕಳೆದ ವರ್ಷ ಕೂಡ ಇದೇ ವಿಷಯಕ್ಕೆ ಬಂದ್ ನಡೆದಿತ್ತು. ಆದರೆ ಈಗ ಮತ್ತದೇ ಪುನರಾವರ್ತನೆಯಾಗಿದೆ." (ವಿ.ಕ. ಸೆ.3) ಇತ್ಯಾದಿ ಸರ್ವೇಸಾಮಾನ್ಯ ತಲೆ ಬರಹಗಳಾಗಿದ್ದವು. "ಮುಷ್ಕರ ಕಾರಣದಿಂದ ನಡೆದ ಅಘೋಷಿತ ಬಂದ್" ಎಂದು ಒಪ್ಪಿಕೊಂಡರೂ, "ಸರ್ಕಾರದ ನೀತಿ–ನಡೆಯನ್ನು ಪರಾಮರ್ಶಿಸುವುದಕ್ಕೆ ಮತ್ತು ಅದಕ್ಕೆ ವಿರೋಧ ವ್ಯಕ್ತಪಡಿಸುವುದಕ್ಕೆ ಪ್ರಜಾಸತ್ತಾತ್ಮಕವಾದ ಮಾರ್ಗಗಳು ಹತ್ತಾರು ಇವೆ. ಬಂದ್ ಎಂಬ ಅಸ್ತ್ರವನ್ನು ಬದಿಗೆ ಸರಿಸಿ ಪರ್ಯಾಯ ಮಾರ್ಗಗಳನ್ನು ಬಳಸಿದರೆ ಜನರ ಬೆಂಬಲ ಕೂಡ ದೊರೆಯುತ್ತದೆ." (ಪ್ರ. ಸೆ.5), "ಬಂದ್ ಎಂಬುದು ಸಂವಿಧಾನ ವಿರೋಧಿ. ಜನರ ಮೂಲಭೂತ ಹಕ್ಕುಗಳನ್ನು ಹೊಸಕಿ ಹಾಕಿದಂತೆ ಎಂದು ಸುಪ್ರೀಂಕೋರ್ಟ್ ಪದೇ ಪದೆ ಹೇಳಿದ್ದರೂ ಅದು ಯಾರ ಕಿವಿಗೂ ಬಿದ್ದಂತೆ ಕಾಣಿಸುವುದಿಲ್ಲ." (ವಿ.ಕ. ಸೆ.3) ಎಂಬ ಪುಕ್ಕಟೆ ಉಪದೇಶವನ್ನು ಸಹ ಕಾರ್ಮಿಕ ನಾಯಕರಿಗೆ ಕೊಡಲಾಯಿತು. ಕಾರ್ಮಿಕರು ತಿಂಗಳುಗಳ ಕಾಲ ಮನವಿ, ಮಾತುಕತೆ, ಪ್ರತಿಭಟನೆ ಮುಂತಾದವು ವಿಫಲವಾದ ಮೇಲೆ (ಇನ್ನೂ ಸಂವಿಧಾನ ಮತ್ತು ಕಾನೂನು–ಬದ್ಧವಾಗಿರುವ) ತಮ್ಮ ಅಂತಿಮ ಅಸ್ತ್ರವಾದ ಮುಷ್ಕರವನ್ನು ಬಳಸಿದ್ದಾರೆ ಎಂದು (ಪಾಪ!) ಇವರಿಗೆ ಗೊತ್ತಿಲ್ಲ ಎಂದು ನಂಬೋಣವೇ?

ಕಾರ್ಮಿಕರ ಹಕ್ಕೊತ್ತಾಯಗಳು:

ಕಾರ್ಮಿಕರಿಗೆ ಹಲವು ಸಮಸ್ಯೆಗಳಿವೆ. ಅದಕ್ಕೆ ಸರಕಾರ ಪ್ರತಿಸ್ಪಂದಿಸುತ್ತಿಲ್ಲ ಎಂದು ಹೆಚ್ಚಿನ ಮಾಧ್ಯಮಗಳು ಒಪ್ಪಿಕೊಳ್ಳುತ್ತವೆ. ಆದರೆ ಕಳೆದ ವರ್ಷದಿಂದ ಕಾರ್ಮಿಕ ಸಂಘಟನೆಗಳು ಮುಂದಿಟ್ಟ ಸಮಸ್ಯೆಗಳ ಬಗ್ಗೆ ವಿವರವಾದ ಮಾಹಿತಿ ಕೊಡುವುದು ಅಥವಾ ಚರ್ಚೆ ನಡೆಸುವುದು ಸೆ. 2 ರ ಮೊದಲಾಗಲಿ, ಸೆ. 2 ರಂದಾಗಲಿ ಅಥವಾ ಆ ಮೇಲಾಗಲಿ ತಮ್ಮ ಕರ್ತವ್ಯವೆಂದು ಅವು ಭಾವಿಸಲಿಲ್ಲ. ಒಂದೇ ವಾಕ್ಯದಲ್ಲಿ 4–5 ಬೇಡಿಕೆಗಳ ಬಗ್ಗೆ ಹಾರಿಕೆಯ ಹೇಳಿಕೆ ಮಾತ್ರ ಅಪರೂಪಕ್ಕೊಮ್ಮೆ ಕಾಣಿಸುತ್ತಿತ್ತು. ಈ ಸಮಸ್ಯೆಗಳಲ್ಲಿ ಹೆಚ್ಚಿನವು ಕಳೆದ ವರ್ಷದಿಂದ ಮುಂದುವರೆಯುತ್ತಿವೆ. ಕಳೆದ ಸೆ. 2 ರಿಂದ ಈ ಸೆ.2 ವರೆಗೆ ಮೋದಿ ಸರಕಾರ ಕಾರ್ಮಿಕ ಸಂಘಟನೆಗಳನ್ನು ಮಾತುಕತೆಗೂ ಕರೆದಿಲ್ಲ. ಏನೂ ಮಾಡಿಲ್ಲ ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಳ್ಳಲಿಲ್ಲ. ಮಾತ್ರವಲ್ಲ, ಹೆಚ್ಚಿನ ಮಾಧ್ಯಮಗಳು ಅದನ್ನು ಮರೆಮಾಚಿದವು ಕೂಡಾ. 'ಟಿನಾ ಬೋರಾ ಕೊಲೆ', 'ಡಿವೈಎಸ್ಪಿ ಗಣಪತಿ ಆತ್ಮಹತ್ಯೆ', 'ಅಮ್ನೆಸ್ಟಿ ದೇಶದ್ರೋಹ'ಗಳ ಬಗ್ಗೆ ದಿನಗಟ್ಟಲೆ ಚರ್ಚೆ ಏರ್ಪಡಿಸುವ ಮತ್ತು 'ಸ್ವತಂತ್ರ ತನಿಖೆ' ನಡೆಸಿ 'ಸರಕಾರಗಳನ್ನು ತರಾಟೆ'ಗೆ ತೆಗೆದುಕೊಳ್ಳುವ ಮಾಧ್ಯಮಗಳು ಕಾರ್ಮಿಕರ ಸಮಸ್ಯೆಗಳ ಬಗ್ಗೆ ಏಕೆ ಸರಕಾರವನ್ನು ತರಾಟೆಗೆ ತೆಗೆದುಕೊಳ್ಳಲಿಲ್ಲ. ಇದನ್ನು ಮಾಡದೆ ತಮ್ಮ ಪ್ರಾಥಮಿಕ ಕರ್ತವ್ಯಚ್ಯುತಿ ಮಾಡಿರುವ ಮಾಧ್ಯಮಗಳಿಗೆ "ಸರಕಾರ ಮತ್ತು ಕಾರ್ಮಿಕ ಸಂಘಟನೆಗಳು ತಾವೇ ಹೇಳಿದಂತೇ ನಡೆಯಬೇಕು ಎನ್ನುವ ಅಹಂ ಬದಿಗಿಟ್ಟು ರಾಜಿ ಸಂಧಾನ, ಬದ್ಧತೆ ಮತ್ತು ಕಾಳಜಿಯಿಂದ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು." (ವಿ.ಕ. ಸೆ. 3), ಮತ್ತು "ಕಾರ್ಮಿಕರು ಸಂಘರ್ಷ ಮನೋಭಾವ ಕೈಬಿಡಬೇಕು. ಸರ್ಕಾರ ಮತ್ತು ಕಾರ್ಮಿಕರು ಪರಸ್ಪರ ಕೈಜೋಡಿಸಿದರೆ ಪ್ರಗತಿಯ ಚಕ್ರ ಸುಸೂತ್ರವಾಗಿ ಉರುಳೀತು." (ಪ್ರ. ಸೆ.5) ಮುಂತಾದ ಭೋಳೇ ಸಲಹೆ ಕೊಡಲು ಯಾವ ಹಕ್ಕು ಇದೆ? ಸೆ.2 ರಂದು ಟಿವಿ ಚಾನೆಲುಗಳಂತೂ ದೆಹಲಿಯ ಎಎಪಿ ಮಂತ್ರಿಯ ಸೆಕ್ಸ್ ಟೇಪ್ ಬಗ್ಗೆ 'ಗಂಭೀರ ಚರ್ಚೆ'ಯಲ್ಲಿ ನಿರತವಾಗಿದ್ದವು.

ಪೂರ್ಣ/ಭಾಗಶಃ ಮುಷ್ಕರ:

ಯಾವ ಮಾಧ್ಯಮಗಳೂ ಎಷ್ಟು ಕಾರ್ಮಿಕರು ದೇಶವ್ಯಾಪಿಯಾಗಿ ಮುಷ್ಕರದಲ್ಲಿ ಭಾಗವಹಿಸಿದರು ಎಂಬ ತಮ್ಮ ಸ್ವತಂತ್ರ ಅಂದಾಜು ಹೇಳಲಿಲ್ಲ. ಯಾವ ಸಂಘಟಿತ/ಅಸಂಘಟಿತ ವಲಯಗಳಲ್ಲಿ ಮುಷ್ಕರ 'ಪೂರ್ಣ' ಅಥವಾ ಎಷ್ಟು ಮಟ್ಟಿಗೆ 'ಅಪೂರ್ಣ'ವಾಗಿತ್ತು ಎಂಬ ಬಗ್ಗೆಯೂ ಹೇಳಲಿಲ್ಲ. '18 ಕೋಟಿ ಕಾರ್ಮಿಕರು ನೇರವಾಗಿ ಭಾಗವಹಿಸಿದ ಈ ವರೆಗಿನ ಅತಿ ದೊಡ್ಡ ಮುಷ್ಕರ' ಎಂಬ ಕಾರ್ಮಿಕ ಸಂಘಟನೆಗಳ ಹೇಳಿಕೆಯನ್ನು ಬಿತ್ತರಿಸಲೂ ಇಲ್ಲ

ಪುಟ 10 ಕ್ಕೆ

ದುಡಿಯುವ ಜನರ ಆಕ್ರೋಶದ ಪ್ರತಿಫಲನ..... ಪುಟ 9 ರಿಂದ



ಮತ್ತು ಮೈಸೂರಿನ ಎಲ್ಲಾ ಪ್ರಮುಖ ಕೈಗಾರಿಕೆಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ಬೆಂಗಳೂರಿನ ಕೈಗಾರಿಕಾ ಸಮುಚ್ಚಯಗಳ 19 ಲಕ್ಷ ಕಾರ್ಮಿಕರು ಮುಷ್ಕರಕ್ಕೆ ಸಾಥ್ ನೀಡಿದರು. ಮೈಕೋದ ಎರಡೂ ಘಟಕಗಳು, ಎಲ್ ಅಂಡ್ ಟಿ, ಚೆನ್ನ ಮೆಟಲ್ಸ್, ಟೊಯೊಟಾ, ಐಟಿಸಿ, ವಿಕ್ರಾಂತ್ ಟಯರ್ಸ್ ಇತ್ಯಾದಿಗಳಲ್ಲಿ ಸಂಪೂರ್ಣ ಸಂಪು ನಡೆಯಿತು. ಬೆಂಗಳೂರಿನ ಬಿಇಎಲ್‌ನಲ್ಲಿ ಇಂಟಕ್ ನೇತೃತ್ವದ ಸಂಘ ಮುಷ್ಕರದಲ್ಲಿ ಭಾಗವಹಿಸಲಿಲ್ಲ; ಆದರೂ 1073 ಕಾರ್ಮಿಕರ ಪೈಕಿ 800 ಕಾರ್ಮಿಕರು, ಅಂ-ದರೆ ಶೇಕಡಾ 80ರಷ್ಟು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಹೀಗೆ ಮುಷ್ಕರದಲ್ಲಿ ಭಾಗವಹಿಸಿದ ಕಾರ್ಮಿಕರ ಸಂಖ್ಯೆ ಸಿಐಟಿಯು ಸಂಯೋಜಿತ ಸಂಘದ ಸದಸ್ಯರಿಗಿಂತ ಹೆಚ್ಚಾಗಿತ್ತು.

ಮಧ್ಯ ಪ್ರದೇಶದ ಅನೇಕ ನಗರಗಳು ಹಾಗೂ ಪಟ್ಟಣಗಳಲ್ಲಿ ಸಾರಿಗೆ ಮುಷ್ಕರ ಸಂಪೂರ್ಣವಾಗಿತ್ತು. ಕೃಷಿ ಮಂಡಿಗಳ ಹಮಾಲಿಗಳು ಮುಷ್ಕರದಲ್ಲಿ ಭಾಗವಹಿಸಿದ್ದರಿಂದ ವಾನಿಜ್ಯ ವ್ಯವಹಾರಗಳು ಸ್ಥಗಿತಗೊಂಡವು.

ಮಹಾರಾಷ್ಟ್ರದ ಪುಣೆ, ಔರಂಗಾಬಾದ್, ನಾಗ್ಪುರ, ನಾಸಿಕ್, ಮುಂಬಯಿ, ಸೋಲಾಪುರ ಮುಂತಾದೆಡೆ ಖಾಸಗಿ ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ಸಿಯಟ್, ಥೈಸನ್ ಕ್ರಪ್, ಸಾನ್ಸೊನೈಟ್ ಇಂಡಿಯಾ, ಕ್ರಾಂಪ್ಟನ್ ಗ್ರೀವ್ಸ್ ಮುಂತಾದ ಕೈಗಾರಿಕಾ ಘಟಕಗಳು, ಬಿಯರ್, ಮದ್ಯ ತಯಾರಿಕೆ ಘಟಕಗಳು, ಔಷಧಿ ತಯಾರಿ-ಕೆ ಘಟಕಗಳು, ಹಾಗೂ ಜವಳಿ ಕೈಗಾರಿಕೆಗಳಲ್ಲಿ ಮುಷ್ಕರ ಯಶಸ್ವಿಯಾಯಿತು. ಸೋಲಾಪುರದ ಬೀಡಿ ಮತ್ತು ವಿದ್ಯುತ್‌ಮಗ್ಗ ಕಾರ್ಮಿಕರ ನಡುವೆ ಮುಷ್ಕರ ಯಶಸ್ವಿಯಾಯಿತು.

ಓಡಿಶಾದಲ್ಲಿ ಮುಷ್ಕರವು ಬಂದ್‌ನಂಥ ವಾತಾವರಣವನ್ನು ಸೃಷ್ಟಿಸಿತು. ಕಬ್ಬಿಣ ಅದಿರು, ಮ್ಯಾಂಗನೀಸ್ ಮತ್ತು ಕಲ್ಲಿದ್ದಲು ಕಾರ್ಮಿಕರ ನಡುವೆ ಯಶಸ್ಸು ಕಂಡ ಸಂಪು ಗುತ್ತಿಗೆ ಕಾರ್ಮಿಕರ ಮಧ್ಯೆ ಹೆಚ್ಚು ಕಮ್ಮಿ ಯಶಸ್ಸು ಗಲಿಸಿತು.

ಪಂಜಾಬ್‌ನಲ್ಲಿ ಕಾರ್ಮಿಕರ ನಡುವೆ ಮುಷ್ಕರ ಉತ್ತಮ ಪ್ರತಿಕ್ರಿಯೆ ಗಳಿಸಿತು. ರಸ್ತೆ ಸಾರಿಗೆ ಸ್ತಬ್ಧಗೊಂಡಿತು. ಕೈಗಾರಿಕಾ ಸಮುಚ್ಚಯಗಳು ಮುಚ್ಚಿದ್ದವು. ಸಾವಿರಾರು ಅಸಂಘಟಿತ ಕಾರ್ಮಿಕರು ಮತಪ್ರದರ್ಶನಗಳಲ್ಲಿ ಭಾಗವಹಿಸಿದ್ದರು.

ತಮಿಳುನಾಡಿನ ತಿರುಪುರದಲ್ಲಿ ಗಾರ್ಮೆಂಟ್ ಕಾರ್ಮಿಕರ ನಡುವೆ ಮುಷ್ಕರ ಸಂಪೂರ್ಣ ಯಶಸ್ವಿಯಾಯಿತು. ಕೊಯಮತ್ತೂರು ಕೈಗಾರಿಕಾ ಪ್ರದೇಶದಲ್ಲೂ ಮುಷ್ಕರ ಯಶ ಕಂಡಿತು. ಅಶೋಕ್ ಲೈಲ್ಯಾಂಡ್, ಎನ್ನೋರ್ ಫೌಂಡರೀಸ್, ಸಂಪ್ಸನ್ ಗ್ರೂಪ್ ಮತ್ತು ಟಿಐ ಗುಂಪಿನ ಎಲ್ಲಾ ಮೂರು ಫ್ಯಾಕ್ಟರಿಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ತಿರುಚ್ಚಿ ಮತ್ತು ರಾಣಿಪೇಟ್‌ನ ಬಿಎಚ್‌ಇಎಲ್, ನೀಲಗಿರಿಸ್‌ನ ಶಸ್ತ್ರಾಗಾರ ಫ್ಯಾಕ್ಟರಿ, ಆವಡಿ ಮತ್ತು ಅರವಂಗಡುನಲ್ಲಿನ ರಕ್ಷಣಾ ಉತ್ಪಾದನಾ ಘಟಕಗಳಲ್ಲಿ ಸಂಪೂರ್ಣ ಮುಷ್ಕರ ನಡೆಯಿತು.

ತೆಲಂಗಾಣದಲ್ಲಿ ಬಂದ್ ರೀತಿಯ ವಾತಾವರಣ ಇತ್ತು. ಹೈದರಾಬಾದ್ ಸುತ್ತಮುತ್ತಲ ಕೈಗಾರಿಕಾ ಸಮುಚ್ಚಯಗಳಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ಒಟ್ಟಾರೆಯಾಗಿ ಮುಷ್ಕರ ಕಳೆದ ವರ್ಷದಕ್ಕಿಂತ ಂಹೆಚ್ಚು ಯಶಸ್ವಿಯಾಗಿತ್ತು.

ಮುಷ್ಕರ ಉತ್ತರಾಖಂಡದ ಉದಮ್‌ಪುರ ಕೈಗಾರಿಕಾ ಪ್ರದೇಶದಲಿ ಸಂಪೂರ್ಣವಾಗಿ ಹಾಗೂ ಹರಿದ್ವಾರದಲ್ಲಿ ಭಾಗಶಃ ನಡೆಯಿತು. ಸರಕಾರಿ ಸಾರಿಗೆ ಸಂಪೂರ್ಣ ಸ್ತಬ್ಧಗೊಂಡಿತು, ಖಾಸಗಿ ಸಾರಿಗೆ ಕ್ಷೇತ್ರದಲ್ಲಿ ಭಾಗಶಃ ಮುಷ್ಕರ ದಾಖಲಾಯಿತು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರಕಾರ ಮತ್ತು ಅದರ ಗೂಂಡಾಗಳ ಬೆದರಿಕೆಗಳು ಹಾಗೂ ದಬ್ಬಾಳಿಕೆಯ ಹೊರತಾಗಿಯೂ ಅನೇಕ ಜಿಲ್ಲೆಗಳಲ್ಲಿ ಬಂದ್‌ನಂಥ ಸನ್ನಿವೇಶ ಇತ್ತು. ಸರಕಾರವು ಪ್ರಯಾಣಿಕರಿಲ್ಲದೇ ಬಸ್‌ಗಳನ್ನು ಓಡಿಸಿದರೂ ಆನಂತರ ಅವುಗಳನ್ನು ವಾಪಸ್ ಪಡೆಯಿತು. ಸೆಣಬು ಮಿಲ್‌ಗಳು ಮುಚ್ಚಿದ್ದವು. ವಾಣಿಜ್ಯ ಚಟುವಟಿಕೆಗಳು ಅತ್ಯಂತ ಕನಿಷ್ಟವಾಗಿದ್ದವು. ಅನೇಕ ಜಿಲ್ಲೆಗಳಲ್ಲಿ ಶೈಕ್ಷಣಿಕ ಸಂಸ್ಥೆಗಳು ಮುಚ್ಚಿದ್ದವು. ಬಹುತೇಕ ಚಹಾ ತೋಟಗಳು ಮುಚ್ಚಿದ್ದವು.

ಭಾರತದಲ್ಲಿ ನವ-ಉದಾರವಾದಿ ನೀತಿಗಳು ದಾಂಗುಡಿ ಇಟ್ಟ ನಂತರ ನಡೆದ ಹದಿನೇಳನೇ ಜಂಟಿ ರಾಷ್ಟ್ರವ್ಯಾಪಿ ಮುಷ್ಕರ ಇದಾಗಿತ್ತು. ಸೆಪ್ಟೆಂಬರ್ 2ರ ಮುಷ್ಕರಕ್ಕೆ ಪೂರ್ವಭಾವಿಯಾಗಿ ಸಂಯುಕ್ತ ಪ್ರಚಾರಾಂದೋಲನಗಳನ್ನು ನಡೆಸಲಾಯಿತು. ಚಳವಳಿಯ ಉದ್ದೇಶ ಕಾರ್ಮಿಕರಿಗೆ ತಲುಪಬೇಕೆಂಬ ಗುರಿಯಿಂದ ಬ್ಲಾಕ್ ಮಟ್ಟದ ವರೆಗೆ, ಇನ್ನೂ ಕೆಲವೆಡೆ ಅದಕ್ಕಿಂತಲೂ ಕೆಳಹಂತದ ವರೆಗೆ ಪ್ರಚಾರಾಂದೋಲನ ನಡೆಸಲಾಯಿತು. ಮುಷ್ಕರದಲ್ಲಿ ಎತ್ತಲಾಗುವ ವಿಷಯಗಳ ಬಗ್ಗೆ ಹಾಗೂ ಅವುಗಳೊಂದಿಗೆ ಸರಕಾರದ ನೀತಿಗಳಿಗಿರುವ ಸಂಬಂಧದ ಬಗ್ಗೆ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಲು ಸಿಐಟಿಯು ಪ್ರಚಾರ ಸಾಮಗ್ರಿಯನ್ನು ಸಿದ್ಧಪಡಿಸಿತ್ತು. ಸರಕಾರದ ಸಾಧನೆಯ ಹೇಳಿಕೆಗಳು ಕೇವಲ ಬೊಗಳೆ ಎಂಬುದನ್ನು ಜನರ ನಡುವೆ ಬಿಚ್ಚಿಡಲು ಕಿರುಹೊತ್ತಿಗೆಗಳನ್ನು ಪ್ರಕಟಿಸಲಾಯಿತು, ಅವುಗಳನ್ನು ಸ್ಥಳೀಯ ಭಾಷೆಗಳಿಗೂ ಅನುವಾದಿಸಲಾಯಿತು. ಸರಕಾರ ಮತ್ತು ಬಿಎಂಎಸ್ ಸೃಷ್ಟಿಸಲು ಉದ್ದೇಶಿಸಿದ ಗೊಂದಲದಿಂದ ಕಾರ್ಮಿಕರನ್ನು ಪಾರು ಮಾಡಲು ಅವು ನೆರವಾದವು.

2016 ಸೆಪ್ಟೆಂಬರ್ ಎರಡರ ಸಾರ್ವತ್ರಿಕ ಮುಷ್ಕರ ನಿಸ್ಸಂಶಯವಾಗಿಯೂ ದೇಶದ ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಒಂದು ಮೈಲುಗಲ್ಲಾಗಿ ಉಳಿಯುತ್ತದೆ. ●





ಸೆ.2 ಮಹಾಮುಷ್ಕರ-ಟಿವಿ ಪತ್ರಿಕೆಗಳು ಕಂಡಂತೆ..... ಪುಟ 9 ರಿಂದ

ಅಥವಾ ಅದನ್ನು ಪ್ರಶ್ನಿಸಲೂ ಇಲ್ಲ. ಇದು ಯಾವ ರೀತಿಯ ವಸ್ತುನಿಷ್ಟ ಪತ್ರಕಾರಿತೆ?

ದೇಶಕ್ಕೆ ನಷ್ಟ :

ಹೆಚ್ಚಿನ ಮಾಧ್ಯಮಗಳು ಮುಷ್ಕರ (ಅಥವಾ ಬಂದ್) ನಿಂದಾಗಿ "ದೇಶಿ ಅರ್ಥ ವ್ಯವಸ್ಥೆಗೆ ಒಂದೇ ದಿನದಲ್ಲಿ ರೂ. 18 ಸಾವಿರ ಕೋಟಿಗಳಷ್ಟು ನಷ್ಟ ಉಂಟಾಗಿದೆ" (ಪ್ರ. ಸೆ. 5) ಎಂಬ ಅಸೋಚಾಂ ನ ನಷ್ಟದ ಅಂದಾಜಿನ ಗಿಳಿಪಾಠ ಒಪ್ಪಿಸಲು ಮರೆಯಲಿಲ್ಲ. ಉದ್ಯಮ-ವಾಣಿಜ್ಯ ಕಂಪನಿಗಳ ಒಡೆಯರ ಸಂಘಟನೆ ಅಸೋಚಾಂ ನ ಈ ಅಂ-ದಾಜು ಯಾವ ಆಧಾರದ ಮೇಲೆ ಮಾಡಲಾಗಿದೆ? ಮಾಧ್ಯಮಗಳ ಅಥವಾ ಪರಿಣತರ ಸ್ವತಂತ್ರ ಅಂ-ದಾಜು ಏನಾದರೂ ಇದೆಯೇ? ಈ ಸಂಖ್ಯೆಯ ಅರ್ಥವಾದರೂ ಏನು - ಇದು ಎಲ್ಲಾ ಉದ್ಯಮ-ವಾಣಿಜ್ಯ ಕಂಪನಿಗಳ ಒಂದು ದಿನದ ಆದಾಯವೇ ಅಥವಾ ಖಾಸಗಿ ಕಂಪನಿಗಳ ಆದಾಯವೇ, ಲಾಭಾಂಶವೇ? ಇದರಲ್ಲಿ ಕಾರ್ಮಿಕರ ದಿನದ ಆದಾಯವೂ ಸೇರಿದೆಯೇ? ಇದ್ದರೆ ಅವರ ಭಾಗ ಎಷ್ಟು, ಒಡೆಯರ ಪಾಲು ಎಷ್ಟು? - ಎಂಬಿತ್ಯಾದಿ ಪ್ರಶ್ನೆಗಳನ್ನು ಯಾವ ಮಾಧ್ಯಮಗಳೂ ಎತ್ತಲಿಲ್ಲ?

ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ವಿರೋಧ ಬೇಡ:

"ಉದ್ಯೋಗ ಅವಕಾಶ ಹೆಚ್ಚಿಸುವಂಥ ಸುಧಾರಣಾ ಕ್ರಮಗಳಿಂದ ಕಾರ್ಮಿಕರ ಹಿತಾಸಕ್ತಿಗೆ ಯಾವುದೇ ಬಾಧಕ ಇರಲಾರದು..... ವೇತನ ಹೆಚ್ಚಳ, ಸಾಮಾಜಿಕ ಭದ್ರತೆಗೆ ಒತ್ತಾಯಿಸುವುದರಲ್ಲಿ ತಪ್ಪಿಲ್ಲ. ಆದರೆ, ಖಾಸಗೀಕರಣ, ವಿದೇಶಿ ಬಂಡವಾಳ ಹೂಡಿಕೆಗೆ ವಿನಾಕಾರಣ ವಿರೋಧ ವ್ಯಕ್ತಪಡಿಸುವುದರಲ್ಲಿ ಅರ್ಥ ಇಲ್ಲ. ಈಗಿನ ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅದು ಉಚಿತವೆನಿಸಲಾರದು." (ಪ್ರ. ಸೆ. 5) ಇದು ಎಲ್ಲಾ ಸುದ್ದಿ ಮಾಧ್ಯಮಗಳ ಮುಖ್ಯ ಕಾಳಜಿಯಾಗಿತ್ತು. ಕಾರ್ಮಿಕರಿಗೆ ಮಾತ್ರವಲ್ಲ, ಜನತೆಯ ದೊಡ್ಡ ಜನವಿಭಾಗಗಳ ಹಿತಾಸಕ್ತಿಗಳಿಗೆ ಮಾರಕವಾಗಿರುವ 'ಈಗಿನ ಮುಕ್ತ ಮಾರುಕಟ್ಟೆ ವ್ಯವಸ್ಥೆ'ಯನ್ನು 18 ಕೋಟಿ ಕಾರ್ಮಿಕರು ಪ್ರಶ್ನಿಸುತ್ತಿದ್ದಾರೆ ಎಂಬುದೇ ಈ ಮಹಾಮುಷ್ಕರದ ಹಿಂದಿರುವ ದೊಡ್ಡ ಬೆಳವಣಿಗೆ. ಈ ವ್ಯವಸ್ಥೆಯಲ್ಲಿ ಏಕೆ ನಿರುದ್ಯೋಗ ಕಡಿಮೆಯಾಗುತ್ತಿಲ್ಲ? ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಏಕೆ ಸಿಗುತ್ತಿಲ್ಲ? ಇರುವ ಭದ್ರತೆಯನ್ನು ಪ್ರಸ್ತಾವಿತ ಕಾರ್ಮಿಕ ಕಾನೂನುಗಳು ಕಸಿಯುತ್ತಿಲ್ಲವೇ? - ಮುಂತಾದ ಕಾರ್ಮಿಕರ ಪ್ರಶ್ನೆಗಳ ಹಿಂದಿರುವ ಗ್ರಹಿಕೆ ತಪ್ಪಾದರೆ ಅವರಿಗೆ 'ಸರಿಯಾದ ಗ್ರಹಿಕೆ'ಯನ್ನು ಮಾಧ್ಯಮಗಳು ಏಕೆ ಕೊಡುತ್ತಿಲ್ಲ? ಬರಿಯ ಒಣ ಉಪದೇಶಗಳನ್ನು ಏಕೆ ಕೊಡುತ್ತಿದ್ದಾರೆ?

ಬಡವರ ವಿರುದ್ಧ:

"ಯಾರಿಗೆ ಒಳಿತನ್ನು ಮಾಡಬೇಕು ಎಂಬ ಉದ್ದೇಶ ಮತ್ತು ಕಾಳಜಿಯಿಂದ ಈ ಮುಷ್ಕರಗಳು ನಡೆಯುತ್ತವೆಯೋ ಬಂದ್‌ಗಳಿಂದ ಅವರ ಜೀವನ ಮತ್ತಷ್ಟು ಯಾತನಾದಾಯಕವಾಗುತ್ತದೆ. ಇದೊಂದು ದೊಡ್ಡ ವಿರೋಧಾಭಾಸ.", "ಒಂದು ದಿನ ಇಡೀ ದೇಶದ ಆರ್ಥಿಕತೆ ಸ್ತಬ್ಧಗೊಂಡರೆ ಅದರಿಂದ ಆಗುವ ಹಾನಿ ಅಪಾರ. ಇನ್ನು ದಿನಗೂಲಿಗಳು, ವ್ಯಾಪಾರಸ್ಥರು, ರೋಗಿಗಳ ಪರಿಸ್ಥಿತಿ ಘನಘೋರ." (ವಿ.ಕ. ಸೆ. 3) ಮತ್ತು 'ದೇಶದ ಆರ್ಥಿಕತೆಯನ್ನು ಸ್ಥಬ್ಧಗೊಳಿಸುವ ಇಂತಹ ಮುಷ್ಕರಗಳಿಂದ ಯಾವ ಪುರುಷಾರ್ಥ ಸಾಧಿಸಿದಂತಾಯಿತು?' - ಇದು ಮಾಧ್ಯಮಗಳ ಇನ್ನೊಂದು ಗಿಳಿಪಾಠ. ಇದು ಹೇಗೆ ಎಂದು ಅವರು ವಿವರಿಸುವುದಿಲ್ಲ. ಯಾವುದೇ ಭದ್ರತೆ ಇಲ್ಲದ ದಿನಗೂಲಿಗಳ, ಕಾಂಟ್ರಾಕ್ಟ್ ಹಂಗಾಮಿ ಕಾರ್ಮಿಕರರ, ಸಂಘಟಿತ ವಲಯದ ಪರ್ಮನೆಂಟ್ ಕಾರ್ಮಿಕರ ಬೇರೆ ಬೇರೆ ಹಕ್ಕೊತ್ತಾಯಗಳಲ್ಲದೆ ಎಲ್ಲಾ ಕಾರ್ಮಿಕರ ಹಕ್ಕೊತ್ತಾಯಗಳಿಗೆ ನಡೆದ ಮುಷ್ಕರ ಇದು. ಮುಷ್ಕರದ ಹಕ್ಕೊತ್ತಾಯಗಳಲ್ಲಿ ಅಸಂಘಟಿತ ವಲಯದ ಹಾಗೂ ಅಸಂಘಟಿತ ಕಾರ್ಮಿಕರನ್ನು ತಟ್ಟುವ ಕನಿಷ್ಟ ಕೂಲಿಯ ಪ್ರಶ್ನೆಯೇ ಪ್ರಧಾನವಾದದು. ಅವರು ತಮ್ಮ ಹಕ್ಕು ಸಾಧಿಸಲು ಬದುಕು ಉತ್ತಮಗೊಳಿಸಲು ಒಂದು ದಿನದ ಕೂಲಿ ಕಳೆದುಕೊಳ್ಳುತ್ತಿದ್ದಾರೆ, ನಿಜ. ಆದರೆ ಹೆಚ್ಚಿನ ಹಂಗಾಮಿ, ಕಾಂಟ್ರಾಕ್ಟ್ ಕಾರ್ಮಿಕರಿಗೆ ವರ್ಷದ ಹಲವು ದಿನಗಳಲ್ಲಿ ಕೆಲಸ ಇರುವದಿಲ್ಲ ಎಂಬ ಸತ್ಯದ ಜತೆ ನೋಡಿದ-ರೆ 'ವಿರೋಧಾಭಾಸ' ಇವರ ವಾದದಲ್ಲಿದೆ ಎಂದು ತಿಳಿಯಯುತ್ತದೆ. ಈ ಮುಷ್ಕರಗಳ ಒತ್ತಡದಿಂದ ಕನಿಷ್ಟ ಕೂಲಿ ಹೆಚ್ಚಳದತ್ತ ಮುನ್ನಡೆಯಾಗಿದೆ. ಮುಷ್ಕರ ನಿರತ ಕಾರ್ಮಿಕರ ಮುಷ್ಕರ ಬಡವರಿಗೆ ಅತಿ ಹೆಚ್ಚಿನ ಕಷ್ಟ ಕೊಡುತ್ತದೆ ಎಂಬ ಇವರ ವಾದ ಸಹ ಅವರ ಬಗ್ಗೆ ಇವರು ಸುರಿಸುವ ಮೊಸಳೆ ಕಣ್ಣೀರು ಅಷ್ಟೇ. ಈ ವಾದದ ಹಿಂದೆ ಮುಷ್ಕರ ನಿರತ ಕಾರ್ಮಿಕರು ಸಮಾಜದ ಒಂದು ಸಣ್ಣ ವಿಭಾಗ (ಅದಕ್ಕಾಗಿಯೇ 18 ಕೋಟಿ ಮುಷ್ಕರದಲ್ಲಿ ಭಾಗವಹಿಸಿದರು ಎಂಬುದನ್ನು ಮರೆಮಾಚಲಾಗುತ್ತದೆ) ಎಂಬ ಮಹಾಸುಳ್ಳು ಸಹ ಇದೆ. ಮಹಾ ಮುಷ್ಕರಗಳು ಏನೂ ಸಾಧಿಸಿಲ್ಲ ಎನ್ನುವುದು ಸಹ ಸತ್ಯವಲ್ಲ. ಕಳೆದ ಮತ್ತು ಈ ವರ್ಷದ ಸೆ. 2 ಮುಷ್ಕರದಿಂದಾಗಿಯೇ ಮೋದಿ ಸರಕಾರ ಕಾರ್ಮಿಕ-ವಿರೋಧಿ ಕಾನೂನು ತಿದ್ದುಪಡಿಗಳನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುವ ಧೈರ್ಯ ತೋರಿಲ್ಲ. ಇದು ಬಂಡವಾಳ ಮತ್ತು ಶ್ರಮದ ನಡುವೆ ನಡೆಯುತ್ತಿರುವ ಮಹಾ ಸಂಘರ್ಷ ಎಂದು 'ಈಗಿನ ಮಾರುಕಟ್ಟೆ ವ್ಯವಸ್ಥೆ'ಯ ಬೋಪರಾಕುಗಳು ಹೇಗೆ ಹೇಳಿಯಾರು?

ಈ ಬಾರಿ ಇಂಗ್ಲಿಷ್ ಟಿವಿ ಮತ್ತು ಪತ್ರಿಕೆಗಳು, ಕನ್ನಡ ಟಿವಿ ಮತ್ತು ಪತ್ರಿಕೆಗಳಿಗಿಂತಲೂ ಹೆಚ್ಚು ಕಾರ್ಮಿಕ ವಿರೋಧಿ ಪಕ್ಷಪಾತ ನಿಲುವು ಪ್ರದರ್ಶಿಸಿದವು. ಪ್ರಜಾವಾಣಿಯ ಸಂಪಾದಕೀಯ ಬಲಪಂಥೀಯ ಟೈಮ್ಸ್ ಗುಂಪಿನ ವಿಜಯ ಕರ್ನಾಟಕಕ್ಕಿಂತಲೂ ಹೆಚ್ಚು ಬಲಪಂಥೀಯವಾಗಿತ್ತು ಎಂಬುದು ಗಮನ ಸೆಳೆಯುವಂತಹ ಆತಂಕಕಾರಿ ಬೆಳವಣಿಗೆ. ಇನ್ನು ಹಲವು ಮಾಧ್ಯಮಗಳಿಗೆ ಸೆ. 2 ಮಹಾಮುಷ್ಕರ ಬರೆಯಬೇಕಾದ ಅಥವಾ ಯಾವುದೇ ರೀತಿಯಲ್ಲಿ ಕವರ್ ಮಾಡಬೇಕಾದ ವಿಷಯವೇ ಆಗಿರಲಿಲ್ಲ. ಇವುಗಳಲ್ಲಿ ಇಂಗ್ಲಿಷ್ ಟಿವಿ ಮತ್ತು ಪತ್ರಿಕೆಗಳು ಹೆಚ್ಚಾಗಿದ್ದವು. ಮಹಾಮುಷ್ಕರದ ಬಗ್ಗೆ ಮೌನವ್ರತ ವಹಿಸಿದ ಇಂತಹ ಮಾಧ್ಯಮಗಳಲ್ಲಿ ಸಾಮಾನ್ಯವಾಗಿ ಪ್ರಜಾಸತ್ತಾತ್ಮಕ ಪ್ರಗತಿಪರ ಎಂದು ಪರಿಗಣಿಸಲಾಗುವ 'ಲಂಕೇಶ್ ಪತ್ರಿಕೆ' ಮುಂತಾದ ವಾರಪತ್ರಿಕೆಗಳೂ ಇದ್ದವು ಎಂಬುದನ್ನು ಗಮನಿಸಬೇಕು. ●

ಈ ವಾರ ಚರಿತ್ರೆಯಲ್ಲಿ

8 ಸೆಪ್ಟೆಂಬರ್ 1938

ಪೂರ್ಣಚಂದ್ರ ತೇಜಸ್ವಿ

ನವ್ಯ ಸಾಹಿತ್ಯ ಜನ ಸಮುದಾಯದ ವಿರುದ್ಧವಾಗಿ, ಕೆಲವೇ ಜನರ ವೈಯಕ್ತಿಕ ಅನುಭವಗಳ, ಸ್ವಂತಿಕೆಯ ಅಭಿವ್ಯಕ್ತಿಯಾಗಿ ಪರಿಣಮಿಸಿತ್ತು. ಅದರ ವಿರುದ್ಧ ಎದ್ದು ನಿಂತು ಧೈರ್ಯವಾಗಿ ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದ, ನಂತರ ಗುಡುಗಿನಂತೆ ಮೊಳಗಿಸಿದ ಮೊದಲ ಬಂಡಾಯಗಾರ ಪೂರ್ಣಚಂದ್ರ ತೇಜಸ್ವಿ. ನವ್ಯ ಸಾಹಿತ್ಯದ ವಿರುದ್ಧ ಅಂದಿನಿಂದ ಆರಂಭವಾದ ತೇಜಸ್ವಿಯವರ ಬಂಡಾಯ ಮುಂದಿನ ವರ್ಷಗಳಲ್ಲಿ, ಅವರ ಸಾಹಿತ್ಯ ಕೃತಿಗಳ ಮೂಲಕವೇ ಬೆಳೆಯುತ್ತದೆ. ಕೇವಲ ಘೋಷಣೆಯಾಗದೆ ಬದುಕಿನ ಸ್ವರೂಪ ಮತ್ತು ಸಾಹಿತ್ಯ ಮತ್ತು ಚಳುವಳಿಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತುತ್ತಾರೆ. ತೇಜಸ್ವಿಯವರು ತಮ್ಮ ಬರಹಗಳ ಮೂಲಕ ಮುಂದಿನ ಸಾಹಿತಿಗಳಿಗೆ ಮಾದರಿಯಾದದ್ದಲ್ಲದೆ ಅಂದಿನ ಕರ್ನಾಟಕದ ತಮ್ಮ ಜೊತೆಗಾರರೊಡನೆ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮೂಲಕವೂ ಬದುಕು - ಚಳುವಳಿ - ಬರಹಗಳ ನಡುವಣ ಸಂಬಂಧಕ್ಕೆ ಮಾದರಿ ಯಾದರು. ವಿಜ್ಞಾನವನ್ನು ಸಾಹಿತ್ಯದ ವಸ್ತುವಾಗಿ ಪರಿಣಾಮಕಾರಿಯಾಗಿ, ಆಕರ್ಷಕವಾಗಿ ಬಳಸಿಕೊಳ್ಳುವ ಮೂಲಕ ತೇಜಸ್ವಿಯವರು ಕನ್ನಡ ಸಾಹಿತ್ಯದ ಗಡಿಗೆರೆಗಳನ್ನು ವಿಸ್ತರಿಸಿದರು. ಸಾಹಿತ್ಯಕ್ಕೊಂದು ಹೊಸ ವಸ್ತುವನ್ನು ದೊರಕಿಸಿಕೊಟ್ಟುದಲ್ಲದೆ ಕನ್ನಡದ ಓದುಗರ ಸಮೂಹವನ್ನು ತಮ್ಮೊಡನೆ ವಿಜ್ಞಾನದ ಅನ್ವೇಷಣೆಯ ಹಾದಿಯಲ್ಲಿ ಕೊಂಡೊಯ್ದು ವೈಜ್ಞಾನಿಕ ಮನೋಭಾವದ ಬೆಳವಣಿಗೆಗೆ, ವಿಜ್ಞಾನದ ಜನಪ್ರಿಯತೆಗೆ ಕಾರಣರಾಗಿದ್ದಾರೆ. ಹತ್ತಾರುಸಾವಿರ ವಿಜ್ಞಾನ ಬೋಧಕ, ಪ್ರಾಧ್ಯಾಪಕರುಗಳಿಂದ ಸಾಧ್ಯವಾಗದ ಕೆಲಸವನ್ನು ಇವರು ತಮ್ಮ ಕರ್ವಾಲೊ, ಚಿದಂಬರ ರಹಸ್ಯ, ಅಲೆಮಾರಿಯ ಅಂಡಮಾನ್, ಮಿಸ್ಸಿಂಗ್ ಲಿಂಕ್ ಮೊದಲಾದ ಕೃತಿಗಳಿಂದ ಸಾಧಿಸಿದ್ದಾರೆ. 'ಕರ್ವಾಲೋ'ನಂತಹ ಕಾದಂಬರಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಒಂದು ಹೊಸ ಅಲೆಯನ್ನೇ ಮೂಡಿಸಬಹುದಾದ ಸಾಧ್ಯತೆಯುಳ್ಳ ಬರವಣಿಗೆಗಳು.



ಯುವತಿಯ ಮೇಲೆ ಅತ್ಯಾಚಾರ: ಲಂಗು-ಲಗಾಮಿಲ್ಲದ ಪಿಜಿಗಳು

ಬೆಂಗಳೂರಿನಲ್ಲಿ ಇತ್ತೀಚೆಗೆ ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುವ ಯುವತಿಯ ಮೇಲೆ ಅತ್ಯಾಚಾರ ನಡೆದಿದೆ. ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ವ್ಯಾಪ್ತಿಯ ಕೋನಪ್ಪನ ಅಗ್ರಹಾರದಲ್ಲಿ ಪಿಜಿ ಒಂದರಲ್ಲಿ ರಾತ್ರಿ ಸುಮಾರು 2.00 ಗಂಟೆ ವೇಳೆಯಲ್ಲಿ ಪಿಜಿಯ 4ನೇ ಮಹಡಿಗೆ ಏರಿಬಂದ ವ್ಯಕ್ತಿಯೊರ್ವ ಯುವತಿಯ ಕೊಠಡಿಯೊಳಗೆ ನುಗ್ಗಿ ಕುತ್ತಿಗೆ ಬಳಿ ಚಾಕುವನ್ನಿಟ್ಟು ಹಣ ಮತ್ತು ಬೆಲೆಬಾಳುವ ವಸ್ತುಗಳ ಬೇಡಿಕೆಯಿಟ್ಟಿದ್ದಾನೆ. ಆಕೆ-ಯ ಬಳಿ ಬೆಲೆಬಾಳುವ ವಸ್ತುವಾಗಲಿ, ಹಣವಾಗಲಿ ಇಲ್ಲದ್ದರಿಂದ 100 ರೂ. ಕೊಟ್ಟು ನನ್ನ ಬಳಿ ಇರುವ ಹಣ ಇಷ್ಟೆ ಎಂದು ಎಟಿಎಂ ಕಾರ್ಡ್ ಮತ್ತು ಪಾಸ್‌ವರ್ಡ್‌ನ್ನು ಕೊಟ್ಟು ಅದರಲ್ಲಿರುವ ಪೂರ್ತಿ ಹಣವನ್ನು ತೆಗೆದುಕೊ ನನ್ನನ್ನು ಏನೂ ಮಾಡಬೇಡ ಅಂಗಲಾಚಿ ಬೇಡಿದ್ದಾಳೆ. ಆದರೂ ಆತ ಆಕೆಯ ಮೇಲೆ ಅತ್ಯಾಚಾರ ನಡೆಸಿ ಪರಾರಿಯಾಗಿದ್ದಾನೆ. ಭಯಭೀತಗೊಂಡ ಯುವತಿ ರಾತ್ರಿಪಾಳಿ ಮುಗಿಸಿ ಬಂದ ತನ್ನ ಗೆಳತಿಗೆ ನಡೆದ ಘಟನೆಯನ್ನು ಹೇಳಿಕೊಂಡಿದ್ದಾಳೆ. ಆದರೆ ದೂರು ನೀಡಲು ಮುಂದಾಗಲಿಲ್ಲ. ಇದಾದ ಎರಡು ದಿನಗಳ ನಂತರ ಐಟಿಇಸಿ ಸಂಘಟನೆಯವರಿಗೆ ವಿಷಯ ತಿಳಿದು ಸಂತ್ರಸ್ಥೆಯ ಮನವೊಲಿಸಿ, ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇದರ ಜೊತೆಯಲ್ಲೇ ವಿ.ಎಸ್.ಉಗ್ರಪ್ಪ ಅಧ್ಯಕ್ಷತೆಯ 'ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಸಮಿತಿ'ಗೂ ದೂರು ನೀಡಲಾಗಿ, ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಮಿತಿ ಸದಸ್ಯರು ಪೊಲೀಸರ ಮೇಲೆ ಒತ್ತಡ ತಂದಿದ್ದರಿಂದಾಗಿ ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು ಅತ್ಯಾಚಾರಿಯನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಪೊಲೀಸ್ ಇಲಾಖೆಯ ಈ ಕಾರ್ಯ ನಿಜಕ್ಕೂ ಶ್ಲಾಘನೀಯ.

ಆದರೆ ಬೆಂಗಳೂರು ನಗರದಲ್ಲಿ ನಾಯಿಕೊಡೆಗಳಂತೆ ಎದ್ದಿರುವ ಪಿಜಿಗಳಿಗೆ ಯಾವುದೇ ಲಂಗು-ಲಗಾಮಿಲ್ಲದಂತಾಗಿದೆ. ಬಹುತೇಕ ಪಿಜಿಗಳು ಬಿಬಿಎಂಪಿಯಿಂದ ಯಾವುದೇ ಲೈಸನ್ಸ್ ಪಡೆದಿಲ್ಲ. ಲೈಸನ್ಸ್ ಪಡೆದ ಪಿಜಿಗಳು ನಿಯಮಾನುಸಾರ ನಡೆದುಕೊಳ್ಳುತ್ತಿಲ್ಲ. ಉದಾಹರಣೆಗೆ ಅತ್ಯಾಚಾರ ನಡೆದ ಮಹಿಳಾ ಪಿಜಿ ಐದು ಮಹಡಿಯ ಕಟ್ಟಡ, ಆದರೂ ಇಲ್ಲಿ ಲಿಫ್ಟ್ ಸೌಲಭ್ಯವಿಲ್ಲ. 30*60 ವಿಸ್ತೀರ್ಣದ ಕಟ್ಟಡದಲ್ಲಿ ಒಟ್ಟು 50 ಕೊಠಡಿಗಳಿವೆ. ಬೆಂಕಿ ಅವಘಡ ತಡೆಯುವ ವ್ಯವಸ್ಥೆಯೂ ಇಲ್ಲ. ಸೆಕ್ಯುರಿಟಿಯನ್ನು ನೇಮಕ ಮಾಡಿಲ್ಲ. ಆದರೂ ಪಿಜಿಯ ಮೈನ್ ಗೇಟ್ ರಾತ್ರಿ ವೇಳೆ ತೆರೆದೇ ಇರುತ್ತದೆ. ವಿಶೇಷವೆಂದರೆ ಈ ಪಿಜಿಯಲ್ಲಿ ರಾತ್ರಿ 11 ಗಂಟೆಯ ನಂತರ ಇಡೀ ಕಟ್ಟಡದ ಲೈಟ್ ಆಫ್ ಮಾಡಲಾಗುತ್ತದೆ! ಪಕ್ಕದಲ್ಲೇ ಪುರುಷರ ಪಿಜಿ ಇದ್ದರೂ ಎರಡೂ ಕಟ್ಟಡಗಳ ನಡುವೆ ಸೆಟ್‌ಬ್ಯಾಕ್ ಏರಿಯಾ ಕೂಡ ಬಿಟ್ಟಿಲ್ಲ. ಒಬ್ಬರಿಗೆ 5000 ರೂಪಾಯಿನಿಂದ 10000 ರೂಪಾಯಿವರೆಗೆ ಬಾಡಿಗೆ ಇದೆ.

ಪಿಜಿಯಲ್ಲಿ ವಾಸಿಸುವವರು ಬಹುತೇಕ ಹೊರ ರಾಜ್ಯದ ಯುವಕ-ಯುವತಿಯರು. ದೊಡ್ಡ ಸಂಖ್ಯೆಯಲ್ಲಿ ಉತ್ತರಭಾರತದಿಂದ ಬಂದವರಾಗಿದ್ದಾರೆ. ಹೀಗಾಗಿ ಏನೇ ಕೊರತೆಗಳಿದ್ದಾಗ್ಯೂ ಎಲ್ಲವನ್ನೂ ಅಡ್ಜೆಸ್ಟ್ ಮಾಡಿಕೊಂಡು ಹೋಗಬೇಕಾದ ಅಲಿಖಿತ ನಿಯಮ ಪಿಜಿಗಳಲ್ಲಿದೆ. ಪಿಜಿಗಳ ವ್ಯವಸ್ಥೆ ನಿಯಮಾನುಸಾರ ಇರುವ ಬಗ್ಗೆ ಯಾವುದೇ ತಪಾಸಣೆಯಾಗಲಿ, ಪರಿಶೀಲನೆಯಾಗಲಿ ಮಾಡುತ್ತಿಲ್ಲ. ಬಿಬಿಎಂಪಿ ಹೊರತುಪಡಿಸಿ ಬೇರಾವುದೇ ಸಂಸ್ಥೆಯ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಪಿಜಿಗಳು ಯಾವುದೇ ನಿಯಂತ್ರಣವಿಲ್ಲದೆ ಮನಬಂದಂತೆ ನಡೆಯುತ್ತಿವೆ. ಹೀಗಾಗಿ ಬಹುತೇಕ ಪಿಜಿಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳು, ಭದ್ರತೆ ಇಲ್ಲದಿರುವುದು ಸಾಮಾನ್ಯವಾಗಿದೆ. ಪೊಲೀಸ್ ವರದಿಯ ಪ್ರಕಾರ ಪಿಜಿಗಳಲ್ಲಿ ನಡೆಯುವ ಕ್ರೈಂಗಳಲ್ಲಿ ಬಹುತೇಕ ಲ್ಯಾಪ್‌ಟಾಪ್, ಮೊಬೈಲ್ ಮತ್ತು ಷೂಗಳ ಕಳ್ಳತನ ಮಾಮೂಲಿಯಾಗಿದೆ. ಹಾಗೆಯೇ ಮಹಿಳಾ ಪಿಜಿಗಳಲ್ಲಿ ಲೈಂಗಿಕ ದೌರ್ಜನ್ಯ ಅತ್ಯಾಚಾರದಂತಹ ಪ್ರಕರಣಗಳು ನಡೆದರೂ ಸಹ ಬಹುತೇಕ ಪ್ರಕರಣಗಳು ಮುಚ್ಚಿಹೋಗಿರುವುದೇ ಇದೆ. ಕಾರಣ ಪಿಜಿಗಳಲ್ಲಿ ವಾಸಿಸುವ ಹೆಣ್ಣುಮಕ್ಕಳು ಬಹುತೇಕರು ಹೊರ ರಾಜ್ಯದವರಾದ್ದರಿಂದ ಭಯ ಮತ್ತು ಮರ್ಯಾದೆಗೆ ಅಂಜಿ ದೂರು ನೀಡದೇ ಬೇರೆಡೆ ಸ್ಥಳಾಂತರ ಆಗುವುದು ಆಗಾಗ ಕಂಡುಬರುವ ವಿಚಾರ. ಹೀಗಾಗಿ ಪಿಜಿಗಳ ಮೇಲುಸ್ತುವಾರಿಗೆ ಸಂಬಂಧಿಸಿದಂತೆ ಯಾವುದೇ ಶಾಸನಾತ್ಮಕವಾದ ನಿಯಮಾವಳಿಗಳು ಇಲ್ಲದಿರುವುದೂ ಕೂಡ ಇಂತಹ ಎಲ್ಲ ಪ್ರಕರಣಗಳಿಗೆ ದಾರಿ ಮಾಡಿಕೊಡುತ್ತದೆ. ಆದ್ದರಿಂದಾಗಿ ಪಿಜಿಗಳ ನಿರ್ವಹಣೆಯಲ್ಲಿದ ನಿಯಮಾವಳಿಗಳು ಅದಕ್ಕಿರುವ ಮೇಲುಸ್ತುವಾರಿ, ನಿಯಂತ್ರಣ ಈ ಎಲ್ಲಾ ಅಂಶಗಳ ಕುರಿತಾಗಿ ಶಾಸನವೊಂದು ಆಗುವ ಅವಶ್ಯಕತೆ ಜರೂರಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ತುರ್ತು ಗಮನಹರಿಸಬೇಕಿದೆ.

ಮೊಬೈಲ್ ಶಿಕ್ಷಕರಂತೆ? ಸಂಭಾವನೆ ಇಲ್ಲವಂತೆ!

ರಾಜ್ಯ ಸರ್ಕಾರ ದೇಶದಲ್ಲೇ ಹೊಸದೊಂದು ಯೋಜನೆಗೆ ಮುಂದಾಗಿದೆ. ಅದರಂತೆ ತಾಲ್ಲೂಕಿಗೆ ಇಬ್ಬರಂತೆ ಮೊಬೈಲ್ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆಯಂತೆ! ಈ ಮೊಬೈಲ್ ಶಿಕ್ಷಕರು ಯಾವ ಶಾಲೆಗಳಲ್ಲಿ ಶಿಕ್ಷಕರಿಲ್ಲವೋ ಅಂತಹ ಶಾಲೆಗಳಿಗೆ ತೆರಳಿ ಪಾಠ ಮಾಡಬೇಕಂತೆ. ಆದರೆ ಇವರಿಗೆ ಯಾವುದೇ ಸಂಭಾವನೆ, ಭತ್ಯೆ ಇಲ್ಲವಂತೆ! ಶಿಕ್ಷಕರ ಕೊರತೆ ಸರಿದೂಗಿಸಿಕೊಳ್ಳಲು ಶಿಕ್ಷಣ ಇಲಾಖೆಯು ಇಂಥದೊಂದು 'ವಿನೂತನ' ಪ್ರಯೋಗವನ್ನು ಕೈಗೆತ್ತಿಕೊಂಡಿದೆ. ಏಕೋಪಾಧ್ಯಾಯ ಶಾಲೆಗಳಲ್ಲಿ ಶಿಕ್ಷಕ ರಜೆ ಮೇಲೆ ತೆರಳಿದ ಸಂದರ್ಭದಲ್ಲಿ ಈ ಮೊಬೈಲ್ ಶಿಕ್ಷಕರನ್ನು ಬಳಸಿಕೊಳ್ಳಲು ಅದು ಯೋಜಿಸಿದೆ. ಸಮಸ್ಯೆಯೆಂದರೆ ಒಂದು ತಾಲ್ಲೂಕಿಗೆ ಕೇವಲ ಇಬ್ಬರು ಮಾತ್ರವೇ ಮೊಬೈಲ್ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ಯಾವ ರೀತಿಯಲ್ಲಿ ಸಾಧುವಾಗಲಿದೆ ಎಂಬ ಬಗ್ಗೆ ಇಲಾಖೆಯೇ ಉತ್ತರಿಸಬೇಕಿದೆ. ರಾಜ್ಯದ ಬಹುತೇಕ ಕಡೆ ಗ್ರಾಮಕ್ಕೊಂದರಂತೆ ಶಾಲೆಗಳಿವೆ. ಹಾಗೆ ಏಕೋಪಾಧ್ಯಾಯ ಶಾಲೆಗಳೂ ಕೂಡ ಅಧಿಕ ಸಂಖ್ಯೆಯಲ್ಲಿವೆ. ಹೀಗಾಗಿ ಕೇವಲ ಇಬ್ಬರನ್ನು ಮಾತ್ರವೇ ನೇಮಕ ಮಾಡಿಕೊಂಡು ಹೇಗೆ ತಾನೆ ಶಿಕ್ಷಕರ ಕೊರತೆಯನ್ನು ಸರಿದೂಗಿಸಲು ಸಾಧ್ಯ? ಎರಡನೆಯದಾಗಿ ಇಂಥ ಶಿಕ್ಷಕರಿಗೆ ಯಾವುದೇ ಗೌರವಧನ ನೀಡುವುದಿಲ್ಲವಂತೆ! ಅವರು ತಮ್ಮ ಸ್ವಂತ ಹಣದಲ್ಲೇ ಹೋಗಿ ಪಾಠ ಮಾಡಿ ಬರಬೇಕೆಂದು ಶಿಕ್ಷಣ ಇಲಾಖೆ ಹೇಳಿದೆ. ಸಂಬಳ ಪಡೆದೇ ಕರ್ತವ್ಯವನ್ನು ನಿರ್ವಹಿಸದಿರುವ ಎಷ್ಟೋ ಪ್ರಕರಣಗಳು ನಮ್ಮ ಮಧ್ಯೆ ಇರುವಾಗ ಯಾವುದೇ ಸಂಭಾವನೆಯನ್ನು, ಗೌರವಧನವೂ ಇಲ್ಲದೆ ಯಾರು ತಾನೆ ತಮ್ಮ ಹಣವನ್ನು ಖರ್ಚು ಮಾಡಿಕೊಂಡು ಶಾಲೆಗೆ ತೆರಳಿ ಪಾಠ ಮಾಡುತ್ತಾರೆ? ಇದೊಂದು ಬೇಜವಾಬ್ದಾರಿತನದ ಯೋಜನೆ. ಇಂಥ ತಲೆಕೆಟ್ಟ ಯೋಜನೆಗಳಿಂದ ಏನನ್ನು ಸರಿಪಡಿಸಲಾಗದು.

ಅಲ್ಪಸಂಖ್ಯಾತರಿಗೆ ಭೂಮಿ: ಹಣವಿದೆ, ಖರ್ಚು ಮಾಡಲು ಕಷ್ಟ!

ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮಕ್ಕೆ ಅಲ್ಪಸಂಖ್ಯಾತರ ಸಾಮಾಜಿಕ ಹಾಗು ಆರ್ಥಿಕ ಪ್ರಗತಿಗಾಗಿ ಪ್ರತಿವರ್ಷವೂ ರಾಜ್ಯ ಬಜೆಟ್‌ನಲ್ಲಿ ನಿಗಮ ಯೋಜನೆಗಳಿಗೆ ನೂರಾರು ಕೋಟಿಗಳನ್ನು ನೀಡುತ್ತದೆ. ಅದರಲ್ಲಿ ತುಂಬ ಪ್ರಮುಖವಾದ ಯೋಜನೆ ಎಂದರೆ ಅಲ್ಪಸಂಖ್ಯಾತರಿಗೆ ಭೂಮಿ ನೀಡುವುದು. ಮಾಹಿತಿ ಹಕ್ಕು ವರದಿಯಂತೆ ದಾವಣಗೆರೆ ಜಿಲ್ಲೆಯಲ್ಲಿ 2015 – 16 ನೇ ಸಾಲಿನಲ್ಲಿ ಯಾರಿಗೂ ಭೂಮಿ ನೀಡಿಲ್ಲವಂತೆ! ಇದಕ್ಕಾಗಿ ಹಣ ಮೀಸಲಿಟ್ಟಿಲ್ಲವೇ? ಎಂದರೆ, ಹಣ ಇದೆ ಆದರೆ ಖರ್ಚು ಮಾಡಿಲ್ಲವಂತೆ. ಸರ್ಕಾರದ ಪ್ರಮುಖವಾದ ಒಂದು ಯೋಜನೆ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಹಳ್ಳ ಹಿಡಿದಿದೆ. ಈ ಯೋಜನೆ ಹೇಳುವುದೇನೆಂದರೆ ಜಿಲ್ಲೆಯಲ್ಲಿ ಆಸಕ್ತ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಬೇಕು, ಬಂದಂತಹ ಅರ್ಜಿಗಳನ್ನು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಪರಿಶೀಲಿಸಿ ಫಲಾನುಭವಿಯನ್ನು ಆಯ್ಕೆ ಮಾಡಬೇಕು. ಖುಷ್ಕಿ ಜಮೀನಾಗಿದ್ದಲ್ಲಿ 2 ಎಕರೆ ಅಥವಾ ತರಿ ಜಮೀನಾಗಿದ್ದಲ್ಲಿ 1 ಎಕರೆ ಜಮೀನು ನೀಡಬೇಕು. ಆದರೆ ನೀಡಲಾಗಿಲ್ಲ. ಆಶ್ಚರ್ಯವೆಂದರೆ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಆಗಾಗ ಪ್ರಗತಿ ಪರಿಶೀಲನಾ ಸಭೆ ನಡೆಯುತ್ತದೆ. ಇಲ್ಲಿಯೂ ಇದು ಚರ್ಚೆಗೆ ಬಾರದಿರುವುದು ವ್ಯವಸ್ಥೆಗೆ ಹಿಡಿದ ಕನ್ನಡಿ. ಅಸಲಿಗೆ ಈ ರೀತಿ ಒಂದು ಯೋಜನೆ ಇದೆ ಎಂಬುದೇ ಬಹುತೇಕರಿಗೆ ತಿಳಿದಿಲ್ಲ. ತಿಳಿಯಪಡಿಸುವ ಗೋ-ಜಿಗೂ ಹೋಗುವುದಿಲ್ಲ. ರಾಜಕೀಯ ಪುಢಾರಿಗಳು ಮತ್ತು ಅಧಿಕಾರಿಗಳ ನಡುವಿನ ಗುಪ್ತ ಒಪ್ಪಂದ ಎಂಥದ್ದೇ ಮಹತ್ವಾಕಾಂಕ್ಷಿ ಯೋಜನೆಯಾದರೂ ಹೊರಬರಲಾರದಂತೆ ಮಾಡುತ್ತದೆ.

ಬರಪರಿಹಾರ: ಕೇಂದ್ರದ ತಾರತಮ್ಯ

ಕೇಂದ್ರ ಸರ್ಕಾರ ನೀಡುವ ಬರ ಪರಿಹಾರದಲ್ಲಿ ರಾಜ್ಯಕ್ಕೆ ಅನ್ಯಾಯ ಆಗಿರುವುದು ಕಂಡು ಬಂದಿದೆ. ಕರ್ನಾಟಕವು ಪದೇ ಪದೇ ಬರಕ್ಕೆ ತುತ್ತಾಗುತ್ತಿರುವ ರಾಜ್ಯವಾಗಿದ್ದರೂ ಮಹಾರಾಷ್ಟ್ರಕ್ಕೆ ಹೋಲಿಸಿದರೆ ರಾಜ್ಯವು ಕೇಂದ್ರದಿಂದ ಪಡೆದ ಪರಿಹಾರ ನಿಧಿ ತೀರ ಕಡಿಮೆ. ಹೀಗಾಗಿ ರಾಜ್ಯ ಸರ್ಕಾರವು ಕೊರತೆಯಾಗುವ ಮೊತ್ತವನ್ನು ತನ್ನ ಖಜಾನೆಯಿಂದಲೇ ಖರ್ಚು ಮಾಡಬೇಕಾದ ಸ್ಥಿತಿ ಇದೆ. ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯ ವಿಪತ್ತು ಪರಿಹಾರ ನಿಧಿಯಡಿ (ಎಸ್‌ಡಿಆರ್‌ಎಫ್) ಕರ್ನಾಟಕಕ್ಕೆ 1527 ಕೋಟಿ ರೂಪಾಯಿ ಒದಗಿಸಿದೆ. ನೈಸರ್ಗಿಕ ವಿಕೋಪಕ್ಕೆ ಒಳಗಾದ ಇತರ ರಾಜ್ಯಗಳಿಗೆ ನೀಡಿರುವ ಹಣ ಹೋಲಿಸಿದರೆ ಇದು ತೀರ ಕಡಿಮೆ. ಕಳೆದ ಐದು ವರ್ಷದಲ್ಲಿ ಕೇಂದ್ರವು 3665.71 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಆದರೆ ರಾಜ್ಯ ಖರ್ಚು ಮಾಡಿರುವುದು 4507.33 ಕೋಟಿ ರೂಪಾಯಿ. ಅಂದರೆ 841 ಕೋಟಿ ರೂಪಾಯಿಯನ್ನು ರಾಜ್ಯವೇ ಖರ್ಚು ಮಾಡುತ್ತಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇಂದ್ರ ಸಚಿವರಿಗೆ ಪತ್ರ ಬರೆದು ವಿವರಗಳನ್ನು ನೀಡಿ, ಪರಿಹಾರ ನಿಧಿಯನ್ನು ಹೆಚ್ಚು ಮಾಡುವಂತೆ ಕೋರಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕೇಂದ್ರದ ಈ ತಾರತಮ್ಯ ಧೋರಣೆ ಅನುಸರಿಸುವ ಮೂಲಕ ಒಕ್ಕೂಟ ತತ್ವದ ಉಲ್ಲಂಘನೆ ಮಾಡುತ್ತಿದೆ.


ಪ್ರಧಾನಿ ಉತ್ತರಕ್ಕೆ ಸುಸ್ತಾದ ಪ್ರೊಫೆಸರ್!

ಮೈಸೂರಿನ ಪ್ರೊಫೆಸರ್ ರಾಘವನ್ ಎಂಬುವರು ಪ್ರಧಾನಿ ಕಛೇರಿಗೆ ಜುಲೈ 28 ರಂದು ಒಂದು ಪತ್ರ ಕಳುಹಿಸಿ ಹೀಗೊಂದು ಪ್ರಶ್ನೆ ಕೇಳಿದ್ದರು. ಅವರ ಪ್ರಶ್ನೆ ಗಣಿತದಂತೆ ಕಬ್ಬಿಣದ ಕಡಲೆಯಾಗಿರದೆ ಸರಳವಾಗಿತ್ತು. ಪ್ರಶ್ನೆ ಹೀಗಿತ್ತು: "ಉನ್ನತ ವ್ಯಾಸಂಗ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಸಾಲದ ಮೇಲಿ ಬಡ್ಡಿಯನ್ನು ತುಸು ಇಳಿಸಬಹುದೇ, ದಯವಿಟ್ಟು ಪರಿಶೀಲಿಸಿ" ಎಂದು ಕೇಳಿದ್ದರು. ಇದೊಂದು ವೈಯಕ್ತಿಕ ಪ್ರಶ್ನೆಯಾಗಿರದೇ ಸಾರ್ವಜನಿಕ ಉದ್ದೇಶದಿಂದ ಕೇಳಿದ್ದರು. ಈ ಪ್ರಶ್ನೆಯ ಹಿಂದಿನ ಕಾಳಜಿ ಎಂದರೆ, ಶೈಕ್ಷಣಿಕ ಸಾಲಕ್ಕೆ ಬ್ಯಾಂಕುಗಳು 10.5 ರಿಂದ 11 ಶೇಕಡ ಬಡ್ಡಿ ವಿಧಿಸುತ್ತವೆ. ತನ್ನ ವಿದ್ಯಾಭ್ಯಾಸ ಮುಗಿಸಿದ ಆರು ತಿಂಗಳಲ್ಲಿ ಈ ಸಾಲ ತೀರಿಸಬೇಕು ಇಲ್ಲದಿದ್ದಲ್ಲಿ ಬಡ್ಡಿ ಮೂರರಷ್ಟಾಗುತ್ತದೆ. ಇದು ವಿಪರೀತ ಹೊರೆಯಾಗುತ್ತದೆ. ಸಾಲ ಮಾಡಿ ವಿದ್ಯಾಭ್ಯಾಸ ಮಾಡುವವರು ಬಹತೇಕ ಬಡವರೇ ಆಗಿರುತ್ತಾರೆ, ಆದ್ದರಿಂದಾಗಿ ಸಾಮಾಜಿಕ ಕಾಳಜಿಯಿಂದ ಈ ಪ್ರಶ್ನೆಯನ್ನು ಕೇಳಿದ್ದರು. ಈ ಪತ್ರದ ಪ್ರತಿಯನ್ನು ರಾಷ್ಟ್ರಪತಿ ಕಛೇರಿ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಹಾಗು ರಿಸರ್ವ್ ಬ್ಯಾಂಕ್ ಗೌರ್ನರ್ ಅವರಿಗೂ ಕಳುಹಿಸಿದ್ದಾರೆ. ಪ್ರಶ್ನೆಗೆ ಉತ್ತರಿಸಬೇಕಾದ ಪ್ರಧಾನಿ ಕಾರ್ಯಾಲಯವು ಉತ್ತರ ನೀಡಿದ ಪರಿಗೆ ಪ್ರೊಫೆಸರ್ ಸುಸ್ತು ಹೊಡೆದಿದ್ದಾರೆ. ಕೊಟ್ಟ ಉತ್ತರ ಹೀಗಿತ್ತು. "ನೀವು ನಿರ್ದಿಷ್ಟವಾಗಿ ಯಾವ ಬ್ಯಾಂಕ್ ಎನ್ನುವುದನ್ನು ತಿಳಿಸದ ಕಾರಣ ಪತ್ರವನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಲು ಸಾಧ್ಯವಿಲ್ಲ. ಪ್ರಕರಣ ಇತ್ಯರ್ಥಗೊಳಿಸಲಾಗಿದೆ" ಎಂದು ಇಮೇಲ್ ಮೂಲಕ ಉತ್ತರಿಸಲಾಗಿದೆ. ಇಂಥ ಹಾರಿಕೆ ಉತ್ತರ ನೀಡಿದ್ದರಿಂದ ಬೇಸರಗೊಂಡ ಪ್ರೊಫೆಸರ್ ಪಟ್ಟುಬಿಡದೇ ಮತ್ತೊಮ್ಮೆ ಮೇಲ್ ಕಳುಹಿಸಿ, ಕೇವಲ ಒಂದು ಬ್ಯಾಂಕ್ ಅಲ್ಲ, ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು ಒಂದೇ ತೆರನಾದ ಬಡ್ಡಿ ವಿಧಿಸುತ್ತಿರುವುದನ್ನು ಉಲ್ಲೇಖಿಸಿದ್ದರು. ವಾರದ ನಂತರ ಉತ್ತರವೇನೋ ಬಂತು. ಆದರೆ ಎರಡನೇ ಉತ್ತರ ನೋಡಿದ ಪ್ರೊಫೆಸರ್ ದಂಗಾಗಿದ್ದಾರೆ. ಹಣಕಾಸು ಇಲಾಖೆ ನಿರ್ಧಾರವಾಗಿದ್ದರಿಂದ ಬೆಂಗಳೂರಿನ ಸೇಂಟ್ ಮಾರ್ಕ್ ರಸ್ತೆಯ ಪ್ರಾದೇಶಿಕ ಕಛೇರಿಗೆ ಪತ್ರವನ್ನು ರವಾನಿಸಿ ಸೂಕ್ತ ಕ್ರಮಕ್ಕೆ ಸೂಚಿಸಲಾಗಿತ್ತು. ಹಾಗೆಯೇ ಮುಂದಿನ ಎಲ್ಲಾ ಬೆಳವಣಿಗೆಯನ್ನು ಸ್ವತಃ ತಾವೇ ಗಮನಿಸಿಕೊಳ್ಳಬೇಕೆಂದು ಹೇಳಲಾಗಿತ್ತು. ಕೆಲ ದಿನಗಳ ನಂತರ ಬ್ಯಾಂಕಿನ ಬೆಂಗಳೂರು ಕಛೇರಿಯಿಂದ ಪ್ರೊಫೆಸರ್ ರಾಘವನ್ ಅವರಿಗೆ ಫೋನ್ ಕರೆ ಬಂತು. ಫೋನ್ ಮಾಡಿದವರು ಯಾವ ಮಾಹಿತಿಯನ್ನು ಕೇಳದೇ "ನೀವು ನಮ್ಮ ಬ್ಯಾಂಕಿನಿಂದ ಶೈಕ್ಷಣಿಕ ಸಾಲ ಪಡೆದಿದ್ದೀರಾ?" ಎಂದು ಕೇಳಿದರು ಇಲ್ಲ ಎಂದಾಕ್ಷಣವೇ ಕರೆ ಕಟ್ ಮಾಡಿದ್ದಾರೆ. ಸಾರ್ವಜನಿಕ ಉದ್ದೇಶದಿಂದ ಕೇಳಿದ ಇಂಥ ಪ್ರಶ್ನೆಗೆ ಪ್ರಧಾನಿ ಕಛೇರಿ ನೀಡಿದ ಬೇಜವಾಬ್ದಾರಿಯ ಹಾರಿಕೆಯ ಉತ್ತರ ಪ್ರಧಾನಿಯ ಇ-ಆಡಳಿತದ ವೈಖರಿಗೊಂದು ಜೀವಂತ ಸಾಕ್ಷಿ.

ಪ್ರತಿಷ್ಠಿತ ಶಾಲೆಗಳ ಮಾನ್ಯತೆ ರದ್ದು!

ರಾಜ್ಯದ ವಿವಿದೆಡೆ ಇರುವ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಮತ್ತು ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ನ್ಯಾಷನಲ್ ಅಕಾಡೆಮಿ ಫಾರ್ ಲರ್ನಿಂಗ್ ಮತ್ತು ಮೈಸೂರಿನ ವಿಜಯ ನಗರದ ಎನ್‌ಪಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಸೇರಿದಂತೆ ಒಟ್ಟು ಶಾಲೆಗಳ ಮಾನ್ಯತೆಯನ್ನು ಸಿಬಿಎಸ್‌ಸಿ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್) ರದ್ದುಪಡಿಸಿದೆ. ರಾಜ್ಯ ಸರ್ಕಾರವೇ ಇಂಥದ್ದೊಂದು ಶಿಫಾರಸ್ಸು ಮಾಡಿರುವುದು ವಿಶೇಷ. ಈ ಶಿಕ್ಷಣ ಸಂಸ್ಥೆಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಲ್ಪಸಂಖ್ಯಾತ ಸಂಸ್ಥೆಗಳ ಸ್ಥಾನಮಾನ ಪಡೆದಿದ್ದವು. ಆರ್‌ಟಿಐನಿಂದ ವಿನಾಯಿತಿ ಪಡೆಯುವುದು ಮತ್ತು ಇನ್ನು ಅನೇಕ ಅನುದಾನಗಳನ್ನು ಪಡೆಯುವ ಸಲುವಾಗಿ ನಕಲಿ ದಾಖಲೆಗಳನ್ನು ನೀಡಿ ಸರ್ಕಾರಕ್ಕೆ ವಂಚಿಸಿದ್ದವು. ವಿಷಯ ತಿಳಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಸಿಬಿಎಸ್‌ಸಿಗೆ ಈ ಬಗ್ಗೆ ದೂರು ನೀಡಿದ್ದರು. ದೂರು ಆಧರಿಸಿ ಪರಿಶೀಲಿಸಿದ ಸಿಬಿಎಸ್‌ಸಿ 6 ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಿದೆ.

ವೈದ್ಯಕೀಯ ಶಿಕ್ಷಣದ ಕಾಯಿಲೆಗೂ ಕಾರ್ಪೊರೇಟೀಕರಣದ ಸಿದ್ಧ ಟಾನಿಕ್ : ಒಳ್ಳೆಯ ದಿನಗಳ 'ನೀತಿ ಆಯೋಗ'ದ ಅಮೋಘ ಪರಿಹಾರ !



ಕಳೆದ ಮಾರ್ಚ್‌ನಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯ ವೈದ್ಯಕೀಯ ಶಿಕ್ಷಣದಲ್ಲಿ ಭ್ರಷ್ಟಾಚಾರದ ಬಗ್ಗೆ ಅತ್ಯಂತ ಕಟುವಾದ ಟಿಪ್ಪಣಿಗಳನ್ನು ಮಾಡಿತ್ತು. ಆರೋಗ್ಯ ಮಂತ್ರಾಲಯದ ಸಂಸದೀಯ ಸ್ಥಾಯೀ ಸಮಿತಿಯ ವರದಿ ಕೂಡ ಭಾರತೀಯ ವೈದ್ಯಕೀಯ ಮಂಡಳಿ(ಎಂಸಿಐ)ಯ ಆಮೂಲಾಗ್ರ ರಿಪೇರಿ ನಡೆಯಬೇಕಾಗಿದೆ ಎಂದಿತ್ತು.

ಉದಾರೀಕರಣದ ದಿನಗಳಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡವು. 1980ರಿಂದ 2016ರ ನಡುವೆ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ 20ಪಟ್ಟು, 12ರಿಂದ 221ಕ್ಕೇರಿತು, ಈ ಕಾಲೇಜುಗಳಲ್ಲಿ ಎಂಬಿಬಿಎಸ್ ಸೀಟುಗಳ ಸಂಖ್ಯೆ 1770ರಿಂದ 24690ಕ್ಕೆ ಏರಿತು. ಆ ಅವಧಿಯಲ್ಲಿ ಸರಕಾರೀ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಕೇವಲ 2ಪಟ್ಟಾಯಿತು, 100ರಿಂದ 205 ಆಯಿತು.

ಎಂಸಿಐನಲ್ಲಿ ಭ್ರಷ್ಟಾಚಾರಕ್ಕೆ ಮತ್ತು ಆಮೂಲಕ ಶಿಕ್ಷಣದ ಗುಣಮಟ್ಟ ತೀವ್ರವಾಗಿ ಇಳಿಯಲು ವೈದ್ಯಕೀಯ ಶಿಕ್ಷಣದ ವ್ಯಾಪಕ ಖಾಸಗೀಕರಣವೇ ಮುಖ್ಯ ಕಾರಣ ಎಂಬುದು ಈಗ ಸುಮಾರಾಗಿ ಎಲ್ಲರೂ ಒಪ್ಪುವ ಮಾತು. ಏಕೆಂದರೆ ನಿಯಮಾವಳಿಗಳ ಉಲ್ಲಂಘನೆಗಳ ದೂರುಗಳು ಮತ್ತು ಕಾಲೇಜುಗಳನ್ನು ಮುಚ್ಚಬೇಕೆಂಬ ಶಿಫಾರಸುಗಳು ಬಂದಿರುವುದು ಎಲ್ಲವೂ ಖಾಸಗೀ ವಲಯದ ವೈದ್ಯಕೀಯ ಕಾಲೇಜುಗಳ ಬಗ್ಗೆಯೇ.

ಈ ಹಿನ್ನೆಲೆಯಲ್ಲಿ ದೇಶದಲ್ಲಿ ವೈದ್ಯಕೀಯ ಶಿಕ್ಷಣವನ್ನು ಸುಧಾರಿಸುವ ಕುರಿತು 'ಒಳ್ಳೆಯ ದಿನ'ಗಳ 'ನೀತಿ ಆಯೋಗ' ಈ ತಿಂಗಳ ಆರಂಭದಲ್ಲಿ ಸಲ್ಲಿಸಿದ ವರದಿ ಮತ್ತು ಅದರಲ್ಲಿರುವ 'ರಾಷ್ಟ್ರೀಯ ವೈದ್ಯಕೀಯ ಆಯೋಗ'ದ ಕರಡು ಮಸೂದೆ ಭಾರತದಲ್ಲಿ ವೈದ್ಯಕೀಯ ಶಿಕ್ಷಣದ ಬಗ್ಗೆ ಮತ್ತು ವೈದ್ಯಕೀಯ ಸೇವೆಗಳ ಬಗ್ಗೆ ಗಂಭೀರವಾಗಿ ಯೋಚಿಸುವವರಿಗೆಲ್ಲ ಆಘಾತ ಉಂಟು ಮಾಡಿದೆ.

150ಕ್ಕೂ ಹೆಚ್ಚು ವೈದ್ಯಕೀಯ ಪರಿಣತರುಗಳ ಸಂಘಟನೆ ಅಲಿಯನ್ಸ್ ಆಫ್ ಡಾಕ್ಟರ್ಸ್ ಫಾರ್ ಎಥಿಕಲ್ ಹೆಲ್ತ್‌ಕೇರ್(ಎಡಿಇಹೆಚ್) ಅಂದರೆ ನೈತಿಕ ಆರೋಗ್ಯಪಾಲನೆಗೆ ಡಾಕ್ಟರುಗಳ ಮೈತ್ರಿಸಂಸ್ಥೆ ನೀತಿ ಆಯೋಗದ ಶಿಫಾರಸು ಅತ್ಯಂತ ನಿರಾಶಾದಾಯಕ, ಅದು ವಾಸಿ ಮಾಡಬೇಕೆಂದಿರುವ ಕಾಯಿಲೆಗಿಂತಲೂ ಕೆಟ್ಟದಾಗಿದೆ ಎಂದು ಪ್ರತಿಕ್ರಿಯಿಸಿದೆ.

ಆಗಸ್ಟ್ 26ರಂದು ನವದೆಹಲಿಯಲ್ಲಿ ಪತ್ರಿಕಾ ಸಮ್ಮೇಳನ ನಡೆಸಿದ ಈ ಸಂಸ್ಥೆಯ ಮೂವರು ಡಾಕ್ಟರುಗಳು ಈ ಕರಡು ಮಸೂದೆ ವೈದ್ಯಕೀಯ ಶಿಕ್ಷಣದ ಖಾಸಗೀಕರಣದ ಮೇಲೆ ಹತೋಟಿ ಹಾಕುವ ಬದಲು, ಅದು ಇನ್ನಷ್ಟು ವ್ಯಾಪಾರೀಕರಣಗೊಳ್ಳಲು ಅವಕಾಶ ಮಾಡಿಕೊಡುತ್ತಿದೆ ಎಂದು ಟೀಕಿಸಿದ್ದಾರೆ. ಈ ಮಸೂದೆಯೇನಾದರೂ ಕಾನೂನು ಆದರೆ, ಕಳಪೆ ಗುಣಮಟ್ಟದ ವೈದ್ಯಕೀಯ ಕಾಲೇಜುಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಲಿದೆ ಮತ್ತು ವೈದ್ಯಕೀಯ ವ್ಯವಸ್ಥೆಯಲ್ಲಿರುವ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಲಿದೆ ಎಂದು ಬಲವಾಗಿ ಟೀಕಿಸಿದ್ದಾರೆ. ನೀತಿ ಆಯೋಗ ಶಿಫಾರಸು ಮಾಡಿರುವ ರಾಷ್ಟ್ರೀಯ ವೈದ್ಯಕೀಯ ಆಯೋಗ ಸಂಪೂರ್ಣವಾಗಿ ನಾಮಕರಣದ ಮೇಲೆ ಆಧರಿಸಿರುವುದರಿಂದಾಗಿ ಅಧಿಕಾರಶಾಹಿಯ ಬಲವಾದ ಹತೋಟಿಯಲ್ಲಿರುತ್ತದೆ ಎಂದು ಅವರು ಆರೋಪಿಸಿದ್ದಾರೆ.

ಭಾರತ ಸರಕಾರ ನೇಮಿಸಿದ ಹಲವು ಆಯೋಗಗಳ ಅಧ್ಯಯನಗಳ ಪ್ರಕಾರ ಭಾರತದ ವೈದ್ಯಕೀಯ ರಂಗದಲ್ಲಿ ಈಗಿರುವ ಮುಖ್ಯ ಸಮಸ್ಯೆಯೆಂದರೆ, ಬಹುಪಾಲು ಭಾರತೀಯರಿಗೆ ಒಂದು ಸೂಕ್ತ ಪ್ರಮಾಣದ ವೈದ್ಯಕೀಯ ಪಾಲನೆ ಸಿಗುತ್ತಿಲ್ಲ. ಒಂದೆಡೆಯಲ್ಲಿ ಸಾಂಕ್ರಾಮಿಕ ಮತ್ತು ದಿರ್ಘಕಾಲದ ಕಾಯಿಲೆಗಳು ಹೆಚ್ಚುತ್ತಿದ್ದರೆ, ಇನ್ನೊಂದೆಡೆಯಲ್ಲಿ ಡಾಕ್ಟರುಗಳು ನಗರಗಳಲ್ಲೇ ಕೇಂದ್ರೀಕೃತರಾಗಿದ್ದಾರೆ. ಇಂತಹ ಸನ್ನಿವೇಶದಲ್ಲಿ ಈ ಸವಾಲುಗಳನ್ನು ನಿರ್ವಹಿಸಬಲ್ಲ ವೈದ್ಯಕೀಯ ವೃತ್ತಿಪರರ ಪಡೆಯನ್ನು ತಯಾರಿಸುವುದು ಒಂದು ಮುಖ್ಯ ಉದ್ದೇಶವಾಗಬೇಕಿತ್ತು.

ಈ ಹಿನ್ನೆಲೆಯಲ್ಲಿ ವೈದ್ಯಕೀಯ ರಂಗದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಕಡಿಮೆ ಮಾಡಿ ಖಾಸಗಿ ಕಾಲೇಜುಗಳಿಗೆ ಸೌಕರ್ಯಗಳನ್ನು ಒದಗಿಸುವ ನೀತಿಯನ್ನು ಬದಲಿಸುವ ಬಗ್ಗೆ ಗಂಭೀರ ಯೋಚನೆ ನಡೆಸಬೇಕಿತ್ತು.

ತದ್ವಿರುದ್ಧವಾಗಿ, ಮೋದಿಯವರ 'ಒಳ್ಳೆಯ ದಿನ'ಗಳ 'ನೀತಿ ಆಯೋಗ' ನೀಡಿರುವುದು ವೈದ್ಯಕೀಯ ಶಿಕ್ಷಣದ ಕಾರ್ಪೊರೇಟೀಕರಣದ ಅಮೋಘ ಶಿಫಾರಸು! 'ಲಾಭಕ್ಕೆ ಅಲ್ಲದ' ಟ್ರಸ್ಟ್‌ಗಳು ಮಾತ್ರ ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಬಹುದು ಎಂಬ ನಿಯಮದಿಂದಾಗಿ ಹಣಕಾಸಿನ ಅಪಾರದರ್ಶಕ ವ್ಯವಹಾರಗಳನ್ನು ತಡೆಯಲು ಸಾಧ್ಯವಾಗಿಲ್ಲ ಮತ್ತು ಖಾಸಗಿ ಕಾಲೇಜುಗಳಲ್ಲಿ ಶುಲ್ಕದ ಮೇಲಿನ ಮಿತಿಯಿಂದಾಗಿ ವೈದ್ಯಕೀಯ ಶಿಕ್ಷಣದ ತ್ವರಿತ ವಿಸ್ತರಣೆಗೆ ಅಡ್ಡಿಯಾಗಿದೆ ಎಂದು ಹೇಳುತ್ತ ನೀತಿ ಆಯೋಗ 'ಲಾಭಕ್ಕಾಗಿ' ವೈದ್ಯಕೀಯ ಕಾಲೇಜುಗಳನ್ನು ತೆರೆಯುವವರಿಗೂ ಅವಕಾಶ ಮಾಡಿಕೊಡುವುದೇ ಇದಕ್ಕೆ ಪರಿಹಾರ ಎಂಬ ತೀರ್ಮಾನಕ್ಕೆ ಬಂದಿದೆ. ವೈದ್ಯಕೀಯ ಶಿಕ್ಷಣದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸುವ ಬಗ್ಗೆ ಯೋಚಿಸಲೂ ಅದು ಹೋಗಿಲ್ಲ. ಇದು ನವ–ಉದಾರವಾದದ ಅತ್ಯಂತ ನಗ್ನ ಸ್ವರೂಪ ಎಂದು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಈ ಅಮೋಘ ಶಿಫಾರಸು ಮಾಡಿದ ನಾಲ್ವರು ಸದಸ್ಯರ ಸಮಿತಿಯ ಮುಖ್ಯಸ್ಥರಾಗಿದ್ದವರು ನೀತಿ ಆಯೋಗದ ಉಪಾಧ್ಯಕ್ಷ ಅರವಿಂದ್ ಪನಗರಿಯ. ಈ 'ರಾಷ್ಟ್ರೀಯ ವೈದ್ಯಕೀಯ ಆಯೋಗ' ಕುರಿತಂತೆ ಸಾರ್ವಜನಿಕ ಟಿಪ್ಪಣಿಗಳನ್ನು ಆಗಸ್ಟ್ 31 ರ ವರೆಗೆ ಕೊಡಬಹುದೆಂದು ಹೇಳಲಾಗಿತ್ತು. ಈ ಬಗ್ಗೆ ಬಂದಿರುವ ಕಟು ಟೀಕೆಗಳ ಹಿನ್ನೆಲೆಯಲ್ಲಿ ಸಂಸತ್ತಿನಲ್ಲಿ ಮಂಡಿಸಲಾಗುವ ಮಸೂದೆಯಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಆದರೆ 'ಒಳ್ಳೆಯ ದಿನ'ಗಳ ಇತರ ಬೆಳವಣಿಗೆಗಳು ಅಂತಹ ಆಶಾವಾದಕ್ಕೆ ಹೆಚ್ಚೇನೂ ಆಸ್ಪದ ನೀಡುತ್ತಿಲ್ಲ.

ಹರಿಯಾಣದಲ್ಲಿ ಬಿರಿಯಾನಿಯಲ್ಲಿ ಬೀಫ್ ಬೆನ್ನಟ್ಟಿರುವ ಸರಕಾರ –ಗೋಸೇವಾ ಆಯೋಗದ ಅಧ್ಯಕ್ಷ ಮತ್ತು ಡಿಐಜಿ ಆದೇಶ

'ಕಳೆದ ವರ್ಷ ಗೋವಂಶ ಸಂರಕ್ಷಣ್ ಔರ್ ಗೌಸಂವರ್ಧನ್' ಕಾನೂನು ತಂದಿರುವ ಹರಿಯಾಣದಲ್ಲಿ ಈ ವಾರ ಗೋಸೇವಾ ಆಯೋಗದ ಅಧ್ಯಕ್ಷರು ಮತ್ತು ಗೋರಕ್ಷಾ ಟಾಸ್ಕ್‌ಫೋರ್ಸ್‌ನ ಡಿಐಜಿ ಆದೇಶದ ಮೇರೆಗೆ ಮೇವತ್ ಜಿಲ್ಲೆಯಲ್ಲಿ ಬಕ್ರೀದ್ ಸಂದರ್ಭದಲ್ಲಿ ಮಾರಾಟವಾಗುತ್ತಿರುವ ಬಿರ್ಯಾನಿಯಲ್ಲಿ ಗೋಮಾಂಸ ಸೇರಿಸಲಾಗುತ್ತಿದೆ ಎಂಬ ಪುಕಾರಿನ ಹಿನ್ನೆಲೆಯಲ್ಲಿ ಸ್ಥಳೀಯ ಪೋಲೀಸರಿಗೆ ಮಾಂಸ ಮಾರಾಟಗಾರರಿಂದ ಬಿರಿಯಾನಿ ಸ್ಯಾಂಪಲ್‌ಗಳನ್ನು ಹೊತ್ತೊಯ್ಯುವ ಕೆಲಸ ವಹಿಸಲಾಗಿದೆ ಎಂದು ವರದಿಯಾಗಿದೆ. ಇದರಿಂದ ಈ ಜಿಲ್ಲೆಯ ಮಾಂಸದ ತಿಂಡಿಗಳ ಮಾರಾಟಗಾರರು ಭಯಭೀತರಾಗಿದ್ದಾರಂತೆ. ಬಿರಿಯಾನಿಯಲ್ಲಿ ಗೋಮಾಂಸ ಕಂಡುಬಂದರೆ ಹೊಸ ಕಾನೂನಿನ ಅಡಿಯಲ್ಲಿ 10 ವರ್ಷಗಳ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ.

ಬೆಲೆಯೇರಿಕೆಯ ಹೊಡೆತದಿಂದ ರಕ್ಷಣೆ ಕೊಡದ, ರೈತರಿಗೆ ಯೋಗ್ಯ ಬೆಲೆ, ಯುವಕರಿಗೆ ಉದ್ಯೋಗ ಕೊಡಲಾರದ ಸರಕಾರ ರೊಟ್ಟಿ–ಬೇಳೆ ಅಂತಿರಲಿ, ಗೋಮಾಂಸದ ಬೆನ್ನಟ್ಟಿದೆ ಎಂಬ ಟೀಕೆ ವ್ಯಾಪಕವಾಗಿ ಕೇಳಬರುತ್ತಿದೆಯಂತೆ.

ಇನ್ನು ಮುಂದೆ ರೈಲು ಬಜೆಟ್ ಇರುವುದಿಲ್ಲ ಎಂದಿರುವ ರೈಲ್ವೆ ಮಂತ್ರಿ ಸುರೇಶ್ ಪ್ರಭುಗಳು ಬಜೆಟ್ ನಿಯಮಾವಳಿಗಳ ಹಂಗಿಲ್ಲದೆ ಮೂರು ಜನಪ್ರಿಯ ರೈಲುಗಳ ದರಗಳನ್ನು 'ಸರ್ಜ್ ಪ್ರೈಸ್' (ಅಲೆ ಬೆಲೆ?) ಹೆಸರಲ್ಲಿ ಒಂದೂವರೆ ಪಟ್ಟು ಮಾಡಿದ್ದಾರೆ. ಉಬೆರ್ ಟ್ಯಾಕ್ಸಿಯವರು ಈ ಹೆಸರಿನಲ್ಲಿ ಹಣ ಕೀಳುವುದನ್ನು ತಡೆಯಬೇಕು ಎಂದು ಸರಕಾರಕ್ಕೆ ಮೊರೆಯಿಟ್ಟರೆ ಅವರು ಸರಕಾರಕ್ಕೇ ತಮ್ಮ ಪಾಠ ಹೇಳಿ ಕೊಟ್ಟಿದ್ದಾರೆ ! –ಸುದ್ದಿ



ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಮಾದರಿ ರಾಜ್ಯದ ಭದ್ರ ನೆಲೆಯಲ್ಲಿ ಬಲಪ್ರದರ್ಶನ ಸಾಧ್ಯವಾಗದ ದಿನಗಳು ಬಂದಿವೆ!

'ಒಳ್ಳೆಯ ದಿನ'ಗಳ ಮಾದರಿ ರಾಜ್ಯವಾದ ಗುಜರಾತ್ ಈ ವಾರ ಮತ್ತೆ ಸುದ್ದಿಯಲ್ಲಿದೆ. ಒಂದೊಮ್ಮೆ ಇಲ್ಲಿನ ಆಳುವ ಪಕ್ಷದ ಭದ್ರ ನೆಲೆಯಾಗಿದ್ದ ಸೂರತ್‌ನಲ್ಲಿ ಸಪ್ಟಂಬರ್ 8ರಂದು ಆಳುವ ಪಕ್ಷ ಹಮ್ಮಿಕೊಂಡಿದ್ದ 'ಬಲಪ್ರದರ್ಶನ' ಅಸ್ತವ್ಯಸ್ತಗೊಂಡದ್ದು ಈ ಬಾರಿಯ ಗಮನಾರ್ಹ ಸುದ್ದಿ.

ಈಗ ಆಳುವ ಪಕ್ಷದಿಂದ ದೂರವಾಗುತ್ತಿರುವ ಪಾಟಿದಾರ್ ಅಂದರೆ ಪಟೇಲ್ ಸಮುದಾಯದ ಆಂದೋಲನದ ಮುಖ್ಯ ನೆಲೆಯಾದ ಈ ನಗರದಲ್ಲಿ ತಾವು ಮತ್ತೆ ಬಲ ಗಳಿಸಿಕೊಂಡಿದ್ದೇವೆ ಎಂದು ಪ್ರದರ್ಶಿಸುವ ಅವರ ಪ್ರಯತ್ನಕ್ಕೆ ಭಾರೀ ಹಿನ್ನಡೆಯಾಗಿದೆ ಎನ್ನಲಾಗಿದೆ.

ಅಂದು ಸೂರತ್‌ನ ಪ್ರಮುಖ ಪಟೇಲ್ ವ್ಯಾಪಾರಸ್ಥರು ಬಿಜೆಪಿಯ ಅಖಿಲ ಭಾರತ ಅಧ್ಯಕ್ಷರು, ಹೊಸ ಮುಖ್ಯಮಂತ್ರಿಗಳು, ಜತೆಗೆ ರಾಜ್ಯ ಬಿಜೆಪಿಯ ಹೊಸ ಅಧ್ಯಕ್ಷ ರು ಮತ್ತಿತರ ರಾಜ್ಯ ಬಿಜೆಪಿಯ ಘಟಾನುಘಟಿಗಳನ್ನು ಸನ್ಮಾನಿಸುವ ಭವ್ಯ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ಆದರೆ ವ್ಯಾಪಕ ಭದ್ರತಾ ಬಂದೋಬಸ್ತು ಮತ್ತು 1700 ಪೋಲೀಸರ ಕಣ್ಗಾವಲಿನ ನಡುವೆಯೂ 'ಜಯ್ ಸರ್ದಾರ್ ಜಯ್ ಪಾಟಿದಾರ್' ಘೋಷಣೆಗಳ ನಡುವೆ ನಡೆದ ಗಲಭೆ–ಗದ್ದಲದಲ್ಲಿ 45 ನಿಮಿಷಗಳಲ್ಲೇ ಸಮಾರಂಭ ಕೊನೆಗೊಂಡಿತು ಎಂದು ವರದಿಯಾಗಿದೆ.

ಅಮಿತ್ ಶಹಾ ಕೇವಲ ನಾಲ್ಕು ನಿಮಿಷ ಮಾತಾಡಿ ವೇದಿಕೆ ಬಿಟ್ಟು ಹೋದರು, ಉಳಿದ ಮುಖಂಡರಲ್ಲಿ ಯಾರೂ ಐದು ನಿಮಿಷಗಳಿಗಿಂತ ಹೆಚ್ಚು ಮಾತಾಡಲಾಗಲಿಲ್ಲ.ಅಮಿತ್ ಶಹಾ 'ಪಾಟಿದಾರರ ಬೆಂಬಲ'ಕ್ಕೆ ಕೃತಜ್ಞತೆ ವ್ಯಕ್ತಪಡಿಸಲಷ್ಟೇ ಸಾಧ್ಯವಾಯಿತು, ಪಾಟಿದಾರ ಸಮುದಾಯಕ್ಕೆ ಒಬಿಸಿ ಸ್ಥಾನಮಾನ, ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಇತ್ಯಾದಿಗಳ ಬಗ್ಗೆ ಮಾತನಾಡಲಿಲ್ಲ ಎಂದೂ ವರದಿಯಾಗಿದೆ.

'ಭವ್ಯ' ಬಲಪ್ರದರ್ಶನವೊಂದು 45 ನಿಮಿಷಗಳಲ್ಲೇ ಮುಕ್ತಾಯಗೊಂಡರೂ ರಾಜ್ಯ ಬಿಜೆಪಿ ಅಧ್ಯಕ್ಷರು ಒಂದು ಹತ್ತಿಪ್ಪತ್ತು ಹುಡುಗರಷ್ಟೇ ಗಲಾಟೆ ಮಾಡಿದರು, ಉಳಿದ ಸಾವಿರಾರು ಮಂದಿ ಕೂತೇ ಇದ್ದರು ಎಂಬುದು ಬಿಜೆಪಿಯ ಬಲವನ್ನು ಪ್ರದರ್ಶಿಸಿದೆ ಎಂದು ಹೇಳಿಕೊಂಡಿದ್ದಾರೆ.

ಅತ್ತ ಗಡೀಪಾರಿನಲ್ಲಿ ಪಕ್ಕದ ರಾಜ್ಯದ ರಾಜಧಾನಿ ಜಯಪುರದಲ್ಲಿರುವ ಪಾಟಿದಾರ್ ಆಂದೋಲನದ ಮುಖಂಡ ಹಾರ್ದಿಕ್ ಪಟೇಲ್ ಇದು ರಾಜ್ಯದಲ್ಲಿ ಬಿಜೆಪಿಯ ವಿರುದ್ಧ ಪಾಟೀದಾರ್ ಸಮುದಾಯದ ಸಿಟ್ಟನ್ನು ವ್ಯಕ್ತಗೊಳಿಸಿದೆ ಎಂದು ಹೇಳಿದ್ದಾರೆ.

ಅದೇನೇ ಇರಬಹುದು, ಬಿಜೆಪಿ 'ಒಡೆದು ಆಳುವ' ಆಟ ಆಡುತ್ತಿದೆ ಎಂಬ ಅವರ ಮಾತಿನಲ್ಲಿ ಬಲವಿದ್ದಂತಿದೆ.

2014ರಲ್ಲಿ ಇವರ 'ಒಳ್ಳೆಯ ದಿನ'ಗಳು' ಆರಂಭವಾದಾಗ ಇನ್ನು ಜಾತಿ ರಾಜಕೀಯ ಮುಗಿಯಿತು ಎಂದು ಮಾಧ್ಯಮಗಳಲ್ಲಿ ವಿಶ್ಲೇಷಿಸಲಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು.

ಸರಕಾರದ ಟೀಕೆ ಮಾಡಿದರೆ ಅದು ರಾಜದ್ರೋಹ ಆಗುವುದಿಲ್ಲ ಸುಪ್ರಿಂ ಕೋರ್ಟ್ ಪುನರುಚ್ಚಾರ


"ಯಾರಾದರೂ ಸರಕಾರವನ್ನು ಟೀಕಿಸುವ ಹೇಳಿಕೆ ನೀಡಿದರೆ ಅದು ರಾಜದ್ರೋಹ ಅಥವ ಮಾನನಷ್ಟ ಕಾಯ್ದೆಯ ಅಡಿಯಲ್ಲಿ ಅಪರಾಧವಾಗುವುದಿಲ್ಲ. ಐಪಿಸಿಯ ಸೆಕ್ಷನ್124(ಎ) ಬಳಸಬೇಕಾದರೆ ಸರ್ವೋಚ್ಚ ನ್ಯಾಯಾಲಯದ ಹಿಂದಿನ ತೀರ್ಪಿನಲ್ಲಿ ಹೇಳಿರುವ ಮಾರ್ಗದರ್ಶಕ ಸೂತ್ರಗಳನ್ನು ಅನುಸರಿಸಬೇಕು" ಎಂದು ಸಪ್ಟಂಬರ್ 5ರಂದು ಸುಪ್ರಿಂ ಕೋರ್ಟಿನ ಇಬ್ಬರು ನ್ಯಾಯಾಧೀಶರ ಪೀಠ ಮತ್ತೊಮ್ಮೆ ಹೇಳಿದೆ. "ನಾವು ಮತ್ತೊಮ್ಮೆ ರಾಜದ್ರೋಹದ ಕಾಯ್ದೆಯನ್ನು ವಿವರಿಸಬೇಕಾಗಿಲ್ಲ. ಅದು 1962ರ ಕೇದಾರನಾಥ ಸಿಂಗ್ ವರ್ಸಸ್ ಬಿಹಾರ ರಾಜ್ಯದ ಕೇಸಿನ ಐವರು ನ್ಯಾಯಾಧೀಶರ ಸಂವಿಧಾನ ಪೀಠದ ತೀರ್ಪಿನಲ್ಲಿ ಆಗಲೇ ಇದೆ" ಎಂದು ನ್ಯಾಯ ಮೂರ್ತಿಗಳು ಹೇಳಿದ್ದಾರೆ.

ಪ್ರಖ್ಯಾತ ವಕೀಲ ಪ್ರಶಾಂತ ಭೂಷಣ್ ಅವರು ಒಂದು ಎನ್‌ಜಿಒ ಪರವಾಗಿ ಹಾಕಿದ ಅರ್ಜಿಯ ಸಂದರ್ಭದಲ್ಲಿ ಈ ಪುನರುಚ್ಚರಣೆ ಬಂದಿದೆ. ದೇಶಪ್ರೇಮ, ರಾಷ್ಟ್ರೀಯವಾದದಂತೆ ರಾಜದ್ರೋಹ ಎಂಬ ಪದವೂ 'ಒಳ್ಳೆಯ ದಿನ'ಗಳ ಲಾಂಛನವಾಗುತ್ತಿರುವ ಸನ್ನಿವೇಶದಲ್ಲಿ ಈ ಪ್ರಶ್ನೆ ಮತ್ತೆ ಎದ್ದಿತ್ತು.

ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿಯ ಪ್ರಕಾರ 2014ರಲ್ಲಿ 58 ವ್ಯಕ್ತಿಗಳ ಮೇಲೆ 47 ರಾಜದ್ರೋಹದ ಕೇಸುಗಳನ್ನು ಹಾಕಲಾಗಿದೆ. ಅದರಲ್ಲಿ ಸರಕಾರಕ್ಕೆ ಶಿಕ್ಷೆಗೆ ಒಳಪಡಿಸಲು ಸಾಧ್ಯವಾಗಿರುವುದು ಒಬ್ಬರನ್ನು ಮಾತ್ರ.

ಸುಪ್ರಿಂ ಕೋರ್ಟಿನ ಆದೇಶದ ಪ್ರತಿಗಳನ್ನು ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಡಿಜಿಪಿಗಳಿಗೆ ಕಳಿಸಲಿ ಎಂದು ನ್ಯಾಯಮೂರ್ತಿಗಳು ಹೇಳಿರುವುದಾಗಿ ವರದಿಯಾಗಿದೆ.

ಬಹುಶಃ ಆದೇಶದ ಪ್ರತಿಗಳನ್ನು ಸಂಘಪರಿವಾರದ ಎಲ್ಲ ಸಂಘಟನೆಗಳ ಮುಖ್ಯಸ್ಥರಿಗೂ ಮತ್ತು 'ಮನ ಕೀ ಬಾತ್' ಸಿಬ್ಬಂದಿಗೂ ಕಳಿಸಬೇಕೇನೋ.



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಟೆಲಿಕಾಂ ಕ್ಷೇತ್ರದಲ್ಲಿ ಈಗ ಮತ್ತೆ ಅಂಬಾನಿ ಅಬ್ಬರ
2ಜಿ ನಂತರ 4ಜಿ:ಅದೇ ಚಮಚಾ ಬಂಡವಾಳಶಾಹಿ ಚಾಳಿ?

ಸೆಪ್ಟಂಬರ್ 1 ರಂದು ದೇಶದ ಪ್ರಮುಖ ಉದ್ಯಮಿ ಮುಕೇಶ್ ಅಂಬಾನಿ ತನ್ನ 24ವರ್ಷ ವಯಸ್ಸಿನ ಪುತ್ರ ಮತ್ತು ಪುತ್ರಿ ಹಾಗೂ ಬಾಲಿವುಡ್ ನಟ ಶಾರುಖ್ ಖಾನ್ ಜೊತೆ ತನ್ನ ರಿಲಯಂಸ್ ಗುಂಪಿನ ಎರಡನೇ ಟೆಲಿಕಾಂ ಕಂಪನಿ 'ರಿಲಯಂಸ್ ಜಿಯೋ 'ವನ್ನು ಪ್ರಧಾನ ಮಂತ್ರಿಗಳ ಕನಸಿನ 'ಡಿಜಿಟಲ್ ಇಂಡಿಯಾ'ಕ್ಕೆ ಅರ್ಪಿಸುವುದಾಗಿ ಸಾರಿದರು.

'ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಡಿಜಿಟಲ್‌ಇಂಡಿಯಾದ ಕಣ್ಣೋಟ ಒಂದು ಬದುಕು ಬದಲಿಸುವ ಕ್ಷಣ' ಎಂದು ಪ್ರಶಂಸಿಸುತ್ತ ದೇಶದ ಈ ಅತ್ಯಂತ ಶ್ರೀಮಂತ ವ್ಯಕ್ತಿ, ಭಾರತದ 1.2 ಬಿಲಿಯ(ಅಂದರೆ 120 ಕೋಟಿ) ಜನತೆಯನ್ನು ನೆನಪಿಸಿಕೊಂಡರು, ಇವರಿಗಾಗಿ ಪ್ರಧಾನ ಮಂತ್ರಿಗಳು ಕಂಡಿರುವ ಭವ್ಯ ಕನಸಿನ ಈಡೇರಿಕೆಗೆ ತನ್ನ ಹೊಸ ಕಂಪನಿಯನ್ನು ಸಮರ್ಪಿಸುವುದಾಗಿ ಸಾರಿದರು.

ಮುಂದುವರೆದು ಅವರು ಪ್ರಕಟಿಸಿದ ಈ ಕಂಪನಿಯ 4ಜಿ ಸೇವೆ ಭಾರತದಲ್ಲಿ ದೂರಸಂಪರ್ಕ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಲಿದೆ ಎಂದೆಲ್ಲ ಮಾಧ್ಯಮಗಳಲ್ಲಿ ಹಾಡಿ ಹೊಗಳಲಾಗಿದೆ. ದೇಶದಲ್ಲೇ, ಅಷ್ಟೇ ಏಕೆ ಜಗತ್ತಿನಲ್ಲೇ ಅತಿ ಕಡಿಮೆ ದರದಲ್ಲಿ ಮಾಹಿತಿ ರವಾನಿಕೆಯ ಸೇವೆಗಳನ್ನು ಒದಗಿಸಲಾಗುವುದು, ದನಿ ಕರೆಗಳಿಗೆ ಇನ್ನು ಹಣ ತೆರಬೇಕಾಗಿಲ್ಲ, ರೋಮಿಂಗ್ ಚಾರ್ಜ್ ಇರುವುದಿಲ್ಲ, ಅಂದರೆ ದೇಶದ ಯಾವ ಮೂಲೆಗೇ ಹೋದರೂ ಹೆಚ್ಚಿನ ದರ ತೆರಬೇಕಾಗಿಲ್ಲ ಎಂದು ಹೇಳಲಾಗುತ್ತಿದೆ. ಡಿಸೆಂಬರ್ ಅಂತ್ಯದ ವರೆಗೆ ಆಧಾರ್ ಕಾರ್ಡ್ ಹೊಂದಿರುವ ಪ್ರತಿಯೊಬ್ಬನಿಗೆ ಒಂದು ಪುಕ್ಕಟೆ ಸಿಮ್ ಕಾರ್ಡ್ ಸಿಗುತ್ತದೆ. ಅಂದರೆ ಪುಕ್ಕಟೆ 4ಜಿ ಸೇವೆ. ಮೂರು ತಿಂಗಳ ನಂತರ ವಾಣಿಜ್ಯ ಸ್ವರೂಪದಲ್ಲಿ ತನ್ನ 4ಜಿ ಸೇವೆ ಆರಂಭಿಸುವುದಾಗಿ ಅಂಬಾನಿ ಪ್ರಕಟಿಸಿದ್ದಾರೆ.

ಮರುದಿನ, ಸೆಪ್ಟಂಬರ್2 ರಂದು,ಎರಡು ಪ್ರಮುಖ ಇಂಗ್ಲಿಷ್ ದೈನಿಕಗಳಲ್ಲಿ ಈ ಖಾಸಗಿ ಕಂಪನಿ ರಿಲಯಂಸ್ ಜಿಯೋದ ಪೂರ್ಣ ಮುಖಪುಟದ ಜಾಹಿರಾತು ದೇಶದ ಪ್ರಧಾನ ಮಂತ್ರಿಯ ಫೋಟೋದೊಂದಿಗೆ ಪ್ರಕಟವಾಯಿತು(ಪಕ್ಕದ ಬಾಕ್ಸ್ ನೋಡಿ). ಅದರಲ್ಲೂ ಪ್ರಧಾನಿಗಳ ಈ ಮೇಲೆ ಹೇಳಿದ ಹೊಗಳಿಕೆಯೊಂದಿಗೆ 'ಜಿಯೊ ಡಿಜಿಟಲ್ ಲೈಫ್ ಪ್ರತಿಯೊಬ್ಬ ಭಾರತೀಯನಿಗೆ ಪ್ರತಿಯೊಂದು ಕನಸನ್ನು ಈಡೇರಿಸಲು ಮಾಹಿತಿ(ಡಾಟಾ)ಯ ಶಕ್ತಿ ನೀಡುತ್ತದೆ ಮತ್ತು ಸಾಮೂಹಿಕವಾಗಿ ಭಾರತವನ್ನು ಜಾಗತಿಕ ಡಿಜಿಟಲ್ ಮುಖಂಡತ್ವಕ್ಕೆ ಒಯ್ಯುತ್ತದೆ' ಎಂಬ ಅಬ್ಬರದ ಮಾತೂ ಇತ್ತು.

ಜಿಯೋ ಅಂದರೆ ಹಿಂದಿಯಲ್ಲಿ 'ಬದುಕು' ಎಂದರ್ಥ ಎಂಬುದನ್ನು ಗಮನಿಸಬೇಕು.

ಈ ಇಂಗ್ಲಿಷ್ ಪತ್ರಿಕೆಗಳ ಓದುಗರು ಈ ನುಡಿಮುತ್ತುಗಳನ್ನು ಓದುತ್ತಿದ್ದಾಗಲೇ ದೇಶದ 18 ಕೋಟಿ ಕಾರ್ಮಿಕರು ಮತ್ತು ನೌಕರರು ಒಂದು ಘನತೆಯ ಬದುಕಿಗಾಗಿ ಕನಿಷ್ಟ ಸಂಬಳ ನಿಗದಿ ಮಾಡಿ ಎಂಬ ಬೇಡಿಕೆಯೂ ಸೇರಿದಂತೆ ತಮ್ಮ ದೀರ್ಘಕಾಲದ 12 ಬೇಡಿಕೆಗಳ ಬಗ್ಗೆ ಇದೇ 'ಡಿಜಿಟಲ್' ದೃಷ್ಟಾರನ ಸರಕಾರದ ನಿರ್ಲಕ್ಷ್ಯದ ವಿರುದ್ಧ ದೇಶವ್ಯಾಪಿ ಮುಷ್ಕರ ಕಾರ್ಯಾಚರಣೆಗೆ ಇಳಿದಿದ್ದರು ಎಂಬುದನ್ನೂ ಗಮನಿಸಬೇಕು.

ಅದಿರಲಿ, ಅಂಬಾನಿಯವರ ಈ ಅಬ್ಬರದ ಪ್ರಕಟಣೆ ಶೇರು ಮಾರುಕಟ್ಟೆಯಲ್ಲೂ ಪ್ರತಿಧ್ವನಿಸಿತಂತೆ. ಯಾವುದೇ ಸೇವೆ ಜನಸಾಮಾನ್ಯರಿಗೆ ಅಗ್ಗವಾಗುತ್ತದೆ ಎಂದರೆ ಶೇರು ಮಾರುಕಟ್ಟೆಗೆ ದಿಗಿಲಾಗುತ್ತದೆ ತಾನೇ! ಟೆಲಿಕಾಂ ವಲಯದಲ್ಲಿ ಪ್ರಮುಖ ಪ್ರತಿಸ್ಪರ್ಧಿ ಭಾರ್ತಿ ಏರ್‌ಟೇಲ್‌ನ ಶೇರು ದರದಲ್ಲಿ ಭಾರೀ ಇಳಿಕೆಯಾಗಿ ಅದರ ಮಾರುಕಟ್ಟೆ ಬಂಡವಾಳದ ಪ್ರಮಾಣದಲ್ಲಿ 12000 ಕೋಟಿರೂ.ಗಳ ತೀವ್ರ ಇಳಿಕೆಯಾಗಿದೆಯಂತೆ. ಸ್ವಲ್ಪ ಸಣ್ಣ ಪ್ರತಿಸ್ಪರ್ಧಿಯಾದ ಐಡಿಯಾ ಸೆಲ್ಯುಲರ್ ಶೇರು ಕೂಡ ಮಾರುಕಟ್ಟೆಯಲ್ಲಿ 3000 ಕೋಟಿ ರೂ. 'ಕಳಕೊಂಡಿದೆ'ಯಂತೆ. ಸ್ವತಃ ರಿಲಯಂಸ್ ಜಿಯೋ ಶೇರು ಮಾರುಕಟ್ಟೆ ಬೆಲೆಯಲ್ಲಿ 3ಶೇ. ಇಳಿಕೆಯಾಯಿತಂತೆ.

ಶೇರು ಮಾರುಕಟ್ಟೆ ವಿಶ್ಲೇಷಕರು ಇದನ್ನು 'ರಕ್ತಪಾತ' ಎಂದಿದ್ದಾರೆ, ಅಂದರೆ ಶೇರುದಾರರ ಲಾಭದ ನಿರೀಕ್ಷೆಯಲ್ಲಿ ಭಾರೀ ಇಳಿಕೆ. ಇದಕ್ಕೆ ಕಾರಣ ಅಂಬಾನಿಯ ಈ ಹೊಸ ಕಂಪನಿ ದರಗಳನ್ನು ತೀವ್ರವಾಗಿ ಇಳಿಸಿದೆ ಎಂಬ ಭಾವನೆ. ಆದರೆ ಈ ರೀತಿ ತೀವ್ರ ಇಳಿಕೆಯಾಗಿದೆ ಎಂಬುದು ನಿಜವಲ್ಲ ಎಂದು ದಿನಗಳೆದಂತೆ ಬರುತ್ತಿರುವ ವಿಶ್ಲೇಷಣೆಗಳು ಹೇಳುತ್ತಿವೆ. ಸಾರ್ವಜನಿಕ ವಲಯದ ಬಿಎಸ್‌ಎನ್‌ಎಲ್ ದರಗಳು ಈಗಾಗಲೇ ಜಿಯೋ ದರಗಳಿಗಿಂತ ಅಗ್ಗವಾಗಿವೆ ಎಂದು ಒಬ್ಬ ವಿಶ್ಲೇಷಕರು ಪರೀಕ್ಷಿಸಿದ್ದಾರೆ(ಬಾಕ್ಸ್ ನೋಡಿ)

ವಾಸ್ತವವಾಗಿ ಪ್ರಧಾನಿಗಳ ಫೋಟೋ ಹಾಕಿಕೊಂಡಂತೆ ಇದು ಕೂಡ ಮಾರ್ಕೆಟಿಂಗ್‌ನ ಅಬ್ಬರ ಅಷ್ಟೇ ಎಂದು ಹೇಳಲಾಗುತ್ತಿದೆ. ಏಕೆಂದರೆ 1.5ಲಕ್ಷ ಕೋಟಿ ರೂ.ಗಳ ಹೂಡಿಕೆಗೆ 'ತಕ್ಕ ಪ್ರತಿಫಲ' ಬರಬೇಕಾದರೆ ಇನ್ನು ಮೂರು ವರ್ಷಗಳಾದರೂ ಹಿಡಿಸಬಹುದು, ಅದೂ ಈ ಹೊಸ ಕಂಪನಿಯ ಚಂದಾದಾರರ ಸಂಖ್ಯೆ 7.5ರಿಂದ 8 ಕೋಟಿ ತಲುಪಿದರೆ ಮಾತ್ರ. ಮುಕೇಶ್ ಅಂಬಾನಿಯವರಿಗೆ ಮುಂದಿನ ವರ್ಷದ ಅಂತ್ಯದೊಳಗೆ 10 ಕೋಟಿ ಚಂದಾದದಾರರನ್ನು ಹೊಂದುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚಂದಾದಾರರು ಎಂದರೆ ಈ ಜಿಯೋ ಕಂಪನಿಗೆ ತಿಂಗಳಿಗೆ ಸುಮಾರು 200ರೂ.ಗಳಷ್ಟಾದರೂ ಮೊಬೈಲ್ ಬಿಲ್ ಪಾವತಿ ಮಾಡಬಲ್ಲವರು. ಇದು ಬಹುಪಾಲು ಭಾರತೀಯರ ಖರೀದಿ ಸಾಮರ್ಥ್ಯ ಹೆಚ್ಚಿಸುವ ಯೋಜನೆಗಳೇನೂ ಸರಕಾರದ ಬಳಿ ಇಲ್ಲದಿರುವ ಸನ್ನಿವೇಶದಲ್ಲಿ ಬಹಳ ದೂರದ ನಿರೀಕ್ಷೆ. ಆದ್ದರಿಂದಲೇ ಈ ಎಲ್ಲ ಮಾರ್ಕೆಟಿಂಗ್ ಕಸರತ್ತುಗಳು ಎನ್ನಲಾಗುತ್ತಿದೆ.

ಆದರೂ ಮೊಬೈಲ್ ಸೇವಾವಲಯದಲ್ಲಿ ಜಿಯೋ ಪ್ರವೇಶ ಭಾರೀ ಬದಲಾವಣೆ ತರುವುದಂತೂ ನಿಜ ಎನ್ನುತ್ತಾರೆ ಈ ವಲಯದ ಪರಿಣಿತ ಡಾ.ಪ್ರಬೀರ್ ಪುರಕಾಯಸ್ಥ. ಆದರೆ ಇದು ಸಾಮಾನ್ಯವಾಗಿ ಪ್ರಚಾರ ಮಾಡುತ್ತಿರುವಂತೆ ಕಡಿಮೆ ದರಕ್ಕೆ ಸಂಬಂಧಪಟ್ಟದ್ದಲ್ಲ. ಮೇಲೆ ಇದು ನಿಜವೂ ಅಲ್ಲ. ಪುರಕಾಯಸ್ಥ ಅವರ ಪ್ರಕಾರ ಇದು ಮಾಹಿತಿ(ಡಾಟ) ಮತ್ತು ದನಿ ಇವೆರಡೂ ಒಂದೇ ಎಂದು ಪರಿಗಣಿಸುವುದಕ್ಕೆ ಸಂಬಂಧಪಟ್ಟದ್ದು. ಇದುವರೆಗೆ ಇವರಡೂ ಬೇರೇ ಬೇರೆ ಎಂದು ಪರಿಗಣಿಸಿ ಬೇರೆ ಬೇರೆ ದರಗಳನ್ನು ವಿಧಿಸಿ ಭಾರೀ ಲಾಭ ಮಾಡಿಕೊಳ್ಳುತ್ತಿದ್ದರು. ಇದನ್ನು ಮುಂದೊಂದು ದಿನ ಕೈಬಿಡಬೇಕಾಗಿತ್ತು. ಆ ದಿನ ಮೊದಲೇ ಬಂದಂತಾಗಿದೆ ಎನ್ನುತ್ತಾರೆ ಅವರು.

ಇದುವರೆಗೆ ದನಿ ಕರೆಗೆ ಅಂದರೆ ಮಾತಾಡಲು ಮಾತ್ರ ಮೊಬೈಲ್ ಬಳಸುತ್ತಿರುವವರು ಮಾಹಿತಿ ರವಾನೆಗೆ ಹಣ ನೀಡಬೇಕಾಗಿರಲಿಲ್ಲ. ಇನ್ನು ಮುಂದೆ ಎಲ್ಲ ಕಂಪನಿಗಳೂ ದನಿಯನ್ನೂ ಮಾಹಿತಿ ಎಂದೇ ಪರಿಗಣಿಸ ಬೇಕಾಗಬಹುದು. ವಿಶೇಷ ಎಂದರೆ ಇತರ ಟೆಲಿಕಾಂ ಕಂಪನಿಗಳು ಮಾಹಿತಿ ರವಾನೆಯ ಮೂಲರಚನೆಗಳನ್ನು ಸಿದ್ಧಪಡಿಸಿಕೊಂಡಿಲ್ಲ, ಅಂಬಾನಿ ಅದನ್ನು ಸಿದ್ಧಪಡಿಸಿ ಕೊಂಡು ಮಾರುಕಟ್ಟೆಗೆ ಧುಮುಕಿದ್ದಾರೆ.

ಅಂದರೆ ಜಿಯೋ ಭಾರತೀಯ ಟೆಲಿಕಾಂ ಕ್ಷೇತ್ರಕ್ಕೆ ಒಂದು ವರವಾಗಿ ಬರುತ್ತಿದೆಯೇ? ಖಂಡಿತಾ ಇಲ್ಲ ಎನ್ನುತ್ತಾರೆ ಡಾ. ಪುರಕಾಯಸ್ಥ. ಈ ಹಿಂದೆ ಬಿಎಸ್‌ಎನ್‌ಎಲ್ ಮತ್ತು ಬಳಕೆದಾರರು ಮೊಬೈಲ್ ಕಂಪನಿಗಳ ದುಷ್ಟಕೂಟವನ್ನು ಮುರಿದಂತೆ ಈಗ ಅಂಬಾನಿಯ ರಿಲಯಂಸ್ ಇಂತಹ ಇನ್ನೊಂದು ದುಷ್ಟಕೂಟವನ್ನು ಮುರಿಯುತ್ತಿದೆ–ನಿಜ, ಸದ್ಯಕ್ಕೆ ತನ್ನ ಪ್ರಾಬಲ್ಯ ಜಮಾಯಿಸಲಿಕ್ಕೆ. ಆದರೆ ಈ ಪ್ರಕ್ರಿಯೆಯಲ್ಲಿ ಅದು ಕೆಲವು ಕಾನೂನುಗಳನ್ನೂ ಮುರಿದಿದೆ, ಅವುಗಳಲ್ಲಿ ಕೆಲವು ಕ್ರಿಮಿನಲ್ ಉಲ್ಲಂಘನೆಗಳು ಎನ್ನಲಾಗುತ್ತಿದೆ. ಸಣ್ಣ ಪ್ರಮಾಣದ ದಂಡಗಳನ್ನೂ ತೆತ್ತಿದೆ. ಆದರೆ ಒಟ್ಟಾರೆಯಾಗಿ ದೂರಸಂಪರ್ಕ ಇಲಾಖೆಯ ಆಶೀರ್ವಾದ ಹಸ್ತ ಹಲವು ವಿಧಗಳಲ್ಲಿ ಅದರ ತಲೆಯ ಮೇಲೆ ಸದಾ ಇದೆ ಎಂದು ಹೇಳಲಾಗಿದೆ.

ಮುಖ್ಯವಾಗಿ 4ಜಿ ತರಂಗಾಂತರವನ್ನು ಪಡೆಯುವುದರಲ್ಲೇ ಇದು ಕಾಣ ಬಂದಿದೆ. ಮುಕೇಶ್ ಅಂಬಾನಿ ಮತ್ತು ಅನಿಲ್ ಅಂಬಾನಿ ಸೇರಿಕೊಂಡು ಇನ್ಫೋಟೆಲ್ ಬ್ರಾಡ್ ಬ್ಯಾಂಡ್ ಸರ್ವಿಸ್ ಪ್ರೈ.ಲಿ. ಎಂಬ ಒಂದು ತೋರಿಕೆ ಕಂಪನಿ ರಚಿಸಿದರು. 2.5 ಕೋಟಿ ರೂ.ಗಳ ಈ ಕಂಪನಿ ಇದರ 5000 ಪಟ್ಟು ಮೌಲ್ಯದ, ಅಂದರೆ 12,847.77 ಕೋಟಿ ರೂ.ಗಳ ದೇಶದ ಎಲ್ಲ 22 ಟೆಲಿಕಾಂ ವಲಯಗಳಲ್ಲಿ 20 ಮೆಗಾಹರ್ಟ್ಸ್ ತರಂಗಾಂತರವನ್ನು ಪಡೆಯಿತು! ಈ ಕಂಪನಿ 4ಜಿ ಲೈಸೆನ್ಸ್ ಪಡೆದ ಮೇಲೆ ತೋರಿಕೆಯನ್ನೆಲ್ಲ ಬಿಟ್ಟು ರಿಲಯಂಸ್ ಕಂಪನಿ ಈ ಕಂಪನಿಯನ್ನು 'ವಹಿಸಿ'ಕೊಂಡು ಬಿಟ್ಟಿತು.

ಸಿಎಜಿ(ಮಹಾಲೆಕ್ಕ ಪರಿಶೋಧಕರು) ತಮ್ಮ ಮೇ ತಿಂಗಳ ವರದಿಯಲ್ಲಿ ರಿಲಯಂಸ್ ಜಿಯೋಗೆ 20,000 ಕೋಟಿ ರೂ.ಗಳಷ್ಟು ಅನರ್ಹ ಅನುಕೂಲ ಮಾಡಿಕೊಡಲಾಗಿದೆ ಎಂದು ಹೇಳಿದೆ. ದೂರಸಂಪರ್ಕ ಇಲಾಖೆಯಿಂದ ಇದಕ್ಕೆ ಸಮಜಾಯಿಷಿ ಬಂದಿದ್ದು ಸಿಎಜಿ ಮುಂದೇನು ಮಾಡುತ್ತದೆ ಎಂದು ಕಾದು ನೋಡಬೇಕಾಗಿದೆ. ಆದರೆ ಹರಾಜು ಕ್ರಿಯೆಯ ಸಂಪೂರ್ಣ ಉಲ್ಲಂಘನೆಯಾಗಿರುವ ಬಗ್ಗೆ ಯಾವುದೇ ಸಂದೇಹ ಉಳಿದಿಲ್ಲ ಎಂದು ಡಾ. ಪ್ರಬೀರ್ ಪುರಕಾಯಸ್ಥ ಹೇಳುತ್ತಾರೆ.

ಈ ಹಿಂದೆ 2ಜಿ ತರಂಗಾಂತರವನ್ನು ಪಡೆಯುವುದರಲ್ಲಿಯೂ ಇಂತಹುದೇ ಗೋಲ್‌ಮಾಲ್ ನಡೆದಿತ್ತು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.



ಸೆಪ್ಟಂಬರ್2ರ ಎರಡು ಇಂಗ್ಲಿಷ್ ದೈನಿಕಗಳಲ್ಲಿ ಮುಖಪುಟದ ಜಾಹೀರಾತಿನಲ್ಲಿ ರಿಲಯಂಸ್ ಜಿಯೊ ಕಂಪನಿ ದೇಶದ ಪ್ರಧಾನ ಮಂತ್ರಿಗಳ ಭಾವಚಿತ್ರ ಬಳಸಿದ್ದು ಬಹಳಷ್ಟು ಚರ್ಚೆಗೆ ಗ್ರಾಸವಾಗಿದೆ. 'ಲಾಂಛನಗಳು ಮತ್ತು ಹೆಸರುಗಳು(ಸೂಕ್ತವಲ್ಲದ ಬಳಕೆ ತಡೆ) ಕಾನೂನು, 1950' ರ ಪ್ರಕಾರ ಯಾವುದೇ ವ್ಯಾಪಾರ, ವ್ಯವಹಾರ, ವೃತ್ತಿಯ ಉದ್ದೇಶಕ್ಕೆ ಈ ಕಾಯ್ದೆಯ ಶೆಡ್ಯೂಲಿನಲ್ಲಿ ಪಟ್ಟಿಮಾಡಿದ ಯಾವುದೇ ಹೆಸರು ಅಥವ ಲಾಂಛನವನ್ನು ಕೇಂದ್ರ ಸರಕಾರ ವಿಧಿಸಬಹುದಾದ ಶರತ್ತುಗಳ ವಿನಹ ಬಳಸುವಂತಿಲ್ಲ. ಈ ಪಟ್ಟಿಯಲ್ಲಿನ ಹೆಸರುಗಳಲ್ಲಿ ಮಹಾತ್ಮ ಗಾಂಧಿ, ಜವಹರಲಾಲ್ ನೆಹರು, ಛತ್ರಪತಿ ಶಿವಾಜಿಯಲ್ಲದೆ ದೇಶದ ಪ್ರಧಾನ ಮಂತ್ರಿಗಳು ಎಂದೂ ಇದೆ.

ಒಂದು ಸಾಧ್ಯತೆಯೆಂದರೆ ಅಂಬಾನಿಯವರು ಕೇಂದ್ರ ಸರಕಾರದ ಅಥವ ಮೋದಿಯವರ ಅನುಮತಿ ಪಡೆದಿರಬಹುದು. ಸಹಜವಾಗಿ ಟ್ವಿಟರ್‌ಗಳಲ್ಲಿ ಈಬಗ್ಗೆ ಹಲವು ಟಿಪ್ಪಣಿಗಳು ಹರಿದಾಡಿವೆ. ಕೆಲವು ಉದಾಹರಣೆಗಳು ಇಲ್ಲಿವೆ.

* ಇಂದಿನ ಮುಖಪುಟದ ಜಾಹೀರಾತಿನಲ್ಲಿ ಮುಕೇಶ್ ಅಂಬಾನಿಯ ಫೋಟೋ ಮೋದೀಜೀಯವರೊಂದಿಗೆ ವಿಲಕ್ಷಣ ಸಾಮ್ಯತೆ ಹೊಂದಿದೆ.
* ಗುಜರಾತ್ ಮಾಡೆಲ್!
* ಸೆಲೆಬ್ರಿಟಿಗಳ ಅನುಮೋದನೆ ಇರುವ ಜಾಹೀರಾತುಗಳನ್ನು ಕುರಿತ ಕಾನೂನು ಪಾಸಾದರೆ, ಜಿಯೋ ಹೇಳಿಕೊಂಡ ಮಾಹಿತಿ ವೇಗವನ್ನು ಕಾಪಾಡಿಕೊಳ್ಳದಿದ್ದಲ್ಲಿ ಮೋದೀಜಿಯವರನ್ನು ಬಂಧಿಸಬಹುದೇನು?
* ಕಂಪನಿಗಳು ತಮ್ಮ ಜಾಹೀರಾತಿಗೆ ಪ್ರಧಾನ ಮಂತ್ರಿಗಳ ಫೋಟೋ ಬಳಸುವಂತಿಲ್ಲ, ಆದರೆ ತಮ್ಮ ನೌಕರರ ಫೋಟೋ ಬಳಸಲು ಅಡ್ಡಿಯಿಲ್ಲ!
* ರಾಬರ್ಟ್ ವಾಡ್ರ ತನ್ನ ಫ್ಲಾಟ್‌ಗಳನ್ನು ಅಥವ ಪ್ಲೋಟ್‌ಗಳನ್ನು ಮಾರಲು ತನ್ನ ಹಾಹೀರಾತಿನಲ್ಲಿ ಮನಮೋಹನ್‌ಸಿಂಗ್‌ರವರ ಫೋಟೋವನ್ನು ಬಳಸಿದರೆ ಹೇಗಿರುತ್ತದೆ, ಊಹಿಸಿಕೊಳ್ಳಿ.
* 18 ಕೋಟಿ ದುಡಿಮೆಗಾರರ ಪಡೆ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಹೋಗುವ ದಿನ ಮೋದಿಯವರು ಇಂದಿನ ಪೇಪರುಗಳಲ್ಲಿ ರಿಲಯಂಸ್ ಜಿಯೋವನ್ನು ಲಾಂಚ್ ಮಾಡಿದ್ದಾರೆ!!! ಆದ್ಯತೆಗಳು ಸ್ಪಷ್ಟ...

ಈ ನಡುವೆ, ಸಾಮಾನ್ಯವಾಗಿ ನೇರ ಮುಖಾಮುಖಿ ಸಂದರ್ಶನಗಳನ್ನು ಕೊಡದ ಪ್ರಧಾನ ಮಂತ್ರಿಗಳು ಅದೇ ದಿನ ಸಂಜೆ ಅದೇ ಅಂಬಾನಿಯವರ ಒಡೆತನದ ಟಿವಿ ವಾಹಿನಿ ನೆಟ್‌ವರ್ಕ್18ಗೆ ಒಂದು ಸಂದರ್ಶನವನ್ನು ಕೊಟ್ಟಿರುವುದು ಈ ಮುಖಪುಟದ ಜಾಹೀರಾತನ್ನು ಇನ್ನಷ್ಟು ಅಸಂಬದ್ಧಗೊಳಿಸಿದೆ ಎಂದು ಒಬ್ಬರು ಪತ್ರಕರ್ತರು ಟಿಪ್ಪಣಿ ಮಾಡಿದ್ದಾರೆ.

ಜಿಯೋ ದರ ನಿಜವಾಗಿಯೂ ಅಗ್ಗವಾಗಿದೆಯೇ?

ಸರಕಾರೀ ಒಡೆತನದ ಬಿಎಸ್‌ಎನ್‌ಎಲ್‌ನ 3ಜಿ ಮೊಬೈಲ್ ದರಗಳೊಂದಿಗೆ ಹೋಲಿಸಿ ನೋಡಿ


	ಜಿಯೊ	ಬಿಎಸ್‌ಎನ್‌ಎಲ್
ಒಂದು ದಿನದ ಛೋಟಾ ಪ್ಲಾನ್	ರೂ.19, 100ಎಂಬಿ	ರೂ.14, ,110 ಎಂಬಿ
ಸ್ವಲ್ಪ ದೊಡ್ಡ ಪ್ಲಾನ್	ರೂ.149, 300ಎಂಬಿ 28 ದಿನಗಳಿಗೆ	ರೂ.57, 250 ಎಂಬಿ 21 ದಿನಗಳಿಗೆ
ಮಾಸಿಕ ಪ್ಲಾನ್	ರೂ.499, 4 ಜಿಬಿ	ರೂ. 549, 10 ಜಿಬಿ
ವಿಶೇಷ ಪ್ಲಾನ್	ರೂ.999, 10 ಜಿಬಿ 28 ದಿನಗಳಿಗೆ	ರೂ.1099, ಮಿತಿಯಿಲ್ಲ 30 ದಿನಗಳಿಗೆ

ಇವಲ್ಲದೆ ಬಿಎಸ್‌ಎನ್‌ಎಲ್ 10ದಿನಗಳಿಗೆ ರೂ. 156ಕ್ಕೆ 2 ಜಿಬಿ ಡಾಟ ಕೊಡುತ್ತದೆ, ಇದನ್ನು 3 ಬಾರಿ ಹಾಕಿಸಿಕೊಂಡರೆ 30 ದಿನಕ್ಕೆ ರೂ. 468ಕ್ಕೆ 6 ಜಿಬಿ ಸಿಗುತ್ತದೆ. ಜಿಯೋ ಗೆ ಒಂದು ತಿಂಗಳು ಎಂದರೆ 28 ದಿನಗಳು, ಇಂತಹ ತಿಂಗಳ ಪ್ಲಾನ್‌ನಲ್ಲಿ ಮೇಲೆ ತೋರಿಸಸಿರುವಂತೆ ಅದು 499ರೂ.ಗೆ ಕೊಡುವುದು 4 ಜಿಬಿ ಮಾತ್ರ.

ಅದೇರೀತಿ ಜಿಯೋ ರೂ.4999ರ ಒಂದು ದೊಡ್ಡ ಪ್ಲಾನ್ ಕೂಡ ಹೊಂದಿದೆ. ಇದರಲ್ಲಿ ಮೂರು ತಿಂಗಳಲ್ಲಿ 75 ಜಿಬಿ ಡಾಟ ಸಿಗುತ್ತದೆ. ಇದಕ್ಕೆ ಹೋಲಿಸಿದರೆ ಬಿಎಸ್‌ಎನ್‌ಎಲ್‌ನ ಯಾವುದೇ ಮಿತಿಯಿಲ್ಲದ ರೂ.1099ರ ಮಾಸಿಕ ಪ್ಲಾನ್ ತಗೊಂಡರೆ ಕೇವಲ ರೂ. 3297ಗೆ ಮೂರು ತಿಂಗಳಲ್ಲಿ 75ಜಿಬಿ ಮಾತ್ರವೇ ಏಕೆ, ಯಾವುದೇ ಮಿತಿಯಿಲ್ಲದೆ ಬಳಸಿಕೊಳ್ಳಬಹುದು.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ



ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

ಕೇರಳ: ಎಲ್‌ಡಿಎಫ್ ಸರಕಾರದ ಮೊದಲ 100 ದಿನಗಳು
"ಜನತಾ ಪರ್ಯಾಯದ ಮೂಲಕ ರಾಜ್ಯದ ಅಭಿವೃದ್ಧಿಗೆ ಬುನಾದಿ"

ಕೇರಳದ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರಕಾರ ಮೊದಲ 100 ದಿನಗಳನ್ನು ಪೂರ್ಣಗೊಳಿಸಿದೆ. 100 ದಿನಗಳಲ್ಲಿ ಸರಕಾರದ ಕೆಲಸಗಳಿಂದಲೇ ಅದರ ಮೌಲ್ಯಮಾಪನ ಸರಿಯಲ್ಲವಾದರೂ, ಅದು ಯಾವ ದಿಕ್ಕಿನಲ್ಲಿ ಸಾಗಿದ ಎಂಬುದರ ಒಂದು ಅಂದಾಜಂತೂ ಸಿಗುತ್ತದೆ.

ಈ ಸಂದರ್ಭದಲ್ಲಿ ಮಾತಾಡುತ್ತ ಅಲ್ಲಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು "ನಮ್ಮದು ಇಮ್ಮುಖ ಕಾರ್ಯತಂತ್ರ: ಒಂದು ದೀರ್ಘಕಾಲೀನ ಯೋಜನೆಗಳ ಮೂಲಕ ಸಮಗ್ರ ಅಭಿವೃದ್ಧಿ ಮತ್ತು ಎರಡು, ವಂಚಿತ ವಿಭಾಗಗಳಿಗೆ ಪರಿಹಾರ ಒದಗಿಸುವ ಅಲ್ಪಾವಧಿ ಕ್ರಮಗಳು. ಒಂದು ಜನತಾ ಪರ್ಯಾಯವಿದೆ, ಅದರ ಗುರಿ ರಾಜ್ಯದ ಅಭಿವೃದ್ಧಿಗೆ ಬುನಾದಿ ಹಾಕುವುದು" ಎಂದು ಹೇಳಿದ್ದಾರೆ.

ಕೇರಳ ಮೂಲರಚನೆ ಹೂಡಿಕೆ ನಿಧಿ ಕಾಯ್ದೆಯ ತಿದ್ದುಪಡಿಯ ಮೂಲಕ ಈಗ ಬಜೆಟ್ ಹೊರಗೆ 50,000ಕೋಟಿ ರೂ.ಗಳನ್ನು ಸಂಗ್ರಹಿಸಬಹುದು. ಇದರಿಂದ 'ಕೇರಳ ಮೂಲರಚನೆ ಹೂಡಿಕೆ ನಿಧಿ ಮಂಡಳಿ'ಯ ಮೂಲಕ ರಾಜ್ಯದ ಒಟ್ಟು ಅಭಿವೃದ್ಧಿಗೆ ಮೂಲರಚನೆ ನಿರ್ಮಿಸಲು ಸಾಧ್ಯವಾಗುತ್ತದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಕೃಷಿ ಸ್ವಯಂಪೂರ್ಣತೆ ಮತ್ತು ಪರಿಸರ ರಕ್ಷಣೆ, ಸಾರ್ವಜನಿಕ ಸಂಸ್ಥೆಗಳನ್ನು ಬಲಪಡಿಸುವುದು, ಯುವಪೀಳಿಗೆಗೆ ಶಿಕ್ಷಣ, ಉದ್ಯೋಗ ಮತ್ತು ಹೂಡಿಕೆಗಳ ಅವಕಾಶಗಳು, ಪಾರಂಪರಿಕ ವಲಯದಲ್ಲಿರುವ ಎಲ್ಲರಿಗೂ ಸಾಮಾಜಿಕ ಭದ್ರತೆ, ಲಿಂಗ ಮತ್ತು ಸಾಮಾಜಿಕ ನ್ಯಾಯ ಸಿಗುವಂತೆ ಮಾಡುವುದು, ಒಂದು ಪ್ರಜಾಸತ್ತಾತ್ಮಕ ಜಾತ್ಯಾತೀತ ಸಮಾಜವನ್ನು ಪೋಷಿಸುವುದು ಹಾಗೂ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತವಿಲ್ಲದ ಒಂದು ಸಮಗ್ರ ಅಭಿವೃದ್ಧಿ ತಮ್ಮ ಸರಕಾರದ ಆದ್ಯತೆಗಳು ಎಂದು ಮುಖ್ಯಮಂತ್ರಿಗಳು ಹೇಳಿದರು.

ಮುಂದಿನ 5 ವರ್ಷಗಳಲ್ಲಿ ಭೂಮಿ ಮತ್ತು ಮನೆ ಇಲ್ಲದ 2ಲಕ್ಷ ಕುಟುಂಬಗಳಿಗೆ ವಸತಿಯನ್ನು ಕಲ್ಪಿಸುವ 'ಪ್ರಾಜೆಕ್ಟ್ ಲೈಫ್'(ಜೀವನಾಧಾರ, ಒಳಗೊಳ್ಳಿಕೆ ಮತ್ತು ಹಣಕಾಸು ಸಬಲೀಕರಣ) ನವಂಬರ್ 1ರಂದು(ಕೇರಳ



ರಾಜ್ಯ 60ವರ್ಷ ಪೂರ್ಣಗೊಳಿಸುವ ದಿನದಂದು) ಆರಂಭವಾಗುತ್ತದೆ ಎಂದು ಪ್ರಕಟಿಸಲಾಗಿದೆ. ಈ ವಸತಿ ಸಮೂಹಗಳಲ್ಲಿ ವಯಸ್ಸಾದವರಿಗೆ ಆರೋಗ್ಯಕೇಂದ್ರಗಳು, ಶಿಶುಪಾಲನಾ ಕೇಂದ್ರಗಳು, ಅಧ್ಯಯನ ಕೊಠಡಿಗಳು, ವಾಚನಾಲಯಗಳು, ಕಂಪ್ಯೂಟರ್ ಸೌಲಭ್ಯಗಳು ಮತ್ತು ಕೌಶಲ ಅಭಿವೃದ್ಧಿ ಕೇಂದ್ರಗಳು ಇರುತ್ತವೆ, ಮಹಿಳೆಯರು ನಡೆಸುವ ಕುಟುಂಬಗಳು ಮತ್ತು ವಯಸ್ಸಾದವರು, ಕಾಯಿಲೆಯವರು, 15ವರ್ಷದ ಕೆಳಗಿನ ವಿದ್ಯಾರ್ಥಿನಿಯರು, ಗಲಭೆಗಳು, ನೈಸರ್ಗಿಕ ದುರಂತಗಳು ಮತ್ತು ಗೃಹಹಿಂಸಾಚಾರದಿಂದ ಪೀಡಿತರಾದವರ ಕುಟುಂಬಗಳಿಗೆ ಆದ್ಯತೆ ಕೊಡಲಾಗುವುದು ಎಂದು ಪಿಣರಾಯಿ ವಿಜಯನ್ ಹೇಳಿದ್ದಾರೆ.

ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸುಧಾರಿಸುವುದು ಎಲ್‌ಡಿಎಫ್ ಸರಕಾರ ಎರಡನೇ ಪ್ರಮುಖ ಯೋಜನೆ. 1000 ಕೋಟಿ ರೂ.ಗಳ ಈ ಯೋಜನೆಯ ಅಡಿಯಲ್ಲಿ 1000 ಸಾರ್ವಜನಿಕ ಶಾಲೆಗಳನ್ನು ಅಂತರ್ರಾಷ್ಟ್ರೀಯ ಮಟ್ಟಕ್ಕೆ ಏರಿಸಲಾಗುವುದು, ಸರಕಾರೀ ಕಲಾ, ವಿಜ್ಞಾನ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸ್ತರಗಳನ್ನು ಏರಿಸಲು ಕೂಡ 500 ಕೋಟಿ ರೂ. ಕೊಡಲಾಗುವುದು ಎಂದು ಪ್ರಕಟಿಸಲಾಗಿದೆ.

ಮಹಿಳೆಯರಲ್ಲಿ ಎಷ್ಟರ ಮಟ್ಟಿಗೆ ಸುರಕ್ಷಿತತೆ-ಯ ಭಾವನೆ ಇದೆ ಎಂಬುದು ಒಂದು ಸಮಾಜದ ಸಂಸ್ಕೃತಿಯ ಪ್ರಮುಖ ಅಳತೆಗೋಲು ಎಂದು ಬಗೆದಿರುವ ಎಲ್‌ಡಿಎಫ್ ಸರಕಾರ ತನ್ನ ಆದ್ಯತೆಗಳಲ್ಲಿ ಈ ಸುರಕ್ಷಿತತೆಯ ಭಾವನೆ ಉಂಟು ಮಾಡುವುದನ್ನು ಗಂಭೀರವಾಗಿ ಎತ್ತಿಕೊಳ್ಳುತ್ತಿದೆ. ಪೆರುಂಬವೂರಿನಲ್ಲಿ ಕಾನೂನು ವಿದ್ಯಾರ್ಥಿನಿ ಜೀಶಾಳ ಮೇಲೆ ಅತ್ಯಾಚಾರ ನಡೆಸಿ ಕೊಲೆಮಾಡಿದಾತ ಪಲಾಯನಗೊಂಡಿದ್ದ. ಒಂದು ವೈಜ್ಞಾನಿಕ ತನಿಖೆಯ ಮೂಲಕ ಆತನನ್ನು ಬಂಧಿಸಲು ಈಗಾಲೇ ಸಾಧ್ಯವಾಗಿರುವುದು ಈ ಸುರಕ್ಷಿತತೆಯ ಭಾವನೆಯನ್ನು ಬಲಪಡಿಸಿದೆ. ಮಹಿಳೆಯರ ಸುರಕ್ಷಿತತೆಗೆ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯಲು ಎಲ್‌ಡಿಎಫ್ ಸರಕಾರ ನಿರ್ಧರಿಸಿದೆ. ಮತ್ತು ಪೋಲೀಸ್ ಇಲಾಖೆಯಲ್ಲಿ ಹೆಚ್ಚು ಮಹಿಳಾ ಅಧಿಕಾರಿಗಳ ನೇಮಕ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಅವರು ಪ್ರಕಟಿಸಿದ ಎಲ್‌ಡಿಎಫ್ ಸರಕಾರದ ಉಳಿದ ಯೋಜನೆಗಳು ಹೀಗಿವೆ:

* ಹಸಿರು ಕೇರಳ- ಕೇರಳದ ಎಲ್ಲ ಜಲಮೂಲಗಳಲ್ಲಿ, ಅಂದರೆ ಕೆರೆಗಳು, ಹೊಳೆಗಳು, ನದಿಗಳು,ಸರೋವರಗಳಲ್ಲಿ ಶೇಖರಗೊಂಡಿರುವ ಹೊಲಸುಗಳನ್ನು ನಿವಾರಿಸಿ ಶುದ್ಧಗೊಳಿಸುವ ಒಂದು ಸಮಗ್ರ ಯೋಜನೆ.
* ಹಸಿರಿನ ಮೂಲಕ ಸ್ವಚ್ಛತೆ-ಈ ಪ್ರಾಜೆಕ್ಟ್‌ನಲ್ಲಿ ಸ್ವಚ್ಛಗೊಳಿಸಿದ ಭೂಮಿಯನ್ನು ತರಕಾರಿಗಳು ಬೆಳೆಸುವ ಮೂಲಕ ಕೃಷಿಯಲ್ಲಿ ಸ್ವಾವಲಂಬನೆ.
* ಕೇಂದ್ರ ಸರಕಾರ ಮುಚ್ಚಿರುವ ಇನ್‌ಸ್ಟ್ರುಮೆಂಟೇಶನ್ ಲಿಮಿಟೆಡ್‌ನ ಪಾಲಕ್ಕಡ್ ಘಟಕ ಮತ್ತು ಫ್ಯಾಕ್ಟ್ ಯೂರಿಯಾ ಸ್ಥಾವರವನ್ನು ವಹಿಸಿಕೊಳ್ಳುವುದು.
* ರಾಷ್ಟ್ರೀಯ ಹೆದ್ದಾರಿಗಳನ್ನು ಮೂರು ವರ್ಷಗಳೊಳಗೆ 45 ಮೀಟರ್‌ಗೆ ಅಗಲಗೊಳಿಸುವುದು.
* ಈಗ ಬೀಳು ಬಿದ್ದಿರುವ ಭೂಮಿಗಳಲ್ಲಿ ಭತ್ತ ಸಾಗುವಳಿ
* ಶಿಕ್ಷಕರಿಗೆ ವಿವಿಧ ವಿಷಯಗಳ ಬೋಧನೆಯಲ್ಲಿ ಐಟಿ ತರಬೇತಿ
* ರಾಷ್ಟ್ರೀಯ ಜಲಸಾರಿಗೆಯ ವಿಸ್ತರಣೆ
* ಚಾವರ ಎಂಬಲ್ಲಿ ಕೆಎಂಎಂಎಲ್‌ನೊಂದಿಗೆ ಹೊಸ ಪ್ರಾಜೆಕ್ಟ್ ಮೂಲಕ 80,000 ಹೊಸ ಉದ್ಯೋಗಗಳು
* 15000 ಮಧ್ಯಮ ಮತ್ತು ಸಣ್ಣ ಮೈಕ್ರೊ ಉದ್ಯಮಗಳು
* ಎಲ್ಲ 14 ಜಿಲ್ಲೆಗಳಲ್ಲಿ ಬಹೂಪಯೋಗಿ ಇಂಡೋರ್ ಸ್ಟೇಡಿಯಂಗಳು
* ಬಿಪಿಎಲ್ ಕಾರ್ಡುದಾರರಿಗೆ 600 ಚದರಡಿಗಿಂತ ಸಣ್ಣ ಮನೆಗಳನ್ನು ಕಟ್ಟಿಕೊಳ್ಳಲು ಕಡಿತಗೊಳಿಸಿದ ದರಗಳಲ್ಲಿ ಸಿಮೆಂಟ್ ಮತ್ತು ಉಕ್ಕು
* ಎರಡೂವರೆ ಲಕ್ಷ ಹೈನು ರೈತರಿಗೆ ಮೇವು ಸಬ್ಸಿಡಿ
* 55 ಹೊಸ ಡೈರಿ ಸಹಕಾರಿಗಳು
* ಸಹಕಾರಿ ಬ್ಯಾಂಕುಗಳ ಆಧುನೀಕರಣ
* ಮಾರ್ಚ್2017ರ ಒಳಗೆ ರಾಜ್ಯದ 100ಶೇ. ವಿದ್ಯುದೀಕರಣ
* ಇದುವರೆಗೆ ಮಾವೆಲಿ ಸ್ಟೋರ್‌ಗಳು ಇಲ್ಲದ 34 ಪಂಚಾಯತುಗಳಲ್ಲಿ ಹೊಸ ಸ್ಟೋರ್‌ಗಳು
* 18 ಹೊಸ ಇಎಸ್‌ಐ ದವಾಖಾನೆಗಳು. ಮುನಿಸಿಪಲ್ ಮತ್ತು ನಗರಸಭಾ ಸಿಬ್ಬಂದಿಗೆ ಇಎಸ್‌ಐ ಸ್ಕೀಮ್
* 10 ಐಟಿಐಗಳು ಅಂತರ್ರಾಷ್ಟ್ರೀಯ ಮಟ್ಟಕ್ಕೆ
* ಎಲ್ಲ ಸರಕಾರೀ ಆರೋಗ್ಯ ವಿಮಾ ಯೋಜನೆಗಳನ್ನು ಒಂದುಗೂಡಿಸಿ ಪುಕ್ಕಟೆ ಆರೋಗ್ಯಪಾಲನೆ.

ರಾಜ್ಯಗಳ ಸುತ್ತ



ಭಾರತಿ ಗಾಂವ್ಕಾರ್

ಓಣಂ ಹಬ್ಬದಲ್ಲಿ ಬೆಲೆಯೇರಿಕೆ ತಡೆಯಲು 81 ಕೋಟಿ ರೂ.ಗಳ ಸಬ್ಸಿಡಿ

ಓಣಂ ಹಬ್ಬಕ್ಕೆ ಜನರಿಗೆ ಅಗತ್ಯ ಸಾಮಗ್ರಿಗಳು ಸುಲಭ ಬೆಲೆಗಳಲ್ಲಿ ಮತ್ತು ಸಬ್ಸಿಡಿ ದರಗಳಲ್ಲಿ ಲಭ್ಯವಾಗುವಂತೆ ಮಾಡಲು ಎಲ್‌ಡಿಎಫ್ ಸರಕಾರ 81.42 ಕೋಟಿ ರೂ.ಗಳನ್ನು ಸರಕಾರೀ ಒಡೆತನದ ಪೂರೈಕೆ ಸಂಸ್ಥೆ ಸಪ್ಲೈಕೊಗೆ ಬಿಡುಗಡೆ ಮಾಡಿದೆ. ಈ ಬಜೆಟ್‌ನಲ್ಲಿ ಇಂತಹ ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ ಬೆಲೆಯೇರಿಕೆಯನ್ನು ತಡೆಯುವ ಕ್ರಮಗಳಿಗೆಂದು 150 ಕೋಟಿ ರೂ. ಮೀಸಲಿಡಲಾಗಿತ್ತು. ಅದರಲ್ಲಿ 81.42 ಕೋಟಿ ರೂ.ಗಳನ್ನು ಈಗಲೇ ಬಿಡುಗಡೆ ಮಾಡಲಾಗಿದೆ.

ಆಂಧ್ರಪ್ರದೇಶದಲ್ಲಿ ಪರಿಸರದ್ರೋಹಿ ಉದ್ದಿಮೆಯ ಸ್ಥಾಪನೆಯ ವಿರುದ್ಧ ತೀವ್ರ ಪ್ರತಿಭಟನೆ

ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಥೊಂಡಂಗಿ ಮಂಡಲದಲ್ಲಿ 'ದಿವಿಸ್ ಲ್ಯಾಬ್ಸ್' ಎಂಬ ಉದ್ದಿಮೆಯನ್ನು ತೆರೆಯುವುದರ ವಿರುದ್ಧ ಸಾರ್ವಜನಿಕ ಪ್ರತಿಭಟನೆಗಳು ನಡೆಯುತ್ತಿವೆ. ಸರಕಾರ ಇದರ ಖಾಸಗಿ ಮಾಲಕರಿಗೆ 400 ಎಕ್ರೆ ಜಾಗವನ್ನು ಸ್ಥಳೀಯರೊಂದಿಗೆ ಸಮಾಲೋಚಿಸದೆ ನೀಡಿದೆ. ಜನವಸತಿಯಿರುವ ಹಳ್ಳಿಗಳ ಪಕ್ಕದಲ್ಲಿ ಈ ಉದ್ದಿಮೆಯ ಸ್ಥಾಪನೆಯಿಂದ ಪರಿಸರಕ್ಕೆ ಬಹಳ ನಷ್ಟವಾಗಲಿದೆ ಎಂಬುದು ಇಲ್ಲಿ ಜನಗಳ ಆಕ್ರೋಶ. ಈ ಬಗ್ಗೆ ಸಾರ್ವಜನಿಕ ಸಭೆಯನ್ನು ನಡೆಸಿದ್ದಕ್ಕೆ ಆಂಧ್ರಪ್ರದೇಶ ಸರಕಾರ ಸಂಘಟಕರನ್ನು ಬಂಧಿಸಿದೆ. ಇತರ ಪ್ರತಿಭಟನಾಕಾರರೊಂದಿಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ಮಧು ಅವರನ್ನೂ ಬಂಧಿಸಲಾಗಿದೆ. ಆದರೆ ಈ ಹೋರಾಟ ನಿಂತಿಲ್ಲ. ಸುತ್ತಮುತ್ತಲಿನ ಹಳ್ಳಿಗಳ ಜನರು ಇದರಲ್ಲಿ ಭಾಗವಹಿಸುತ್ತಿದ್ದಾರೆ.





ತ್ರಿಪುರಾದಲ್ಲಿ ಸಾಮರಸ್ಯ ಕೆಡಿಸುವ ಶಕ್ತಿಗಳ ವಿರುದ್ಧ ಬೃಹತ್ ಶಾಂತಿ ರ್‍ಯಾಲಿ

ಆಗಸ್ಟ್ 23ರಂದು ತ್ರಿಪುರಾದ ರಾಜಧಾನಿ ಅಗರ್ತಲಾದಲ್ಲಿ ಐಪಿಎಫ್‌ಟಿ ರ್‍ಯಾಲಿಯ ಸಂದರ್ಭದಲ್ಲಿ ನಡೆದ ಹಿಂಸಾಚಾರ ರಾಜ್ಯದಲ್ಲಿ ಬಹಳ ಕಾಲದಿಂದ ಇರುವ ಬುಡಕಟ್ಟು ಜನರು ಮತ್ತು ಇತರ ಸಮುದಾಯಗಳ ನಡುವಿನ ಐಕ್ಯತೆಯನ್ನು ಮುರಿಯುವ ಅಪಾಯದ ಮುನ್ಸೂಚನೆ ನೀಡಿತ್ತು. ಇದರ ವಿರುದ್ಧ ಜನತೆಯನ್ನು ಎಚ್ಚರಿಸಿ ರಾಜ್ಯದಲ್ಲಿನ ಸಾಮರಸ್ಯದ ವಾತಾವರಣವನ್ನು ರಕ್ಷಿಸಿಕೊಳ್ಳಲು ಎಡರಂಗ ಆಗಸ್ಟ್ 28ರಂದು ಶಾಂತಿ ರ್‍ಯಾಲಿಗೆ ಕರೆ ನೀಡಿತ್ತು.

ಇದಕ್ಕೆ ಅಂದು ಭಾರಿ ಸ್ಪಂದನೆ ದೊರೆತಿದೆ. ಸಾವಿರಾರು ಜನ ಭಾಗವಹಿಸಿದ ಈ ರ್‍ಯಾಲಿಯಲ್ಲಿ ಬಂಗಾಲಿ ಮತ್ತು ಬುಡಕಟ್ಟು ಭಾಷೆಯಾದ ಕೊಕ್‌ಬೊರೊಕ್‌ನಲ್ಲಿ ಐಕ್ಯತೆ, ಸಾಮರಸ್ಯ ಮತ್ತು ಶಾಂತಿಯನ್ನು ರಕ್ಷಿಸಿಕೊಳ್ಳುವ ಘೋಷಣೆಗಳು ಮೊಳಗಿದವು.

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಗೌತಮ್ ದೇಬ್ ಮತ್ತು ಎಡಪಕ್ಷಗಳ ರಾಜ್ಯ ಮುಖಂಡರ ನೇತೃತ್ವದಲ್ಲಿ ನಡೆದ ಈ ಬೃಹತ್ ರ್‍ಯಾಲಿಯಲ್ಲಿ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರಲ್ಲದೆ ಇಂಜಿನಿಯರುಗಳು, ಡಾಕ್ಟರುಗಳು, ವಕೀಲರು, ಲೇಖಕರು, ಕಲಾವಿದರು ಕೂಡ ಗಮನಾರ್ಹ ಸಂಖ್ಯೆಯಲ್ಲಿ ಭಾಗವಹಿಸಿದರು.

ಬ್ರೆಜಿಲಿನಲ್ಲಿ ಬಲಪಂಥೀಯ ಕ್ಷಿಪ್ರಕ್ರಾಂತಿ



ಶರತ್‌ಚಂದ್ರ

ಬ್ರೆಜಿಲಿನಲ್ಲಿ ಕೊನೆಗೂ ಆಳುವ ವರ್ಗಗಳು ಮತ್ತು ಬಲಪಂಥೀಯ ಶಕ್ತಿಗಳು ಚುನಾವಣೆಯ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಸಾಧಿಸಲಾಗದ್ದನ್ನು ವಿಕೃತ ಕಾನೂನು ಕ್ರಮಗಳ ಮೂಲಕ ಸಾಧಿಸಿದ್ದಾರೆ. ಎರಡನೇ ಬಾರಿಗೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ದಿಲಮಾ ರೂಸೆಫ್ ಅವರನ್ನು ದೋಷಾರೋಪಣೆ ಪ್ರಕ್ರಿಯೆ ಮೂಲಕ ಪದಚ್ಯುತಿಗೊಳಿಸಿದ್ದಾರೆ. ಆ ಮೂಲಕ 13 ವರ್ಷಗಳ ವರ್ಕರ್ಸ್ ಪಾರ್ಟಿಯ ಎಡಪಂಥೀಯ ಸರಕಾರವನ್ನು ಅ-ಪ್ರಜಾಸತ್ತಾತ್ಮಕ ವಿಧಾನವನ್ನು ಬಳಸಿ ಉರುಳಿಸಿದ್ದಾರೆ. ದಿಲ್ಮಾ ಅವರ ವಿರುದ್ಧ ಜುಲೈನಲ್ಲಿ ತರಲಾಗಿದ್ದ ಬೊಗಳೆ 'ಭ್ರಷ್ಟಾಚಾರದ ದೋಷಾರೋಪಣೆ'ಯ ಬೋಗಸ್ 'ತನಿಖೆ'ಯ ನಂತರ ಸೆನೆಟ್ 61–ಪರ 20–ವಿರುದ್ಧ ಮತಗಳಿಂದ ಮೂರನೇ ಎರಡಕ್ಕಿಂತ ಹೆಚ್ಚು ಮತಗಳಿಂದ ಅವರನ್ನು ಪದಚ್ಯುತಗೊಳಿಸಲಾಗಿದೆ. ಆದರೆ ಅವರನ್ನು ಮುಂದಿನ 8 ವರ್ಷಗಳ ಕಾಲ ಚುನಾವಣೆ ಸ್ಪರ್ಧಿಸುವುದನ್ನು ನಿಷೇಧಿಸುವ ಇನ್ನೊಂದು ನಿರ್ಣಯಕ್ಕೆ 42–ಪರ 36–ವಿರೋಧ (ಮತ್ತು 3 ತಟಸ್ಥ) ಮತ ಬಿದ್ದು ಅಗತ್ಯ ಬಹುಮತ ಸಿಗದೆ ಬಿದ್ದು ಹೋಯಿತು. ದಿಲ್ಮಾ ರಾಜಕೀಯದಲ್ಲಿ ಮುಂದುವರೆಯಬಹುದು.

ದೋಷಾರೋಪಣೆಯ ನಿರ್ಣಯ ಮಂಜೂರಾದರೆ ತನ್ನಿಂತಾನೇ ಅವರನ್ನು 8 ವರ್ಷಗಳ ಕಾಲ ರಾಜಕಾರಣದಿಂದ ನಿಷೇಧಿಸಲಾಗುವುದು ಎಂಬ ವಿರೋಧ ಪಕ್ಷಗಳ ಪ್ರಸ್ತಾವವನ್ನು ವರ್ಕರ್ಸ್ ಪಾರ್ಟಿಯ ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಿತ್ತು. ಸುಪ್ರೀಂ ಕೋರ್ಟಿನ ತೀರ್ಪಿನಂತೆ ಈ ಎರಡು ವಿಷಯಗಳ ಬಗ್ಗೆ ಸೆನೆಟ್ ಎರಡು ಪ್ರತ್ಯೇಕ ಮತದಾನಗಳ ಮೂಲಕ ನಿರ್ಧರಿಸಿತ್ತು. ಆದ-ರೆ ಬ್ರೆಜಿಲ್ ಸಂವಿಧಾನ–ಕಾನೂನುಗಳ (ಅಥವಾ ಅವುಗಳ ಈಗಿನ ಬಳಕೆಯ) ವಿಚಿತ್ರವೆಂದರೆ ಈಗಿನ ಸಂವಿಧಾನದ ಪ್ರಕಾರ ದಿಲ್ಮಾ ಪದಚ್ಯುತಿಯ ನಂತರ ಉಳಿದ ಅವಧಿಗೆ 2018ರವರೆಗೆ ಅಧ್ಯಕ್ಷರಾಗಲಿರುವ ಮಿಖೈಲ್ ಟೆಮೆರ್ ಪೆಟ್ರೊಬ್ರಾಸ್ ಭ್ರಷ್ಟಾಚಾರ ಹಗರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾಗಿ ಮುಂದಿನ 8 ವರ್ಷಗಳ ಕಾಲ ಚುನಾವಣೆಯಲ್ಲಿ



ಸ್ಪರ್ಧಿಸುವುದರಿಂದ ನಿಷೇಧಿಸಲ್ಪಟ್ಟಿದ್ದಾರೆ!

ಪದಚ್ಯುತಿಯ ಅಂತಿಮ ನಿರ್ಣಯದ ನಂತರ ದಿಲ್ಮಾ ಭ್ರಷ್ಟಾಚಾರದ ಆಪಾದನೆಯನ್ನು ತಳ್ಳಿ ಹಾಕಿ ರಾಜಕೀಯ ಹೋರಾಟವನ್ನು ಮುಂದುವರೆಸುವುದಾಗಿ ಘೋಷಿಸಿದರು. ತಮ್ಮ ಎರಡು ಅಧಿಕಾರಾವಧಿಗಳಲ್ಲಿ ಬಡತನ ಮತ್ತು ಅಸಮಾನತೆಯ ವಿರುದ್ಧ ಆರಂಭಿಸಿದ ಹೋರಾಟ ಮುಂದುವರೆಸುವುದಾಗಿಯೂ, ಈಗ ನಡೆದಿರುವುದು ಪಕ್ಷಪಾತದ ಸ್ತ್ರೀದ್ವೇಷದ ಬಲಪಂಥೀಯ ಕ್ಷಿಪ್ರಕ್ರಾಂತಿ ಎಂದೂ ಹೇಳಿದ್ದಾರೆ. 'ನಾವು ಮತ್ತೆ ಬರುತ್ತೇವೆ. ಜನ ಸಾರ್ವಭೌಮರಾಗಿರುವ ಬ್ರೆಜಿಲಿನತ್ತ ನಮ್ಮ ಪಯಣ ಮುಂದುವರೆಸುತ್ತೇವೆ' ಎಂದಿದ್ದಾರೆ. ದಿಲ್ಮಾ ವಿರುದ್ಧ ಬಲಪಂಥೀಯ ಪಿತೂರಿಗಳನ್ನು ಕ್ಷಿಪ್ರಕ್ರಾಂತಿ ಎಂದು ಜರೆದು ಲಕ್ಷಾಂತರ ಬ್ರೆಜಿಲಿಯನ್ನರು ಕಳೆದ ಕೆಲವು ತಿಂಗಳುಗಳಲ್ಲಿ ಭಾರೀ ಸಂಖ್ಯೆಯಲ್ಲಿ ಬೀದಿಗಿಳಿದಿದ್ದಾರೆ. ಟ್ರೇಡ್ ಯೂನಿಯನ್‌ಗಳು, ಸಾಮಾಜಿಕ ಚಳುವಳಿಗಳು, ಆಫ್ರೋ–ಬ್ರೆಜಿಲಿಯನ್, ಯುವಜನ ಸಂಘಟನೆಗಳ ಕಾರ್ಯಕರ್ತರು ಹಲವು ಬಾರಿ 'ನಾವು ಐದುವರೆ ಕೋಟಿ ದಿಲ್ಮಾಗಳು' ಎಂಬ ಘೋಷಣೆಯೊಂದಿಗೆ ಅವರನ್ನು ಬೆಂಬಲಿಸಿದ್ದರು. ಜನಾದೇಶವಿಲ್ಲದ ಹೊಸ ಸರಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಒಂದು ಸಮೀಕ್ಷೆಯ ಪ್ರಕಾರ ಶೇ. 60 ಬ್ರೆಜಿಲಿಯನ್ನರು ತಕ್ಷಣವೇ ಚುನಾವಣೆ ನಡೆಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಭ್ರಷ್ಟಾಚಾರಕ್ಕೆ ಕುಪ್ರಸಿದ್ಧ ಹೊಸ ಅಧ್ಯಕ್ಷನ 'ಪ್ರಸಿದ್ಧಿ' ಎಷ್ಟಿದೆಯೆಂದರೆ ಆತ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಲು ಎದ್ದು ನಿಂತಾಗ ಆತನ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ಈಗ ಚುನಾವಣೆ ನಡೆದರೆ ದಿಲ್ಮಾ ಪುನಃ ಅಧ್ಯಕ್ಷರಾಗಿ ಚುನಾಯಿತರಾಗುವಷ್ಟು ಅವರು ಜನಪ್ರಿಯರಾಗಿದ್ದಾರೆ ಎನ್ನಲಾಗಿದೆ.

ದಿಲ್ಮಾ ಅವರ ವಿರುದ್ಧ 2014 ಚುನಾವಣೆಯ ಮೊದಲಿನ ಬಜೆಟ್ ಆರ್ಥಿಕ ಉತ್ತಮವಾಗಿದೆ ಎಂದು ತೋರಿಸುವಂತೆ ಅಂಕೆ ಸಂಖ್ಯೆಗಳ 'ಕಸರತ್ತು' ಮಾಡಲಾಗಿತ್ತು. ಸರಕಾರದ ಹಲವು ಜನಪ್ರಿಯ ಯೋಜನೆಗಳಿಗೆ ಇಂತಹ ಕಸರತ್ತು ನಡೆಸಿ ಹಣ ಒದಗಿಸಲಾಗಿತ್ತು ಎಂಬುದು 'ದೋಷಾರೋಪಣೆ'. ಬಜೆಟ್ (ಅದರಲ್ಲೂ ಚುನಾವಣಾ ಪೂರ್ವ) 'ಚೆನ್ನಾಗಿ ಕಾಣುವಂತೆ' ಅಂಕೆ ಸಂಖ್ಯೆಗಳ 'ಕಸರತ್ತು' ನಡೆಸುವುದು ಜಗತ್ತಿನ ಎಲ್ಲೆಡೆಯಂತೆ ಬ್ರೆಜಿಲಿನಲ್ಲೂ ಮಾಮೂಲಿ. ಈ ಕಸರತ್ತುಗಳ ಮೂಲಕ ದಿಲ್ಮಾ ತಮಗೆ ಅಥವಾ ತಮ್ಮವರೆಗೆ ಯಾರಿಗಾದರೂ 'ಲಾಭ' ಮಾಡಿಕೊಂಡಿಲ್ಲ ಎಂಬುದು ಆಪಾದನೆಯಲ್ಲಿಯೂ ಇರಲಿಲ್ಲ. ಇದು 'ಭ್ರಷ್ಟಾಚಾರ' ವಂತೂ ಖಂಡಿತ ಅಲ್ಲ. ವಿಚಿತ್ರವೆಂದರೆ ದಿಲ್ಮಾ ಮಾಡಿದ್ದು 'ಭ್ರಷ್ಟಾಚಾರ' ಅಂತ ತೀರ್ಮಾನಿಸಿದ ಪಾರ್ಲಿಮೆಂಟಿನ ಸದಸ್ಯರಲ್ಲಿ ಶೆ. 60 ಪೆಟ್ರೊಬಾಸ ಮುಂತಾದ ಹಗರಣಗಳಲ್ಲಿ ಭ್ರಷ್ಟಾಚಾರ ಆಪಾದಿತರು.

ಬಲಪಂಥೀಯ ಆಕ್ರಮಣಕ್ಕೆ ನಿಜವಾದ ಕಾರಣವೇ ಬೇರೆ. ವರ್ಕರ್ಸ್ ಪಾರ್ಟಿಯ 13 ವರ್ಷಗಳ ಆಡಳಿತ 3 ಕೊಟಿ ಬ್ರೆಜಿಲಿಯನ್ನರನ್ನು ಬಡತನದಿಂದ ಹೊರ ತಂದಿದ್ದು ಅಲ್ಲದೆ ಹಲವು ಜನ–ಪರ ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿತ್ತು. ಇದು ಬ್ರೆಜಿಲಿನಲ್ಲಿ ಕೊನೆಗೂ ಆಳುವ ವರ್ಗಗಳು ಮತ್ತು ಅವರ ಪ್ರತಿನಿಧಿಗಳನ್ನು ಕುದ್ರಗೊಳಿಸಿತ್ತು. ಪೆಟ್ರೊಬ್ರಾಸ್ ಭ್ರಷ್ಟಾಚಾರ ಹಗರಣದ ತನಿಖೆಯನ್ನು ಮುತುವರ್ಜಿಯಿಂದ ಮಾಡುತ್ತಿದ್ದ ದಿಲ್ಮಾ ಸರಕಾರದ ಕ್ರಮಗಳು ಅವರಲ್ಲಿ ದಿಗಿಲು ಮೂಡಿಸಿದ್ದವು. ಬಲಪಂಥೀಯ ರಾಜಕೀಯ ಶಕ್ತಿಗಳು ಸತತ 3 ಚುನಾವಣೆಗಳಲ್ಲಿ ಪರಾಭವದಿಂದ ಹತಾಶರಾಗಿದ್ದರು. ಹೇಗಾದರೂ ಮಾಡಿ ವರ್ಕರ್ಸ್ ಪಾರ್ಟಿಯ ಎಡಪಂಥೀಯ ಸರಕಾರವನ್ನು ಏನ ಕೇನ ಪ್ರಕಾ-ರೇಣ ಉರುಳಿಸಬೇಕೆಂದು ಮಸಲತ್ತು ಮಾಡಿದ್ದರು. ಅದರ ಫಲವೇ ಅಧ್ಯಕ್ಷರ ಮೇಲೆ ತರಲಾದ ಬೊಗಳೆ ಭ್ರಷ್ಟಾಚಾರದ ದೋಷಾರೋಪಣೆ.

ದಿಲ್ಮಾ ಅವರ ಪದಚ್ಯುತಿ ಬ್ರೆಜಿಲಿನಲ್ಲಿ ಮಾತ್ರವಲ್ಲ, ಇಡೀ ಲ್ಯಾಟಿನ್ ಅಮೆರಿಕದ ಎಡ ಪಂಥೀಯ ಶಕ್ತಿಗಳಿಗೆ ದೊಡ್ಡ ಹಿನ್ನಡೆ. ಆದರೆ ಬ್ರೆಜಿಲಿನ ಹೊಸ ಸರಕಾರಕ್ಕಾಗಲಿ ಬಲಪಂಥೀಯ ಶಕ್ತಿಗಳಿಗಾಗಲಿ ಆಡಳಿತ ನಡೆಸುವುದು ಸುಲಭದ ಮಾತಲ್ಲ. ಬಲಪಂಥೀಯ ಆಕ್ರಮಣ ಎಡಪಂಥೀಯ ಶಕ್ತಿಗಳ ಐಕ್ಯತೆ ಮತ್ತು ಅವರನ್ನು ದೃಢವಾಗಿ ಎದುರಿಸುವ ಸಂಕಲ್ಪವನ್ನು ಅಷ್ಟೇ ಗಟ್ಟಿ ಮಾಡಿದೆ. ಎಡ ಪಂಥೀಯ ಶಕ್ತಿಗಳು ಅಧ್ಯಕ್ಷ ಸ್ಥಾನ ಗೆಲ್ಲಲು ಸಾಧ್ಯವಾದರೂ ಪಾರ್ಲಿಮೆಂಟಿನಲ್ಲಿ ಬಹುಮತ ಗಳಿಸಲು ಈವರೆಗೆ ಸಾಧ್ಯವಾಗಿರಲಿಲ್ಲ. ಈ ನ್ಯೂನತೆಯನ್ನು ಬಳಸಿಯೇ ಬಲಪಂಥೀಯ ಶಕ್ತಿಗಳು ಈ 'ಕ್ಷಿಪ್ರಕ್ರಾಂತಿ'ಯನ್ನು ಮಾಡಲು ಸಾಧ್ಯವಾಗಿದ್ದು. ತೈಲ ಬೆಲೆಯ ಕುಸಿತದ ಸವಾಲು ಹಾಗೂ ಒಲಿಂಪಿಕ್ಸ್ ಆಟಗಳ ನಿರ್ವಹಣೆಯಲ್ಲಿ ದಿಲ್ಮಾ ಸರಕಾರ ಹಲವು ತಪ್ಪುಗಳನ್ನು ಮಾಡಿತ್ತು. ನವ–ಉದಾರವಾದಿ ನೀತಿಗಳಿಗೆ ಸ್ಪಷ್ಟ ಬದಲಿ ಜನಪರ ನೀತಿಗಳನ್ನು ರೂಪಿಸಿ ಜನರನ್ನು ಅದರ ಸುತ್ತ ಅಣಿ ನೆರೆಸುವುದರಲ್ಲೂ ವರ್ಕರ್ಸ್ ಪಾರ್ಟಿ ಮತ್ತು ಇತರ ಎಡ ಶಕ್ತಿಗಳಲ್ಲಿ ಗಮನಾರ್ಹ ನ್ಯೂನತೆಗಳು ಇದ್ದವು. ಈ ನ್ಯೂನತೆಗಳನ್ನು ಪರಿಹರಿಸಿ ಬಲಪಂಥೀಯ 'ಕ್ಷಿಪ್ರಕ್ರಾಂತಿ'ಯನ್ನು ವಿಫಲಗೊಳಿಸುವತ್ತ ಹಿಮ್ಮೆಟ್ಟಿಸುವತ್ತ ಎಡ ಶಕ್ತಿಗಳು ಮುಂದಾಗುವ ಆಶಾದಾಯಕ ಸೂಚನೆಗಳು ಇವೆ. ●

ಕೊಲಂಬಿಯಾ : ಚಾರಿತ್ರಿಕ ಶಾಂತಿ ಒಪ್ಪಂದ



ಕೊಲಂಬಿಯಾ ಸರಕಾರ ಮತ್ತು ಪ್ರಮುಖ ಎಡಪಂಥೀಯ ಗೆರಿಲ್ಲಾ ಸಂಘಟನೆ ಎಫ್.ಎ.ಆರ್.ಸಿ. (ಕೊಲಂಬಿಯಾ ಕ್ರಾಂತಿಕಾರಿ ಸಶಸ್ತ್ರ ಪಡೆ)ಗಳ ನಡುವೆ ಇತ್ತೀಚೆಗೆ (ಜೂನ್ 23ರಂದು) ಕ್ಯೂಬಾ ರಾಜಧಾನಿ ಹವಾನಾದಲ್ಲಿ ಚಾರಿತ್ರಿಕ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದಕ್ಕೆ ಕೊಲಂಬಿಯಾದ ಅಧ್ಯಕ್ಷ ಸಾಂಟೋಸ್ ಮತ್ತು ಎಫ್.ಆರ್.ಎ.ಸಿ. ನಾಯಕ ಟಿಮೊಚೆಂಕೊ ಸಹಿ ಹಾಕಿದರು. ಇದ-ರಿಂದ ಲ್ಯಾಟಿನ್ ಅಮೆರಿಕದಲ್ಲೇ ಅತ್ಯಂತ ದೀರ್ಘ ಕಾಲದಿಂದ ನಡೆಯುತ್ತಿರುವ ಆಂತರಿಕ ಸಂಘರ್ಷದ ಶಾಂತಿಯುತ ಕೊನೆಯಾಗುವ ಲಕ್ಷಣಗಳಿವೆ. ಈ ಆಂತರಿಕ ಸಂಘರ್ಷ ಸುಮಾರು 52 ವರ್ಷಗಳಿಂದ ನಡೆಯುತ್ತಿದ್ದು 2.2 ಲಕ್ಷ ಜನರನ್ನು ಬಲಿ ತೆಗೆದು-ಕೊಂಡಿದೆ. ಲಕ್ಷಾಂತರ ಜನ ನಿರಾಶ್ರಿತರಾಗಿದ್ದಾರೆ. ಈ ಒಪ್ಪಂದದ ಸಹಿ ಹಾಕುವ ಸಮಾರಂಭಕ್ಕೆ ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಬನ್–ಕಿ–ಮೂನ್, ವೆನೆಜುವೇಲಾ, ಚಿಲಿಯ ಅಧ್ಯಕ್ಷರುಗಳು ಹಾಗೂ ಅಮೆರಿಕದ ಉನ್ನತ ವಿದೇಶ ಅಧಿಕಾರಿ ಹಾಜರಿದ್ದರು ಎಂಬುದು ಇದರ ಚಾರಿತ್ರಿಕ ಮಹತ್ವ ಸೂಚಿಸುತ್ತದೆ. ಕ್ಯೂಬಾ ಮತ್ತು ನಾರ್ವೆ ಈ ಒಪ್ಪಂದದ ಗ್ಯಾರಂಟಿ ಮಾಡುವ ಕೆಲಸ ಮಾಡಲಿದ್ದಾರೆ. ಸಾವಿರಾರು ಕೊಲಂಬಿಯನ್ನರು ರಾಜಧಾನಿ ಬೊಗೊಟಾದಲ್ಲಿ ಬೀದಿಗಳಿಗೆ ಧಾವಿಸಿ ಶಾಂತಿ ಒಪ್ಪಂದ ವನ್ನು ಸ್ವಾಗತಿಸಿದರು.

ವೆನೆಜುವೇಲಾದ ಅಧ್ಯಕ್ಷ ಚವೇಜ್ 2012ರಲ್ಲಿ ಎಫ್.ಎ.ಆರ್.ಸಿ. ಶಾಂತಿ ಮಾತುಕತೆಯಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈಗಿನ ಅಧ್ಯಕ್ಷ ಸ್ಯಾಂಟೋಸ್ ಇಂತಹ ಶಾಂತಿ ಒಪ್ಪಂದ ತರುವ ಭರವಸೆ ಮೇಲೆ ಕಳೆದ ಚುನಾವಣೆ ಗೆದ್ದಿದ್ದರು. ಶಾಂತಿ ಒಪ್ಪಂದವನ್ನು ಬಲವಾಗಿ ವಿರೋಧಿಸಿದ ಹಿಂದಿನ ಅಧ್ಯಕ್ಷ ಉರಿಬೆ ಬೆಂಬಲಿಸಿದ ಅಭ್ಯರ್ಥಿಯನ್ನು ಅವರು ಸೋಲಿಸಿದ್ದರು.

ಕೊಲಂಬಿಯಾದ ಬಲಪಂಥಿಯ ಸರಕಾರ ಮಿಲಿಟರಿ ಮತ್ತು ಬಲಪಂಥಿಯ ಕ್ರಿಮಿನಲ್ ಗ್ಯಾಂಗುಗಳನ್ನು ಬಳಸಿ ಎಡಪಂಥೀಯ ಗೆರಿಲ್ಲಾಗಳ ಬೇಟೆಯಾಡುತ್ತಿತ್ತು. ಎಡಪಂಥೀಯ ಗೆರಿಲ್ಲಾಗಳ ಮೇಲೆ ದಾಳಿಯ ಹೆಸರಲ್ಲಿ ರೈತ–ಆದಿವಾಸಿಗಳ ಮಾನವ ಹಕ್ಕುಗಳ ಸತತ ದಮನ ನಡೆಯುತ್ತಿತ್ತು. ಎಫ್.ಎ.ಆರ್.ಸಿ. 1964ರಲ್ಲಿ ಕೊಲಂಬಿಯಾ ಕಮ್ಯುನಿಸ್ಟ್ ಪಕ್ಷದ ಸಶಸ್ತ್ರ ವಿಭಾಗವಾಗಿ ಸ್ಥಾಪಿತವಾಗಿತ್ತು. ಬಲಪಂಥಿಯ ಕ್ರಿಮಿನಲ್ ಗ್ಯಾಂಗುಗಳು ಕೊಕೇನ್ ಮಾದಕ ದ್ರವ್ಯದ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ್ದು ತಮ್ಮೊಳಗೆ ಸಹ ಸಶಸ್ತ್ರ ಕಲಹದಲ್ಲಿ ತೊಡಗಿದ್ದವು. ಕೊಕೇನ್ ಮಾದಕ ದ್ರವ್ಯ ಹೆಚ್ಚಾಗಿ ಅಮೆರಿಕಕ್ಕೆ ಸಾಗಾಣಿಕೆಯಾಗುತ್ತಿದ್ದು ಅಲ್ಲಿನ ಡ್ರಗ್ ಮಾಫಿಯಾಗಳೂ ಕೊಲಂಬಿಯಾದಲ್ಲಿ ತಮ್ಮ ಪ್ರಭಾವ ಹೊಂದಿದ್ದವು. ಎಫ್.ಎ.ಆರ್.ಸಿ.ಯನ್ನು ಮಟ್ಟ ಹಾಕಲು ಅಮೆರಿಕನ್ ಸರಕಾರ 'ಪ್ಲಾನ್ ಕೊಲಂಬಿಯಾ' ಹೆಸರಲ್ಲಿ ಒಂದು ಕಡೆ ಸೈನ್ಯವನ್ನೂ ಇನ್ನೊಂದು ಕಡೆ ಬಲಪಂಥೀಯ ಗ್ಯಾಂಗುಗಳನ್ನು ಹಣ–ಶಸ್ತ್ರ ಪೂರೈಕೆ ಮತ್ತು ತರಬೇತಿ ಮೂಲಕ ಬಳಸುತ್ತಿತ್ತು. ಕೊಲಂಬಿಯಾ ಜಗತ್ತಿನಲ್ಲೇ ಅತ್ಯಂತ ಕೆಟ್ಟ ಮಾನವ ಹಕ್ಕುಗಳ ದಮನ ರೆಕಾರ್ಡು ಇರುವ ದೇಶ. ಹಿಂದೆ ಒಂದು ಬಾರಿ 1985ರಲ್ಲಿ ಸರಕಾರ ಹಾಗೂ ಎಫ್.ಎ.ಆರ್.ಸಿ. ಮುಂತಾದ ಎಡ ಗೆರಿಲ್ಲಾ ಪಡೆಗಳ ನಡುವೆ ಇಂತಹುದೇ ಶಾಂತಿ ಒಪ್ಪಂದ ಆಗಿತ್ತು. ಆದರೆ ಎಡ ಶಕ್ತಿಗಳು ರಾಜಕೀಯ ಮುಖ್ಯವಾಹಿನಿಯನ್ನು ಸೇರುವ ಪಯತ್ನವನ್ನು ಕೊಲಂಬಿಯಾದ ಆಳುವ ವರ್ಗಗಳು ಹೊಸಕಿ ಹಾಕಿದ್ದವು. ಎಡ ಶಕ್ತಿಗಳು ಸಂಘಟಿಸಿದ ರಾಜಕೀಯ ಪಕ್ಷದ ಸಾವಿರಕ್ಕೂ ಹೆಚ್ಚು ನಾಯಕರು ಮತ್ತು ಕಾರ್ಯಕರ್ತರನ್ನು ಕೊಲೆ ಮಾಡಲಾಗಿತ್ತು. ಹಿಂಸಾತ್ಮಕ ಆಕ್ರಮಣಗಳ ಮೂಲಕ ಬೆದರಿಸಲಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಚರಿತ್ರೆ ಪುನರಾವರ್ತನೆಯಾಗುವುದಿಲ್ಲ ಎಂದು ಸರಕಾರ ಭರವಸೆ ನೀಡಿದೆ. ಎಫ್.ಆರ್.ಎ.ಸಿ. ಗೆರಿಲ್ಲಾಗಳು ಒಪ್ಪಂದದ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿರುವ 8 ಕ್ಯಾಂಪು ನೆಲೆಗಳಿಗೆ ಮತ್ತು 23 ವಿಭಾಗಗಳಿಗೆ ಸ್ಥಳಾಂತರಗೊಳ್ಳುತ್ತಾರೆ. ಆರು ತಿಂಗಳುಗಳೊಳಗೆ ವಿಶ್ವಸಂಸ್ಥೆಯ ವೀಕ್ಷಕರಿಗೆ ಗೆರಿಲ್ಲಾಗಳು ತಮ್ಮ ಅಸ್ತ್ರಗಳನ್ನು ಹಸ್ತಾಂತರಿಸುತ್ತಾರೆ. ಆ ಮೇಲೆ ಎಫ್.ಆರ್.ಎ.ಸಿ.ಒಂದು ರಾಜಕೀಯ ಪಕ್ಷವಾಗಲು ಸರಕಾರ ಎಲ್ಲಾ ಅವಕಾಶಗಳನ್ನು ಮಾಡಿಕೊಡಲಿದೆ.

ಕೊಲಂಬಿಯಾದ ಈ ದೀರ್ಘ ಆಂತರಿಕ ಸಂಘರ್ಷದಲ್ಲಿ ಹಲವು ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಗಳು ಆಗಿವೆ. ಒಪ್ಪಂದದ ಪ್ರಕಾರ ಇವೆಲ್ಲವನ್ನು ತನಿಖೆ ನಡೆಸುವ 'ಶಾಂತಿ ಕೋರ್ಟು' ಸಹ ಸ್ಥಾಪಿತವಾಗಲಿದೆ. ತಮ್ಮ ಮಾನವ ಹಕ್ಕುಗಳ ಉಲ್ಲಂಘನೆ ಒಪ್ಪಿಕೊಳ್ಳುವವರು 7 ವರ್ಷಗಳ ವರೆಗೆ 'ಸಮುದಾಯ ಸೇವೆ' ಮಾಡುತ್ತಾರೆ. ಉಳಿದವರ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಗಳ ತನಿಖೆಯನ್ನು ಕೋರ್ಟು ತನಿಖೆ ಮಾಡಲಿದೆ. ಸೈನ್ಯದ ಸಿಬ್ಬಂದಿಗಳೂ ಈ ಕೋರ್ಟಿನ ವ್ಯಾಪ್ತಿಗೆ ಬರುತ್ತಾರೆ. ●

ನಮ್ಮ ಚುರು-ಟ್ವೀಟ್

@CMOKerala

ಕೇರಳದ ಎಲ್ಲಾ 1,53,825 ಆದಿವಾಸಿ ಕುಟುಂಬಗಳಿಗೆ ಓಣಂ ಕಿಟ್ ಮತ್ತು ಬಟ್ಟೆಗಳನ್ನು ಕೊಡಲಾಗುವುದು. ಓಣಂ ಕಿಟ್ ನಲ್ಲಿ ಅಕ್ಕಿ, ಎಣ್ಣೆ, ಸಕ್ಕರೆ, ಉಪ್ಪು ಮತ್ತು ಬೇಳೆ ಇರುತ್ತದೆ

– ಕೇರಳ ಮುಖ್ಯಮಂತ್ರಿ ಕಚೇರಿ

ಅಡುಗೆ ಕೇಂದ್ರದ ಮುಖಾಂತರ ಬಿಸಿಯೂಟ ತಯಾರಿಸುವುದನ್ನು ವಿರೋಧಿಸಿ ಪ್ರತಿಭಟನೆ

ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ರಾಜ್ಯ ಸರಕಾರವು ಪ್ರಸ್ತಾಪಿಸಿರುವ ಬದಲಾವಣೆಗಳಿಂದಾಗಿ ಪ್ರತಿಯೊಂದೂ ಶಾಲೆಯಲ್ಲೂ ಬಿಸಿಯೂಟದ ಅಡುಗೆ ಕೇಂದ್ರಗಳಿರುವ ಬದಲು ಹಲವು ಶಾಲೆಗಳನ್ನು ಸಂಯೋಜಿಸಿ ಕೇಂದ್ರೀಕೃತ ಅಡುಗೆ ಕೇಂದ್ರವನ್ನು ಪ್ರಾರಂಭಿಸಲಾಗುವುದು. ಇದರ ಪರಿಣಾಮವಾಗಿ ವಾಹನ ಸಾಗಾಟದ ಮೂಲಕ ಶಾಲಾ ಮಕ್ಕಳಿಗೆ ಆಹಾರ ತಲುಪುವಲ್ಲಿ ವಿಳಂಬವಾಗುವುದು; ಈಗಿರುವ ಶಾಲಾ ಕೇಂದ್ರಗಳ ಬಿಸಿಯೂಟ ನೌಕರರು ಇರುವ ಅರೆಕಾಲಿಕ ಉದ್ಯೋಗವನ್ನೂ ಕಳೆದು ಕೊಳ್ಳುವರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ತನ್ವೀರ ಸೇಠ್‌ರವರು ರಾಜ್ಯದಲ್ಲಿ ಕೇಂದ್ರಿಕೃತ ಅಡುಗೆ ಕೇಂದ್ರಗಳನ್ನು ನಿರ್ಮಿಸಿ ಶಿಕ್ಷಕರ ಮೇಲಿನ ಹೊರೆಯನ್ನು ತಗ್ಗಿಸಲಾಗುವುದೆಂದು ತಿಳಿಸಿದ್ದಾರೆ. ಈ ರೀತಿಯ ಯೋಚನೆ ಮತ್ತು ಹೇಳಿಕೆಯನ್ನು ಖಂಡಿಸಿ ಸೆಪ್ಟಂಬರ್ 3ರಂದು ರಾಜ್ಯದ ವಿವಿದೆಡೆ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘಟನೆ ವತಿಯಿಂದ ಪ್ರತಿಭಟನೆಗಳು ನಡೆದಿದೆ.

ದಕ್ಷಿಣ ಕನ್ನಡ ಜಿಲ್ಲೆ ಡಿಡಿಪಿಐ ಕಚೇರಿ ಮುಂಭಾಗ ನಡೆದ ಬಿಸಿಯೂಟ ನೌಕರರ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ಜಿಲ್ಲಾ ಅದ-ಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ ಅವರು "ಕರ್ನಾಟಕದಲ್ಲಿ 10 ವರ್ಷಗಳಿಂದಿಚೆಗೆ ಸರ್ಕಾರಿ ಶಾಲೆಗಳಲ್ಲಿ ಒಳ್ಳೆಯ ಫಲಿತಾಂಶ ಮತ್ತು ಮಕ್ಕಳ ಹಾಜರಾತಿ ಹೆಚ್ಚಾಗುತ್ತಿದೆ. ಇಂತಹ ಫಲಿತಾಂಶ ಬರಲು ಪ್ರಮುಖ ಕಾರಣಗಳಲ್ಲಿ ಬಿಸಿಯೂಟವು ಒಂದು. ಶಾಲಾ ಹಂತದಲ್ಲಿ ಮಕ್ಕಳ ನಡುವೆ ಜಾತಿ ತಾರತಮ್ಯ ನೀಗಿಸಲು ಮತ್ತು ಸಹಪಂಕ್ತಿ ಭೋಜನಗಳಿಂದ ಮಕ್ಕಳಲ್ಲಿ ಸಾಮರಸ್ಯತೆಯನ್ನು ಬೆಳೆಸಲು ಸಾಧ್ಯವಾಗಿದೆ ಇಂತಹ ಪರಿಣಾಮಕಾರಿ ಫಲಿತಾಂಶಕ್ಕೆ ಕಾರಣರಾದವರು ಬಿಸಿಯೂಟ ನೌಕರರು. ಬಿಸಿಯೂಟ ನೌಕರರು ಬದುಕುಳಿಯುವ ಕೂಲಿ ಮತ್ತಿತರ ಕನಿಷ್ಟ ಸೌಲಭ್ಯಗಳಿಗಾಗಿ ಸರ್ಕಾರದ ಎದುರು ಹಲವು ಭಾರಿ ಮನವಿ ಪತ್ರಗಳನ್ನು ಸಲ್ಲಿಸಿದೆ. 2004ರಲ್ಲಿ ಸುಪ್ರೀಂಕೋರ್ಟ್ ಅಡುಗೆ ತಯಾರಿಸುವ ಬಗ್ಗೆ ನೀಡಿರುವ ಮಾರ್ಗದರ್ಶನದ ಪ್ರಕಾರ ಆಗತಾನೆ ಅಡುಗೆ ಬೇಯಿಸಿ ಬಿಸಿ ಬಿಸಿ ಯಾದ ತಾಜಾ ಆಹಾರವಾಗಿ ನೀಡಬೇಕು. ಸರ್ಕಾರ ಕೆಲವೊಂದು ಬೇಡಿಕೆಗಳನ್ನು ಈಡೇರಿಸುವ ಬದಲಿಗೆ ಬಿಸಿಯೂಟ ನೌಕರರನ್ನು ಕೆಲಸದಿಂದ ತೆಗೆಯಲು ಪ್ರಯತ್ನಿಸುತ್ತಿದೆ ಎಂದು ಅವರು ಆರೋಪಿಸಿದರು.



ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್, ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿ, ಜಿಲ್ಲಾ ಮುಂದಾಳು ರಾಮಣ್ಣ ವಿಟ್ಲ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷರಾದ ಪದ್ಮಾವತಿ ಶೆಟ್ಟಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಸಂಘದ ಪ್ರಧಾನ ಕಾರ್ಯದರ್ಶಿ ಗಿರಿಜಾ ಮೂಡಬಿದ್ರಿ, ಖಜಾಂಚಿ ಭವ್ಯ, ಮುಂದಾಳುಗಳಾದ ಶಾಂತ, ಅರುಣ, ಅಂಬಿಕಾ, ಗಿರಿಜಾ, ಯಶೋಧ, ರೇಖಾಲತ, ತುಳಸಿ, ಜಯಂತಿ, ಸಂಧ್ಯಾ, ಸಿದ್ದವ್ವ, ಉಮಾವತಿ, ಜಲಜಾಕ್ಷಿಯವರು ವಹಿಸಿದ್ದರು. ಪ್ರಾರಂಭದಲ್ಲಿ ಗಿರಿಜಾ ಮೂಡಬಿದ್ರಿ ಸ್ವಾಗತಿಸಿ, ಕೊನೆಯಲ್ಲಿ ಭವ್ಯಾರವರು ಧನ್ಯವಾದವನ್ನು ನೀಡಿದರು.

ಹಾಸನದ ಜಿಲ್ಲಾ ಪಂಚಾಯತಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದ ನೌಕರರು ಸಚಿವರಾದ ತನ್ವೀರ್ ಸೇಠ್ ರವರಿಗೆ ಮನವಿ ಸಲ್ಲಿಸಿದರು. ಅರಸಿಕೆರೆಯಲ್ಲಿ ಅಹೋರಾತ್ರಿ ಧರಣಿ ನಡೆಸಿದರು. ಅದೇ ರೀತಿಯಲ್ಲಿ ಚನ್ನರಾಯಪಟ್ಟಣ, ಮಂಡ್ಯದಲ್ಲೂ ಸಹ ಪ್ರತಿಭಟನೆಗಳು ನಡೆದಿದೆ.


ಹಾಸನ


ಚನ್ನರಾಯ ಪಟ್ಟಣ


ಮಂಗಳೂರು


ಅರಸಿಕೆರೆ


ಅರಸಿಕೆರೆ

ಉದಾರೀಕರಣ ನೀತಿಗೆ ಬಲಿಯಾಗುತ್ತಿದೆ ಬಿಎಸ್‌ಎನ್‌ಎಲ್

ಕರ್ನಾಟಕ ರಾಜ್ಯ ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಫೆಡರೇಶನ್ ದ.ಕ ಮತ್ತು ಉಡುಪಿ ಜಿಲ್ಲೆಗಳ ವತಿಯಿಂದ ವಿವಿಧ ಬೇಡಿಕೆಗಳಿಗೆ ಅಗ್ರಹಿಸಿದ ಮಂಗಳೂರು ಬಿಎಸ್‌ಎನ್‌ಎಲ್ ಪ್ರಧಾನ ಕಛೇರಿ ಎದುರು ಸೆಪ್ಟಂಬರ್ 8ರಂದು ಪ್ರತಿಭಟನೆ ನಡೆಸಿದರು.

ಫೆಡರೇಶನ್ ದ.ಕ ಜಿಲ್ಲಾ ಸಮಿತಿ ಅಧ್ಯಕ್ಷ ವಸಂತ ಆಚಾರಿರವರು ಮಾತನಾಡಿ "ಸರಕಾರವು ಖಾಸಗೀಕರಣ ಮಾಡಲು ಮುಂದಾಗುತ್ತಿದ್ದು, ಬಿಎಸ್‌ಎನ್‌ಎಲ್ ಸೇವೆಗೆ ಗುತ್ತಿಗೆ ಕಾರ್ಮಿಕರ ನೇಮಕಾತಿಗೊಳಿಸಿ ಶೋಷಣೆಗೆ ಒಳಪಡಿಸಲಾಗುತ್ತಿದೆ. ಕಾರ್ಮಿಕರು ತಮಗಾದ ಅನ್ಯಾಯದ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಬೇಕಾದ ಪರಿಸ್ಥಿತಿ ಬಂದಿರುವುದು ದುರ್ದೈವದ ಸಂಗತಿ. ಸಂಘಟಿತ ಹೋರಾಟದ ಮೂಲಕ ಶೋಷಣೆಗೆ ತಕ್ಕ ಉತ್ತರ ನೀಡಲಾಗುವುದು ಎಂದರು.


ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರು ದೇಶದಲ್ಲಿ ಕಾರ್ಮಿಕರಿಗೆ ರಕ್ಷಣೆಯಿಲ್ಲ. ದುಡಿಯುವ ಬಹುಸಂಖ್ಯಾತರು ಈ ದೇಶದ ಬೆನ್ನೆಲುಬು. ದೇಶದ ಯಜಮಾನರು. ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುವ ನೀಚ ಆಡಳಿತ ನಡೆಸುವ ಸರಕಾರಗಳು ಇವೆ. ಇದಕ್ಕೆಲ್ಲ ಹೋರಾಟವೇ ತಕ್ಕ ಶಾಸ್ತ್ರಿ ಎಂದರು.

ಪ್ರತಿಭಟನೆಯ ಮುಂಚಿತವಾಗಿ ನಗರದ ಎ.ಬಿ. ಸರ್ಕಲ್‌ನಿಂದ ಸಂಸ್ಥೆಯ ಪ್ರಧಾನ ಕಛೇರಿ ತನಕ ಮೆರವಣಿಗೆ ನಡೆಸಿದರು. ಪ್ರತಿಭಟನಾ ಸಭೆ ಬಳಿಕ ಕಾರ್ಮಿಕರ ಬೇಡಿಕೆಗಳಿರುವ ಪಟ್ಟಿಯನ್ನು ಬಿಎಸ್‌ಎನ್‌ಎಲ್ ಮಹಾಪ್ರಬಂಧಕ ಜಿ.ಆರ್.ರವಿ ಅವರಿಗೆ ನೀಡಲಾಯಿತು. ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಬಗೆ ಹರಿಸುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ, ಸುಳ್ಯ ಸಮಿತಿಯ ಉದಯ ಕುಮಾರ್ ಕೈಲ, ನಿತ್ಯಾನಂದ, ದೇವಿಪ್ರಸಾದ್, ಬೆಳ್ತಂಗಡಿ ಸಮಿತಿಯ ಅಧ್ಯಕ್ಷ ದಿನೇಶ್ ಮುಂಡಾಜೆ, ಪುತ್ತೂರು ಸಮಿತಿಯ ಅಧ್ಯ ಕ್ಷ ದುಗ್ಗಪ್ಪ, ಕಾರ್ಯದರ್ಶಿ ಗಿರಿಯಪ್ಪ, ಬಂಟ್ವಾಳ ತಾಲೂಕು ಸಮಿತಿಯ ಅಧ್ಯಕ್ಷ ಮಹಮ್ಮದ್ ಹನೀಫ್, ಕಾರ್ಯದರ್ಶಿ ಸುನಿಲ್, ಮಂಗಳೂರು ಸಮಿತಿಯ ರಮೇಶ್ ಕದ್ರಿ, ಪುಷ್ಪಾವತಿ, ಹೇಮಚಂದ್ರ ಸೇರಿದಂತೆ 200ಕ್ಕೂ ಅಧಿಕ ಸಂಖ್ಯೆಯಲ್ಲಿ ಕಾರ್ಮಿಕರು ಪಾಲ್ಗೊಂಡಿದ್ದರು.



ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**